ಮಂಗಳವಾರ, ಮೇ 7, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 127 | ಪುಟ 14
www.prajavani.net
prajavani.net | prajavani | prajavani | prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ ಮಾನಸಿಕವಾಗಿ ದೃಢವಾಗಿದ್ದರೆ ಎಂಥ ಅನಾರೋಗ್ಯವನ್ನಾದರೂ ಎದುರಿಸಬಹುದು



ಆಳ–ಅಗಲ ಅತಿ ಅಪಾಯಕಾರಿ ಸ್ಥಿತಿಯಲ್ಲಿ ಭಾರತದ ಮಾಧ್ಯಮ ಸ್ವಾತಂತ್ರ್ಯ

ಕವಿತಾ ಜಾಮೀನು ಅರ್ಜಿ ವಜಾ 11

ಕೇಜ್ರಿವಾಲ್ ವಿರುದ್ಧ ಎನ್‌ಐಎ ತನಿಖೆ? 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,895	22,442	₹73,750 (ಬೆಂಗಳೂರು)	₹83,300 (ಬೆಂಗಳೂರು)	83.52

ಮತ; ಉತ್ತರ ಚರಿತ


ದೇಶ–ನಾಡಿನ ಭವಿಷ್ಯ ರೂಪಿಸುವ ಲೋಕಸಭೆಯ ಎರಡನೇ ಹಂತದ ಮತದಾನಕ್ಕೆ ಅರ್ಧ ರಾಜ್ಯ ಸಜ್ಜಾಗಿದೆ. ರಾಜ್ಯದ 14 ಕ್ಷೇತ್ರ ಒಳಗೊಂಡಂತೆ ದೇಶದ 93 ಕ್ಷೇತ್ರಗಳಲ್ಲಿ ಮಂಗಳವಾರ ಮತದಾನ ನಡೆಯಲಿದೆ. ಮತದಾರರ ಬರುವಿಕೆಗೆ ಮತಗಟ್ಟೆಗಳು ಅಣಿಗೊಂಡಿದ್ದು, ಬಿರುಬಿಸಿಲ ನಡುವೆಯೂ ಮತದಾರರು ತಮ್ಮ ಕರ್ತವ್ಯ ಪ್ರಜ್ಞೆ ಮೆರೆಯುತ್ತಾರೆಂಬ ನಿರೀಕ್ಷೆ ಬಲಗೊಂಡಿದೆ. ಕರಾವಳಿ, ಮಲೆನಾಡು, ಮಧ್ಯ, ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕದ 14 ಕ್ಷೇತ್ರಗಳಲ್ಲಿ ಬಿಜೆಪಿ–ಕಾಂಗ್ರೆಸ್ ಮಧ್ಯೆಯೇ ನೇರ ಹಣಾಹಣಿ ಇದೆ. ಶಿವಮೊಗ್ಗ ಮತ್ತು ದಾವಣಗೆರೆಯಲ್ಲಿ ಪಕ್ಷೇತರ ಅಭ್ಯರ್ಥಿ ಪೈಪೋಟಿ ನೀಡುತ್ತಿದ್ದು, ತ್ರಿಕೋನ ಸ್ಪರ್ಧೆಯ ವಾತಾವರಣ ಇದೆ.

2019ರಲ್ಲಿ ಎಲ್ಲ 14 ಕ್ಷೇತ್ರಗಳಲ್ಲಿ ಬಿಜೆಪಿ ಜಯ ಗಳಿಸಿತ್ತು

ಇಂದು ಮತದಾನ ಸಮಯ: ಬೆಳಿಗ್ಗೆ 7ರಿಂದ ಸಂಜೆ 6

14	2.59 ಕೋಟಿ	1.29 ಕೋಟಿ	1.29 ಕೋಟಿ	1,945
ಕ್ಷೇತ್ರಗಳು	ಒಟ್ಟು ಮತದಾರರು	ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು

ವಿಧಾನಸಭಾ ಕ್ಷೇತ್ರಗಳ ಬಲಾಬಲ: ಬಿಜೆಪಿ | ಕಾಂಗ್ರೆಸ್ | ಜೆಡಿಎಸ್ | ಪಕ್ಷೇತರ



1 **ಕಲಬುರಗಿ**
- ಡಾ. ಉಮೇಶ ಜಾಧವ (ಬಿಜೆಪಿ)
- ರಾಧಾಕೃಷ್ಣ ದೊಡ್ಡಮನಿ (ಕಾಂಗ್ರೆಸ್)
ಕಾಂಗ್ರೆಸ್ 6, ಬಿಜೆಪಿ 1, ಜೆಡಿಎಸ್ 1

2 **ವಿಜಯಪುರ (ಎಸ್‌ಸಿ)**
- ರಮೇಶ ಜಿಗಜಿಣಗಿ (ಬಿಜೆಪಿ)
- ರಾಜು ಆಲಗೂರ (ಕಾಂಗ್ರೆಸ್)
ಕಾಂಗ್ರೆಸ್ 6, ಬಿಜೆಪಿ 1, ಜೆಡಿಎಸ್ 1

3 **ಚಿಕ್ಕೋಡಿ**
- ಅಣ್ಣಾಸಾಹೇಬ ಜೊಲ್ಲೆ (ಬಿಜೆಪಿ)
- ಪ್ರಿಯಾಂಕಾ ಜಾರಕಿಹೊಳಿ (ಕಾಂಗ್ರೆಸ್)
ಬಿಜೆಪಿ 3, ಕಾಂಗ್ರೆಸ್ 5

4 **ಬೆಳಗಾವಿ**
- ಜಗದೀಶ ಶೆಟ್ಟರ್ (ಬಿಜೆಪಿ)
- ಮೃಣಾಲ್ ಹೆಬ್ಬಾಳಕರ (ಕಾಂಗ್ರೆಸ್)
ಬಿಜೆಪಿ 3, ಕಾಂಗ್ರೆಸ್ 5

5 **ಬಾಗಲಕೋಟೆ**
- ಪಿ.ಸಿ. ಗದ್ದಿಗೌಡರ (ಬಿಜೆಪಿ)
- ಸಂಯುಕ್ತಾ ಪಾಟೀಲ (ಕಾಂಗ್ರೆಸ್)
ಕಾಂಗ್ರೆಸ್ 5, ಬಿಜೆಪಿ 3

6 **ಧಾರವಾಡ**
- ಪ್ರಲ್ಹಾದ ಜೋಶಿ (ಬಿಜೆಪಿ)
- ವಿನೋದ ಕೆ.ಅಸೂಟಿ (ಕಾಂಗ್ರೆಸ್)
ಬಿಜೆಪಿ 4, ಕಾಂಗ್ರೆಸ್ 4

7 **ಉತ್ತರ ಕನ್ನಡ**
- ವಿಶ್ವೇಶ್ವರ ಹೆಗಡೆ ಕಾಗೇರಿ (ಬಿಜೆಪಿ)
- ಡಾ.ಅಂಜಲಿ ನಿಂಬಾಳ್ಕರ್ (ಕಾಂಗ್ರೆಸ್)
ಬಿಜೆಪಿ 3, ಕಾಂಗ್ರೆಸ್ 5

8 **ಶಿವಮೊಗ್ಗ**
- ಬಿ.ವೈ. ರಾಘವೇಂದ್ರ (ಬಿಜೆಪಿ)
- ಗೀತಾ ಶಿವರಾಜ್‌ಕುಮಾರ್ (ಕಾಂಗ್ರೆಸ್)
- ಕೆ.ಎಸ್.ಈಶ್ವರಪ್ಪ (ಪಕ್ಷೇತರ)
ಬಿಜೆಪಿ 4, ಕಾಂಗ್ರೆಸ್ 3, ಜೆಡಿಎಸ್ 1

9 **ಹಾವೇರಿ**
- ಬಸವರಾಜ ಬೊಮ್ಮಾಯಿ (ಬಿಜೆಪಿ)
- ಆನಂದಸ್ವಾಮಿ ಗಡ್ಡದೇವರಮಠ (ಕಾಂಗ್ರೆಸ್)
ಕಾಂಗ್ರೆಸ್ 7, ಬಿಜೆಪಿ 1

10 **ದಾವಣಗೆರೆ**
- ಗಾಯತ್ರಿ ಸಿದ್ದೇಶ್ವರ (ಬಿಜೆಪಿ)
- ಪ್ರಭಾ ಮಲ್ಲಿಕಾರ್ಜುನ (ಕಾಂಗ್ರೆಸ್)
- ಜಿ.ಬಿ.ವಿನಯ್‌ಕುಮಾರ್ (ಪಕ್ಷೇತರ)
ಬಿಜೆಪಿ 1, ಕಾಂಗ್ರೆಸ್ 6, ಪಕ್ಷೇತರ 1

11 **ಬಳ್ಳಾರಿ**
- ಬಿ. ಶ್ರೀರಾಮುಲು (ಬಿಜೆಪಿ)
- ಈ. ತುಕಾರಾಂ (ಕಾಂಗ್ರೆಸ್)
ಕಾಂಗ್ರೆಸ್ 6, ಬಿಜೆಪಿ 1, ಜೆಡಿಎಸ್ 1

12 **ಕೊಪ್ಪಳ**
- ಡಾ. ಬಸವರಾಜ ಕ್ಯಾವಟರ್ (ಬಿಜೆಪಿ)
- ಕೆ. ರಾಜಶೇಖರ ಹಿಟ್ನಾಳ (ಕಾಂಗ್ರೆಸ್)
ಬಿಜೆಪಿ 2, ಕಾಂಗ್ರೆಸ್ 6

13 **ರಾಯಚೂರು (ಎಸ್‌ಟಿ)**
- ರಾಜಾ ಅಮರೇಶ್ವರ ನಾಯಕ (ಬಿಜೆಪಿ)
- ಜಿ. ಕುಮಾರ ನಾಯಕ (ಕಾಂಗ್ರೆಸ್)
ಕಾಂಗ್ರೆಸ್ 5, ಬಿಜೆಪಿ 2, ಜೆಡಿಎಸ್ 1

14 **ಬೀದರ್**
- ಭಗವಂತ ಖೂಬಾ (ಬಿಜೆಪಿ)
- ಸಾಗರ್ ಖಂಡ್ರೆ (ಕಾಂಗ್ರೆಸ್)
ಬಿಜೆಪಿ 5, ಕಾಂಗ್ರೆಸ್ 3

ಕಣದಲ್ಲಿರುವ ಪ್ರಮುಖರು


ಅಮಿತ್ ಶಾ (ಬಿಜೆಪಿ) ಕ್ಷೇತ್ರ: ಗಾಂಧಿನಗರ, ಗುಜರಾತ್


ದಿಗ್ವಿಜಯ್ ಸಿಂಗ್ (ಕಾಂಗ್ರೆಸ್) ಕ್ಷೇತ್ರ: ರಾಜಗಢ, ಮಧ್ಯಪ್ರದೇಶ


ಡಿಂಪಲ್ ಯಾದವ್ (ಎಸ್‌ಪಿ) ಕ್ಷೇತ್ರ: ಮೈನ್‌ಪುರಿ, ಉತ್ತರ ಪ್ರದೇಶ


ಶಿವರಾಜ್ ಸಿಂಗ್ ಚೌಹಾಣ್ (ಬಿಜೆಪಿ) ವಿದಿಶಾ, ಮಧ್ಯಪ್ರದೇಶ


ಸುಪ್ರಿಯಾ ಸುಳೆ (ಎನ್‌ಸಿಪಿ ಶರದ್ ಪವಾರ್ ಬಣ) ಕ್ಷೇತ್ರ: ಬಾರಾಮತಿ, ಮಹಾರಾಷ್ಟ್ರ


ಜ್ಯೋತಿರಾದಿತ್ಯ ಸಿಂಧಿಯಾ (ಬಿಜೆಪಿ) ಕ್ಷೇತ್ರ: ಗುನಾ, ಮಧ್ಯಪ್ರದೇಶ

ಮಂತ್ರಿ ಸ್ಥಾನದ ಆಮಿಷ ಒಡ್ಡಿದ್ದರು: ದೇವರಾಜೇಗೌಡ

‘ಪೆನ್‌ಡ್ರೈವ್ ರೂವಾರಿ ಡಿಕೆಶಿ’

ಪ್ರಜಾವಾಣಿ ವಾರ್ತೆ


ದೇವರಾಜೇಗೌಡ

ಬೆಂಗಳೂರು: ‘ಹಾಸನ ಸಂಸದ ಪ್ರಜ್ವಲ್ ರೇವಣ್ಣ ಭಾಗಿಯಾಗಿದ್ದ ರೆನ್ನಲಾದ ಅಶ್ಲೀಲ ವಿಡಿಯೊಗಳನ್ನು ಹೊಂದಿದ್ದ ಪೆನ್‌ಡ್ರೈವ್ ಬಿಡುಗಡೆಯ ಹಿಂದಿನ ಕಥಾನಾಯಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್’ ಎಂದು ಹಾಸನದ ಬಿಜೆಪಿ ಮುಖಂಡ ಮತ್ತು ವಕೀಲ ದೇವರಾಜೇಗೌಡ ಆರೋಪಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಶಿವಕುಮಾರ್ ಅವರು ರಹಸ್ಯ ಸ್ಥಳವೊಂದರಲ್ಲಿ ಸಭೆ ನಡೆಸಿ, ಸಾಮಾಜಿಕ ಜಾಲತಾಣದ ಮೂಲಕ ವಿಡಿಯೊ ಬಿಡುಗಡೆಗೆ ಸಂಬಂಧಿಸಿದಂತೆ ನನ್ನನ್ನು ಸಿಲುಕಿಸಿ, ಬಂಧಿಸಲು ಸಂಚು ಮಾಡಿದ್ದಾರೆ. ಈ ಸಂಬಂಧ ಸಿಬಿಐಗೆ ದೂರು ನೀಡುತ್ತೇನೆ’ ಎಂದು ಹೇಳಿದರು.

ಅಶ್ಲೀಲ ವಿಡಿಯೊಗಳ ಬಿಡುಗಡೆ ನಂತರದ ಬೆಳವಣಿಗೆಗೆ ಸಂಬಂಧಿಸಿದಂತೆ ದೂರವಾಣಿ ಮೂಲಕ ಶಿವಕುಮಾರ್ ತಮ್ಮ ಜತೆ ನಡೆಸಿದ ಸಂಭಾಷಣೆಯ ಆಡಿಯೊದ ಕೆಲವು ಭಾಗಗಳನ್ನು ಸುದ್ದಿಗಾರರಿಗೆ ಕೇಳಿಸಿದರು.

‘ಮಾಜಿ ಸಂಸದ ಎಲ್.ಆರ್. ಶಿವರಾಮೇಗೌಡ ಅವರು ದೂರವಾಣಿ ಕರೆ ಮಾಡಿ ಶಿವಕುಮಾರ್ ಜತೆ ಮಾತನಾಡುವಂತೆ ಹೇಳಿದರು. ಆಡಿಯೊದಲ್ಲಿ ಪೂರ್ಣ ಮಾಹಿತಿ ಏನಿದೆ ಎಂಬುದನ್ನು ಈಗ ಪ್ಲೇ ಮಾಡುವುದಿಲ್ಲ. ಶಿವಕುಮಾರ್ ನನ್ನ ಜತೆ ಮಾತನಾಡಿದ್ದಾರೆ ಎಂಬುದನ್ನು ಸಾಬೀತುಪಡಿಸಲು ಮಾತ್ರ ಪ್ಲೇ ಮಾಡಿದ್ದೇನೆ. ಎಸ್‌ಐಟಿ ಮೇಲೆ ನಂಬಿಕೆ ಇಲ್ಲದ ಕಾರಣ, ಈ ಆಡಿಯೊವನ್ನು ಸಿಬಿಐಗೆ ಒಪ್ಪಿಸುತ್ತೇನೆ’ ಎಂದು ದೇವರಾಜೇಗೌಡ ಹೇಳಿದರು.

5ನೇ ಪುಟ ನೋಡಿ

ದೇವರಾಜೇಗೌಡ ಆರೋಪ ಸುಳ್ಳು: ಡಿಕೆಶಿ



‘ನನಗೂ ಪೆನ್‌ಡ್ರೈವ್ ಬಿಡುಗಡೆ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ. ಬಿಜೆಪಿ ಕಾರ್ಯಕರ್ತ ದೇವರಾಜೇಗೌಡ ನನ್ನ ವಿರುದ್ಧ ಮಾಡಿರುವ ಆಪಾದನೆಗಳು ಸುಳ್ಳು’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಈ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಅವರು, ದೇವರಾಜೇಗೌಡ ಬಿಜೆಪಿಯಿಂದ ಚುನಾವಣೆಗೆ ನಿಂತಿದ್ದರು. ಪ್ರಜ್ವಲ್ ಪ್ರಕರಣದಲ್ಲಿ ಜೆಡಿಎಸ್ ಹಾಗೂ ಮಿತ್ರ ಪಕ್ಷ ಬಿಜೆಪಿಗೂ ಬಹಳ ಮುಜುಗರ ಮತ್ತು ಮುಖಭಂಗ ಆಗಿದೆ. ಆಗಿರುವ ಹಾನಿ ನಿವಾರಿಸಿಕೊಳ್ಳಲು ಬಿಜೆಪಿ-ಜೆಡಿಎಸ್ ನಾಯಕರು ದೇವರಾಜೇಗೌಡನ ಮೂಲಕ ನನ್ನ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡಿಸಿದ್ದಾರೆ’ ಎಂದು ಅವರು ದೂರಿದ್ದಾರೆ.

‘ತಮ್ಮಲ್ಲಿ ಪೆನ್‌ಡ್ರೈವ್ ಇರುವ ಬಗ್ಗೆ ಪತ್ರಿಕಾಗೋಷ್ಠಿ ಕರೆದು ಮಾತನಾಡಿದ್ದ ದೇವರಾಜೇಗೌಡ, ಬಿಜೆಪಿ ನಾಯಕರ ಅನುಮತಿ ಪಡೆದು ಅದನ್ನು ಬಿಡುಗಡೆ ಮಾಡುವುದಾಗಿಯೂ ಹೇಳಿದ್ದರು. ಹೀಗಿರುವಾಗ ನನಗೂ ಪೆನ್‌ಡ್ರೈವ್ ಬಿಡುಗಡೆಗೂ ಏನು ಸಂಬಂಧ? ಕೋತಿ ತಿಂದು ಮೇಕೆ ಬಾಯಿಗೆ ಒರೆಸಿತು ಎಂಬಂತೆ ದೇವರಾಜೇಗೌಡ ಮಾಡುವುದೆಲ್ಲ ಮಾಡಿ ಈಗ ನನ್ನ ವಿರುದ್ಧ ಆಪಾದನೆ ಮಾಡುತ್ತಿದ್ದಾರೆ. ಇದರ ಹಿಂದೆ ಬಿಜೆಪಿ-ಜೆಡಿಎಸ್ ನಾಯಕರ ಷಡ್ಯಂತ್ರ ಇದೆ’ ಎಂದು ಶಿವಕುಮಾರ್ ಆಪಾದಿಸಿದ್ದಾರೆ.

ಪ್ರಜ್ವಲ್ ಬಗ್ಗೆ ಸಹನೆ ಬೇಕಿಲ್ಲ: ಮೋದಿ



ನವದೆಹಲಿ (ಪಿಟಿಐ): ಪ್ರಜ್ವಲ್ ರೇವಣ್ಣ ಅವರಂಥವರ ವಿಚಾರದಲ್ಲಿ ಒಂದಿನಿತೂ ಸಹನೆ ತೋರಬೇಕಾದ ಅಗತ್ಯ ಇಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಪ್ರಜ್ವಲ್ ಅವರಿಗೆ ದೇಶದಿಂದ ಹೊರಗಡೆ ಹೋಗಲು ಕರ್ನಾಟಕದಲ್ಲಿನ ಕಾಂಗ್ರೆಸ್ ನೇತೃತ್ವದ ಸರ್ಕಾರವು ಅನುವು ಮಾಡಿಕೊಟ್ಟಿದೆ ಎಂದು ಮೋದಿ ಆರೋಪಿಸಿದ್ದಾರೆ.

ಇದು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ವಿಷಯವಾಗಿರುವ ಕಾರಣ, ಕ್ರಮ ಜರುಗಿಸುವ ಹೊಣೆಯು ರಾಜ್ಯ ಸರ್ಕಾರದ ಮೇಲೆ ಇದೆ ಎಂದು ಅವರು ಖಾಸಗಿ ಸುದ್ದಿವಾಹಿನಿಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಸಹಸ್ರಾರು ವಿಡಿಯೊಗಳು ಇವೆ ಎಂದಾದರೆ, ಅವು ಜೆಡಿಎಸ್ ಪಕ್ಷವು ಕಾಂಗ್ರೆಸ್ಸಿನ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದ ಅವಧಿಗೆ ಸೇರಿವೆ ಎಂಬುದು ಗೊತ್ತಾಗುತ್ತದೆ. ಅವರು ಅಧಿಕಾರದಲ್ಲಿ ಇದ್ದಾಗ ಈ ವಿಡಿಯೊಗಳನ್ನು ಒಟ್ಟುಗೂಡಿಸಿಕೊಂಡಿದ್ದರು, ಒಕ್ಕಲಿಗರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ ನಂತರದಲ್ಲಿ, ಚುನಾವಣೆಯ ಸಂದರ್ಭದಲ್ಲಿ ಈ ವಿಡಿಯೊಗಳನ್ನು ಬಿಡುಗಡೆ ಮಾಡಿದರು ಎಂದು ಮೋದಿ ಅವರು ಹೇಳಿದ್ದಾರೆ. ಪ್ರಜ್ವಲ್ ಅವರನ್ನು ದೇಶದಿಂದ ಹೊರಗೆ ಕಳುಹಿಸಿದ ನಂತರ ವಿಡಿಯೊ ಗಳನ್ನು ಬಿಡುಗಡೆ ಮಾಡಲಾಯಿತು ಎಂದಿದ್ದಾರೆ.

11ನೇ ಪುಟ ನೋಡಿ

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಸೇವಾ ವಲಯ: ಪ್ರಗತಿ 14 ವರ್ಷದ ಗರಿಷ್ಠ ಮಟ್ಟಕ್ಕೆ 10

ಕಾರ್ಮಿಕನ ಮನೆಯಲ್ಲಿ ₹25 ಕೋಟಿ!

ರಾಂಚಿ (ಪಿಟಿಐ): ಜಾರ್ಖಂಡ್‌ನ ಸಚಿವ ಆಲಂಗೀರ್ ಆಲಂ ಅವರ ಕಾರ್ಯದರ್ಶಿಯ ಮನೆಗೆಲಸದವರಿಗೆ ಸೇರಿದ್ದು ಎನ್ನಲಾದ ಸ್ಥಳದಲ್ಲಿ ನಡೆಸಿದ ಶೋಧದ ವೇಳೆ ಸೂಕ್ತ ಲೆಕ್ಕ ಇಲ್ಲದ ಅಂದಾಜು ₹25 ಕೋಟಿ ಹಣ ವಶಪಡಿಸಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹೇಳಿದೆ.

6 ಸ್ಥಳಗಳಲ್ಲಿ ಶೋಧ ನಡೆಯುತ್ತಿದೆ. ಶೋಧ ನಡೆಯುತ್ತಿರುವ ಇನ್ನೊಂದು ಸ್ಥಳದಿಂದ ₹2.9 ಕೋಟಿ, ಮತ್ತೊಂದು ಸ್ಥಳದಿಂದ ₹10 ಲಕ್ಷ ವಶಪಡಿಸಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಕೇಂದ್ರೀಯ ತನಿಖಾ ಸಂಸ್ಥೆಯಾದ ಇ.ಡಿ.ಯ ಅಧಿಕಾರಿಗಳು ಗಡಿಖಾನಾ ಚೌಕ್‌ನಲ್ಲಿ ಇರುವ ಫ್ಲ್ಯಾಟ್‌ನಿಂದ ದೊಡ್ಡ ಚೀಲಗಳಲ್ಲಿ ನೋಟುಗಳ ಕಂತೆಗಳನ್ನು ಒಯ್ಯುತ್ತಿರುವ ದೃಶ್ಯಗಳು ವಿಡಿಯೊಗಳಲ್ಲಿ ಸೆರೆಯಾಗಿವೆ. ಭದ್ರತಾ ಸಿಬ್ಬಂದಿ ಕೂಡ ಈ ದೃಶ್ಯಗಳಲ್ಲಿ ಇದ್ದಾರೆ.


ಜಾರ್ಖಂಡ್ ಸಚಿವ ಆಲಂಗೀರ್ ಆಲಂ ಅವರ ಆಪ್ತ ಕಾರ್ಯದರ್ಶಿಯ ಮನೆಗೆಲಸದವರಿಗೆ ಸೇರಿದ್ದು ಎನ್ನಲಾದ ಸ್ಥಳದಲ್ಲಿ ಇ.ಡಿ. ಅಧಿಕಾರಿಗಳು ನಡೆಸಿದ ಶೋಧ ಕಾರ್ಯದಲ್ಲಿ ಸಿಕ್ಕ ನೋಟಿನ ಕಂತೆಗಳು —ಪಿಟಿಐ ಚಿತ್ರ

ಜಾರ್ಖಂಡ್‌ನ ಗ್ರಾಮೀಣಾಭಿವೃದ್ಧಿ ಸಚಿವ ಆಲಂ ಅವರ ಆಪ್ತ ಕಾರ್ಯದರ್ಶಿ ಸಂಜೀವ್ ಲಾಲ್ ಅವರ ಮನೆಗೆಲಸದ ವ್ಯಕ್ತಿಯೊಬ್ಬರು ಈ ಸ್ಥಳದಲ್ಲಿ ವಾಸವಾಗಿದ್ದಾರೆ ಎಂದು ಹೇಳಲಾಗಿದೆ. ‘ಈ ಕುರಿತು ಇದುವರೆಗೆ ಯಾವುದೇ ಅಧಿಕೃತ ಮಾಹಿತಿ ಇಲ್ಲ’ ಎಂದು ಆಲಂ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

‘ಟಿ.ವಿ. ವೀಕ್ಷಿಸುತ್ತಿದ್ದೇನೆ. ಈ ಸ್ಥಳಕ್ಕೂ ನನಗೆ ಸರ್ಕಾರದ ಕಡೆಯಿಂದ ನೀಡಲಾಗಿರುವ ಆಪ್ತ ಕಾರ್ಯದರ್ಶಿಗೂ ನಂಟು ಇದೆ ಎಂದು ಟಿ.ವಿ. ವರದಿ ಹೇಳುತ್ತಿದೆ’ ಎಂದು ಆಲಂ ಹೇಳಿದ್ದಾರೆ. ಅಲ್ಲಿ ಸಿಕ್ಕ ಹಣವನ್ನು ಲೆಕ್ಕ ಹಾಕಲು ಎಂಟು ನೋಟು ಎಣಿಕೆ ಯಂತ್ರಗಳನ್ನು ಬಳಸಿಕೊಳ್ಳಲಾಗಿದೆ. ದೊರೆತಿರುವ ಹಣದ ಮೊತ್ತವು ₹25 ಕೋಟಿಗೂ ಅಧಿಕ ಇರಬಹುದು ಎಂದು ಇ.ಡಿ. ಮೂಲಗಳು ಮಾಹಿತಿ ನೀಡಿವೆ. ಮುಟ್ಟುಗೋಲು ಹಾಕಿಕೊಂಡ ಹಣವನ್ನು ತುಂಬಿಸಿಕೊಂಡು ತರಲು ದೊಡ್ಡ ಟ್ರಂಕ್‌ಗಳನ್ನು ಒಳಗೆ ಒಯ್ಯುತ್ತಿರುವ ದೃಶ್ಯಗಳೂ ವಿಡಿಯೊದಲ್ಲಿ ಇವೆ.

11ನೇ ಪುಟ ನೋಡಿ

ನಗರದಲ್ಲಿ ಮೂರು ದಿನಗಳವರೆಗೆ ಮಳೆ ಸಾಧ್ಯತೆ: ಹವಾಮಾನ ಇಲಾಖೆ

ವರ್ಷಧಾರೆ; ಮತ್ತಷ್ಟು ಇಳಿದ ಉಷ್ಣಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಮವಾರ ಸಂಜೆ ನಗರದ ಎಲ್ಲೆಡೆ ವರ್ಷಧಾರೆಯಾಯಿತು. ಶುಕ್ರವಾರ ಮಧ್ಯಾಹ್ನ ಉತ್ತಮ ಮಳೆಯಾಗಿ ಉಷ್ಣಾಂಶ ಕಡಿಮೆಯಾಗಿತ್ತು. ಮತ್ತೆ ಮಳೆ ಸುರಿದಿದ್ದರಿಂದ ಧಗೆ ಕಡಿಮೆಯಾಗಿ, ತಂಪನೆ ವಾತಾವರಣ ನಿರ್ಮಾಣವಾಯಿತು.

ಸಂಜೆಯಿಂದಲೂ ಮೋಡ ಕವಿದಿತ್ತು. ಸುಮಾರು 7 ಗಂಟೆ ವೇಳೆಗೆ ಬಿರುಗಾಳಿ, ಮಿಂಚು, ಸಿಡಿಲಿನಿಂದ ಮಳೆ ಸುರಿಯಿತು. ಬಿರುಗಾಳಿಗೆ ಮರಗಳ ಕೊಂಬೆಗಳು ರಸ್ತೆಗೆ ಬಿದ್ದವು. ಇದರಿಂದ ಸಂಚಾರಕ್ಕೆ ಅಡ್ಡಿಯಾಯಿತು.

ಗುಟ್ಟಹಳ್ಳಿ, ಬನಶಂಕರಿ, ವಿದ್ಯಾಪೀಠಗಳಲ್ಲಿ ಸುಮಾರು ನಾಲ್ಕು ಸೆಂಟಿ ಮೀಟರ್‌ನಷ್ಟು ಮಳೆ ಆಯಿತು. ಬಿಟಿಎಂ ಲೇಔಟ್, ಜಯನಗರ, ಕೋರಮಂಗಲ, ಎಚ್‌ಎಎಲ್ ವಿಮಾನ ನಿಲ್ದಾಣ, ಮಾರತ್ತಹಳ್ಳಿ, ಅರಕೆರೆ, ಸಂಪಂಗಿರಾಮನಗರ, ಮೆಜೆಸ್ಟಿಕ್, ಚಾಮರಾಜಪೇಟೆ, ಹೊಯ್ಸಳನಗರ, ಗರುಡಾಚಾರ್‌ಪಾಳ್ಯ, ದೊಡ್ಡನೆಕ್ಕುಂದಿ ಸುತ್ತಮುತ್ತ 3 ಮಿ.ಮೀನಿಂದ 9 ಮಿ.ಮೀವರೆಗೆ ಮಳೆಯಾಗಿದೆ.


ಓಕಳಿಪುರ ರೈಲ್ವೆ ಅಂಡರ್ ಪಾಸ್ ರಸ್ತೆಯಲ್ಲಿ ಮಳೆ ನೀರು ನಿಂತಿದ್ದರಿಂದ ಪಾದಚಾರಿಗಳು ಹಾಗೂ ವಾಹನ ಸವಾರರು ಪರದಾಡಿದರು ಪ್ರಜಾವಾಣಿ ಚಿತ್ರ: ಕಿಶೋರ್‌ಕುಮಾರ್ ಬೋಳಾರ್

ನಗರದ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿತ್ತು. ಅಂಡರ್‌ಪಾಸ್‌ಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು. ನಗರದ 33 ಪ್ರದೇಶಗಳಲ್ಲಿ ನೀರು ನಿಂತು ಸಂಚಾರಕ್ಕೆ ತೊಂದರೆಯಾಯಿತು. 15 ಪ್ರದೇಶಗಳಲ್ಲಿ ಮರ ಹಾಗೂ ಕೊಂಬೆಗಳು ಧರೆಗುರುಳಿದವು. ಇದರಿಂದ ಸಂಚಾರಕ್ಕೆ ಅಡಚಣೆ ಯಾಯಿತು. ಹಲವೆಡೆ ಸಂಚಾರ ನಿರ್ಬಂಧಿಸಿ, ಪರ್ಯಾಯ ಮಾರ್ಗ ಸೂಚಿಸಲಾಗಿತ್ತು. ನಗರದ ಕೆಲವೆಡೆ ತಡರಾತ್ರಿಯವರೆಗೂ ಮಳೆ ಮುಂದುವರಿದಿತ್ತು.

9ರವರೆಗೆ ಮಳೆ: ಮುಂದಿನ ಮೂರು ದಿನ ನಗರದ ವಿವಿಧೆಡೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಕೆಲವು ಪ್ರದೇಶಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಂಭವವಿದೆ. ಸಂಜೆ ವೇಳೆಯೇ ಮಳೆ ಬರುವ ಸಾಧ್ಯತೆ ಇದೆ ಎಂದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಇನ್ನಷ್ಟು ಸುದ್ದಿಗಳು 3

ಕರೀಗೌಡ ಅಧ್ಯಕ್ಷ

ಬೆಂಗಳೂರು: ಜಯನಗರದ ಪ್ರತಿಷ್ಠಿತ ಕಾಸ್ಮೊಪಾಲಿಟನ್ ಕ್ಲಬ್‌ನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಎಸ್‌.ಸಿ. ಕರೀಗೌಡ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಟಿ.ವಿ. ಏಕನಾಥ್, ಗೌರವ ಖಜಾಂಚಿಯಾಗಿ ಪ್ರಸಾದ್ ತಲ್ಲಂ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಬಿ.ಎ. ಸೌಮ್ಯಾ, ಕೆ. ಕಿರಣ ಹೊಳ್ಳ, ಡಾ. ಬಿ.ಆರ್. ಸಂದೀಪ್, ಸುಮಲ್ ವಾಸುದೇವ್, ಉತ್ತಮ್ ಚಂದ್ರಶೇಖರ್, ಬಿ. ವೆಂಕಟೇಶ್, ಎ.ಪಿ. ವೆಂಕಟ್‌ನಾಯಕ್ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸುವರ್ಣ ಸಂಭ್ರಮ ಆಚರಿಸಿಕೊಂಡಿದ್ದ ಕಟ್ಟಡ • ಆದಾಯದ ಕೊರತೆಯಿಂದ ಸ್ಥಗಿತ

ಕಾವೇರಿ ಚಿತ್ರಮಂದಿರ ಇನ್ನು ನೆನಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರನಟ ರಾಜ್‌ಕುಮಾರ್ ನಟನೆಯ 'ಬಂಗಾರದ ಪಂಜರ' ಚಿತ್ರದೊಂದಿಗೆ 1974ರ ಜನವರಿ 11ರಂದು ರಾಜಧಾನಿಯ ಪ್ಯಾಲೆಸ್ ಗುಟ್ಟಹಳ್ಳಿ ರಸ್ತೆಯಲ್ಲಿದ್ದ ಏಕಪರದೆ ಚಿತ್ರಮಂದಿರವಾದ 'ಕಾವೇರಿ' ಮೊದಲ ಹೆಜ್ಜೆ ಇಟ್ಟಿತ್ತು. ಇತ್ತೀಚೆಗಷ್ಟೇ ಐವತ್ತು ವರ್ಷದ ಸಂಭ್ರಮ ಆಚರಿಸಿದ್ದ ಈ ಚಿತ್ರಮಂದಿರ ಇನ್ನು ನೆನಪು ಮಾತ್ರ.

ಏಪ್ರಿಲ್ 19ಕ್ಕೆ 'ಕಾವೇರಿ'ಯಲ್ಲಿ ಕೊನೆಯ ಪ್ರದರ್ಶನ ನಡೆದಿದ್ದು, ಇದೀಗ ಚಿತ್ರಮಂದಿರವನ್ನು ಕೆಡವಿ, ಕಮರ್ಷಿಯಲ್ ಕಾಂಪ್ಲೆಕ್ಸ್ ನಿರ್ಮಾಣ ಕೆಲಸ ಆರಂಭವಾಗಿದೆ. ಕಾವೇರಿಯಲ್ಲಿ ಕೊನೆಯದಾಗಿ ಪ್ರದರ್ಶನ ಕಂಡಿದ್ದು ಹಿಂದಿಯ 'ಬಡೇಮಿಯಾ ಚೋಟೆಮಿಯಾ' ಹಾಗೂ 'ಮೈದಾನ್' ಸಿನಿಮಾಗಳು.



ನಗರದ ಹಳೆಯ ಸಿನಿಮಾ ಮಂದಿರಗಳಲ್ಲೊಂದಾದ ಕಾವೇರಿ ಚಿತ್ರಮಂದಿರ ಸೋಮವಾರದಿಂದ ಚಿತ್ರ ಪ್ರದರ್ಶನವನ್ನು ಸ್ಥಗಿತಗೊಳಿಸಿತು

ಬೆಂಗಳೂರಿನಲ್ಲಿ 'ಕಪಾಲಿ' ಚಿತ್ರಮಂದಿರದ ಬಳಿಕ ಅತ್ಯಧಿಕ ಆಸನಗಳಿದ್ದ ಥಿಯೇಟರ್ ಎಂಬ ಹೆಗ್ಗಳಿಕೆ 'ಕಾವೇರಿ'ಗಿತ್ತು. ಚಿತ್ರಮಂದಿರ ಆರಂಭವಾದಾಗ 'ಕಾವೇರಿ'ಯಲ್ಲಿ 1384 ಸೀಟುಗಳಿದ್ದವು. 1995ರಲ್ಲಿ ಚಿತ್ರಮಂದಿರದ ಪುನರ್‌ನಿರ್ಮಾಣವಾದಾಗ ಈ ಸಂಖ್ಯೆ 1,100ಕ್ಕೆ ಇಳಿಯಿತು. 'ಕಾವೇರಿ' ಚಿತ್ರಮಂದಿರದಲ್ಲಿ ಹಿಂದಿ ಸಿನಿಮಾಗಳ ಭರಾಟೆ ಅಧಿಕವಾಗಿತ್ತು. 40 ವಾರ 'ಶಂಕರಾಭರಣಂ', ಹಿಂದಿಯ 'ದಿಲ್‌ವಾಲೆ ದುಲ್ಹನಿಯಾ ಲೇಜಾಯೆಂಗೆ' 22 ವಾರ ಹಾಗೂ 'ಇಂಡಿಯನ್' ಸಿನಿಮಾ ನೂರು ದಿನ ಪೂರೈಸಿತ್ತು.

'ಸ್ಟಾರ್ ಸಿನಿಮಾಗಳ ಕೊರತೆ': 'ಚಿತ್ರಮಂದಿರಗಳಿಗೆ ಸೂಕ್ತ ಸಿನಿಮಾಗಳ ಪೂರೈಕೆ ಇಳಿಕೆಯಾಗಿತ್ತು. ಜೊತೆಗೆ ಒಟಿಟಿ ಬಂದ ಬಳಿಕ ಚಿತ್ರಮಂದಿರಗಳಿಗೆ ಬರುವ ಜನರ ಸಂಖ್ಯೆ ಕಡಿಮೆಯಾಗಿದೆ. ಒಟಿಟಿ ಬಳಿಕ ಏಕಪರದೆ ಚಿತ್ರಮಂದಿರಗಳು ಸಂಪೂರ್ಣವಾಗಿ ಮುಚ್ಚಿಹೋಗುವ ಸ್ಥಿತಿ ಬಂದಿದೆ. ಒಟಿಟಿಯೇ ದೊಡ್ಡ ಸಮಸ್ಯೆಯಾಗಿದೆ. ಹೀಗಿರುವಾಗ ಏನೂ ಮಾಡಲು ಸಾಧ್ಯವಿಲ್ಲ. ಬೇಸರ ಖಂಡಿತವಾಗಿಯೂ ಇದೆ. ಸಮಯಕ್ಕೆ ಸರಿಯಾಗಿ ಬದಲಾಗಬೇಕಾದ ಸ್ಥಿತಿ ಎದುರಾಗಿದೆ. ಆದಾಯ ಇಲ್ಲದೇ ಇರುವಾಗ ಬದಲಾವಣೆ ಮಾಡಲೇಬೇಕಾದ ಅನಿವಾರ್ಯ. ಸಿನಿಮಾ ಓಡಿಸಿದರೆ ಅದರಿಂದ ಬರುವ ಆದಾಯದಲ್ಲಿ ವಿದ್ಯುತ್ ಬಿಲ್ ಪಾವತಿಸಲೂ ಸಾಧ್ಯವಾಗುತ್ತಿಲ್ಲ. ಹೀಗಾಗಿ ಈ ನಿರ್ಧಾರ. ಹೀರೊಗಳು ವರ್ಷಕ್ಕೆ ಮೂರ್ನಾಲ್ಕು ಸಿನಿಮಾಗಳು ಮಾಡಿದರೆ ಚಿತ್ರಮಂದಿರಗಳಿಗೆ ಫೀಡಿಂಗ್ ಚೆನ್ನಾಗಿ ಇರುತ್ತದೆ. ಬದಲಾಗಿ, ಅವರು ಎರಡು–ಮೂರು ವರ್ಷಕ್ಕೆ ಒಂದು ಸಿನಿಮಾ ಮಾಡಿದರೆ ಹೇಗೆ? ಚಿತ್ರಮಂದಿರಗಳನ್ನು ಖಾಲಿ ಇಟ್ಟುಕೊಳ್ಳಲು ಸಾಧ್ಯವಿಲ್ಲವಲ್ಲ. ಅತ್ತ ಮೂರ್ನಾಲ್ಕು ವರ್ಷಗಳಿಂದ ಒಳ್ಳೆಯ ಹಿಂದಿ ಸಿನಿಮಾಗಳು ಬಂದಿಲ್ಲ. ಹಾಗೆ ನೋಡಿದರೆ ಕನ್ನಡ, ತೆಲುಗು, ತಮಿಳು ಇಂಡಸ್ಟ್ರಿ ಹಿಟ್ ಸಿನಿಮಾಗಳನ್ನು ನೀಡಿದವು' ಎನ್ನುತ್ತಾರೆ ಕಾವೇರಿ ಚಿತ್ರಮಂದಿರದ ಮಾಲೀಕ ಪ್ರಕಾಶ್ ನರಸಿಂಹಯ್ಯ.



ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ನಗರದ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ '86ನೇ ಶ್ರೀ ರಾಮನವಮಿ ಸಂಗೀತೋತ್ಸವ'ದಲ್ಲಿ 'ಬೆಂಗಳೂರು ಸಹೋದರರು' ಎಂ.ಬಿ. ಹರಿಹರನ್ ಮತ್ತು ಎಸ್. ಅಶೋಕ್ ಅವರ ತಂಡ ಸೋಮವಾರ ವಿಶೇಷ ಕರ್ನಾಟಕ ಸಂಗೀತ ಕಛೇರಿಯನ್ನು ಪ್ರಸ್ತುತಪಡಿಸಿದರು – ಪ್ರಜಾವಾಣಿ ಚಿತ್ರ

ಒಕ್ಕಲಿಗರನ್ನು ತುಳಿಯುತ್ತಿರುವ ಸಿದ್ದರಾಮಯ್ಯ: ಆರ್ ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಕ್ಕಲಿಗರನ್ನು ತುಳಿಯುವ ಕೆಲಸ ಮಾಡುತ್ತಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.

ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಎಚ್.ಡಿ.ರೇವಣ್ಣ ಅವರನ್ನು ಬಂಧಿಸಿರುವುದೇ ಇದಕ್ಕೆ ಸಾಕ್ಷಿ ಎಂದು ಅವರು ಹೇಳಿದರು. ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ಅಶೋಕ ಅವರು ರೇವಣ್ಣ ಬಂಧನವನ್ನು ಸಮರ್ಥಿಸಿಕೊಂಡಿದ್ದರು.

ಎಚ್.ಡಿ.ಕುಮಾರಸ್ವಾಮಿ ಅವರ ಬಗೆಗಿನ ದ್ವೇಷದ ಕಾರಣ ದೇವೇಗೌಡರ ಕುಟುಂಬವನ್ನು ತುಳಿಯಲು ಹೊರಟಿದ್ದಾರೆ. ಕೇವಲ ಒಕ್ಕಲಿಗರು ಮಾತ್ರವಲ್ಲ ಲಿಂಗಾಯತ ಸಮುದಾಯದ ಬಗ್ಗೆಯೂ ಸಿದ್ದರಾಮಯ್ಯ ಅವರಿಗೆ ಅಸಹನೆ ಇದೆ. ಚುನಾವಣೆ ಸಮಯ ನೋಡಿಕೊಂಡು ತುಳಿಯುವ ಕೆಲಸಕ್ಕೆ ಮುಂದಾಗಿದ್ದಾರೆ ಎಂದರು.

ಕಾಂಗ್ರೆಸ್– ಜೆಡಿಎಸ್ ಮೈತ್ರಿ ಇದ್ದಾಗಲೇ ಪ್ರಜ್ವಲ್ ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಕಾಂಗ್ರೆಸ್ ಹೇಳಿದೆ. ಹಾಗಿದ್ದರೆ ಅಧಿಕಾರಕ್ಕೆ ಬಂದು ಒಂದು ವರ್ಷ ಸುಮ್ಮನೆ ಇದ್ದಿದ್ದು ಏಕೆ? ಆಗಲೇ ಕ್ರಮ ತೆಗೆದುಕೊಳ್ಳಬಹುದಿತ್ತಲ್ಲ ಎಂದು ಪ್ರಶ್ನಿಸಿದರು.

ಚುನಾವಣೆ: ಬಸ್ ನಿಲ್ದಾಣದಲ್ಲಿ ಜನ ಜಮಾವಣೆ

ಬೆಂಗಳೂರು: ಉತ್ತರ ಕರ್ನಾಟಕದ ಕ್ಷೇತ್ರಗಳು ಸೇರಿದಂತೆ ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ಮಂಗಳವಾರ ಮತದಾನ ಜರುಗಲಿದ್ದು, ಬೆಂಗಳೂರಿನಲ್ಲಿರುವ ಹಲವರು ಹೆಚ್ಚಿನ ಸಂಖ್ಯೆಯಲ್ಲಿ ಸೋಮವಾರ ರಾತ್ರಿ ತಮ್ಮೂರಿನತ್ತ ಪ್ರಯಾಣ ಬೆಳೆಸಿದರು.

ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಕೊಪ್ಪಳ, ಉತ್ತರ ಕನ್ನಡ, ಹಾವೇರಿ ಹಾಗೂ ಇತರೆ ಜಿಲ್ಲೆಗಳ ವಲಸೆ ಕಾರ್ಮಿಕರು ಹಾಗೂ ಹಲವು ಕಂಪನಿಗಳ ಉದ್ಯೋಗಿಗಳು ಬೆಂಗಳೂರಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಈ ಪೈಕಿ ಬಹುತೇಕರ ಹೆಸರುಗಳು, ಅವರ ಸ್ವಂತ ಊರಿನ ಮತದಾರರ ಪಟ್ಟಿಯಲ್ಲಿವೆ.

ಮತದಾನ ಮಾಡುವ ಉದ್ದೇಶದಿಂದ ಹಲವರು, ಕುಟುಂಬ ಸಮೇತರಾಗಿ ಮೆಜೆಸ್ಟಿಕ್ ಕೇಂದ್ರ ನಿಲ್ದಾಣ ಹಾಗೂ ಇತರೆ ನಿಲ್ದಾಣಗಳಿಂದ ಬಸ್‌ಗಳಲ್ಲಿ ತಮ್ಮೂರಿನತ್ತ ಪ್ರಯಾಣ ಬೆಳೆಸಿದರು. ಇದರಿಂದಾಗಿ, ನಿಲ್ದಾಣಗಳಲ್ಲಿ ಸೋಮವಾರ ರಾತ್ರಿ ಜನದಟ್ಟಣೆ ಹೆಚ್ಚಿತ್ತು. ಪ್ರಯಾಣಿಕರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ಹೆಚ್ಚಿನ ಬಸ್‌ಗಳ ವ್ಯವಸ್ಥೆ ಮಾಡಿತ್ತು. ಬಿಎಂಟಿಸಿ ಬಸ್‌ಗಳನ್ನು ಸಹ ಹೊರ ಜಿಲ್ಲೆಗಳಿಗೆ ಕಳುಹಿಸಲಾಯಿತು. ಎಲ್ಲ ಬಸ್‌ಗಳು ಪ್ರಯಾಣಿಕರಿಂದ ಭರ್ತಿಯಾಗಿ ಸಂಚರಿಸಿದವು.

ಖಾಸಗಿ ಬಸ್‌ಗಳು ಹಾಗೂ ಸ್ವಂತ ವಾಹನಗಳಲ್ಲಿಯೂ ಜನರು ಪ್ರಯಾಣಿಸಿದರು. ಇದರಿಂದಾಗಿ ಮೆಜೆಸ್ಟಿಕ್ ಸುತ್ತಮುತ್ತ ವಿಪರೀತ ದಟ್ಟಣೆ ಉಂಟಾಯಿತು. ತುಮಕೂರು ರಸ್ತೆಯಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಕಂಡುಬಂದವು. ಟೋಲ್‌ಗೇಟ್‌ಗಳಲ್ಲಿಯೂ ವಾಹನಗಳು ಸಾಲುಗಟ್ಟಿ ನಿಂತಿದ್ದು ಕಂಡುಬಂತು.

ಸೆಮಿಕ್ರಯೋಜೆನಿಕ್ ಎಂಜಿನ್ ಅಭಿವೃದ್ಧಿ

ಬೆಂಗಳೂರು: ರಾಕೆಟ್ ಉಡಾವಣಾ ವಾಹನ ಮಾರ್ಕ್–3 (ಎಲ್‌ವಿಎಂ3) ಪೇಲೋಡ್ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ಇಸ್ರೊ 2,000 ಕಿಲೊನ್ಯೂಟನ್ ಸಾಮರ್ಥ್ಯದ ಸೆಮಿ ಕ್ರಯೋಜೆನಿಕ್ ಎಂಜಿನ್‌ವೊಂದನ್ನು ಅಭಿವೃದ್ಧಿಪಡಿಸುತ್ತಿದೆ. ಮಹೇಂದ್ರಗಿರಿಯ ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಮ್ ಸೆಂಟರ್ ಇದನ್ನು ಅಭಿವೃದ್ಧಿಪಡಿಸುತ್ತಿದೆ.

EDUCATION SUCCESS ಕ್ಲಾಸಿಫೈಡ್ಸ್



ಸೋಮವಾರ ಸುರಿದ ಮಳೆಯಲ್ಲೇ ಬೈಕ್ ಸವಾರಿ –ಪ್ರಜಾವಾಣಿ ಚಿತ್ರ: ರಂಜು ಪಿ





1. ನಗರದ ಕೆ.ಆರ್‌ ರಸ್ತೆಯ ಶಿವಶಂಕರ್ ವೃತ್ತದಲ್ಲಿ ಸೋಮವಾರ ಕುಟುಂಬವೊಂದು ಮಳೆಯಲ್ಲೇ ಸಾಗಿತು. 2. ಶಂಕರಮಠ ಬಳಿಯ ಕಾರ್ಡ್ ರಸ್ತೆಯಲ್ಲಿ ಮರದ ಕೊಂಬೆಯೊಂದು ಬಿದ್ದು ಕಾರು ಜಖಂಗೊಂಡಿತು

ಬಿಬಿಎಂಪಿ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೇಲ್ಸೇತುವೆ ಹಾಗೂ ಅಂಡರ್‌ಪಾಸ್‌ಗಳಲ್ಲಿ ಮಳೆನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. 15 ದಿನಗಳಿಂದ ಸ್ವಚ್ಛತಾ ಕಾರ್ಯ ಕೈಗೊಂಡಿರುವುದಾಗಿ ಬಿಬಿಎಂಪಿ ಹೇಳಿದ್ದರೂ ಇಲ್ಲೆಲ್ಲ ಮಣ್ಣು ತುಂಬಿಕೊಂಡಿತ್ತು. ನೀರು ಹರಿಯದೆ ನಿಂತುಕೊಂಡಿತ್ತು.

ಸಿರ್ಸಿ ಮೇಲ್ಸೇತುವೆ, ನಾಯಂಡಹಳ್ಳಿ ಮೇಲ್ಸೇತುವೆ, ರಾಜಾಜಿನಗರ ಕಾರಿಡಾರ್, ಓಕಳಿಪುರ, ಆನಂದರಾವ್ ವೃತ್ತ, ಕಾವೇರಿ ಜಂಕ್ಷನ್, ಲಿಂಗರಾಜಪುರ ಅಂಡರ್‌ಪಾಸ್‌ಗಳಲ್ಲಿ ನೀರು ನಿಂತು, ಜನರು ಪರದಾಡಿದರು.

'ಯಾವ ಸಮಸ್ಯೆ ಇಲ್ಲ ಎಂದು ಬಿಬಿಎಂಪಿ ಪ್ರಕಟಣೆ ಹೇಳುತ್ತದೆ. ಆದರೆ, ಮೇಲ್ಸೇತುವೆ, ಅಂಡರ್‌ಪಾಸ್‌ಗಳಲ್ಲಿ ನೀರು ನಿಂತಿರುವುದು ಮಾತ್ರ ಅವರ ಕಣ್ಣಿಗೆ ಬೀಳುವುದೇ ಇಲ್ಲ. ಎ.ಸಿ ಕಚೇರಿಗಳಲ್ಲಿ ಕುಳಿತು ಅಧಿಕಾರಿಗಳು ಮಾತನಾಡುವುದನ್ನು ಮೊದಲು ಬಿಡಬೇಕು' ಎಂದು ಓಕಳಿಪುರದ ಅಂಡರ್‌ಪಾಸ್ ನೀರಿನಲ್ಲಿ ಸಿಲುಕಿಕೊಂಡಿದ್ದ ರಾಮರಾಜು ದೂರಿದರು.



ನಗರದಲ್ಲಿ ಸೋಮವಾರ ಸುರಿದ ಮಳೆಯಿಂದ ಕಾರ್ಪೊರೇಷನ್ ರಸ್ತೆಯಲ್ಲಿ ವಾಹನ ದಟ್ಟಣೆಯಾಗಿತ್ತು – ಪ್ರಜಾವಾಣಿ ಚಿತ್ರ ಪ್ರಶಾಂತ್ ಎಚ್. ಜಿ

ಎಲ್ಲಿ ಅತಿಹೆಚ್ಚು ಮಳೆ? (ಸೆಂ.ಮೀಗಳಲ್ಲಿ)

ರಾಜಮಹಲ್ ಗುಟ್ಟಹಳ್ಳಿ	4
ದಯಾನಂದನಗರ	3.2
ವಿದ್ಯಾಪೀಠ	3.05
ಕೊಟ್ಟಿಗೆಪಾಳ್ಯ	2.7
ಬಾಣಸವಾಡಿ	2.5
ಕಾಟನ್‌ಪೇಟೆ	2.25
ರಾಜಾಜಿನಗರ	2.2
ಗೊಟ್ಟಿಗೆರೆ	2
ಕುಶಾಲನಗರ	1.9
ಕಮ್ಮನಹಳ್ಳಿ	1.8
ಪುಲಕೇಶಿನಗರ	1.75
ನಾಗಪುರ	1.65
ಕೊಡಿಗೆಹಳ್ಳಿ	1.6
ಬಸವನಪುರ	1.5
ಮಾರುತಿಮಂದಿರ	1.3
ಹೊರಮಾವು	1.25
ಚಾಮರಾಜಪೇಟೆ	1.25
ಬೊಮ್ಮನಹಳ್ಳಿ	1.1
ನಾಯಂಡಹಳ್ಳಿ	1

ಆಲಿಕಲ್ಲು ಮಳೆ

ಕೋಲಾರ: ಜಿಲ್ಲೆಯ ಹಲವೆಡೆ ಗುಡುಗು, ಬಿರುಗಾಳಿ ಸಹಿತ ಜೋರಾದ ಮಳೆಯಾಗಿದೆ. ಕೆಲವೆಡೆ ಮಳೆ ಜೊತೆ ಆಲಿಕಲ್ಲು ಸುರಿದಿವೆ.

ನಾನಾ ಕಡೆ ಮರಗಳು ಹಾಗೂ ವಿದ್ಯುತ್ ಕಂಬ ಮುರಿದು ಬಿದ್ದಿವೆ. ಹಲವು ಮನೆಗಳ ಚಾವಣಿಗೆ ಅಳವಡಿಸಿದ್ದ ತಗಡಿನ ಶೀಟ್ ಗಾಳಿಗೆ ಹಾರಿ ಹೋಗಿವೆ.

ಕೋಲಾರ ಎಪಿಎಂಸಿ ಬಳಿ ಇರುವ ಸಿಎಂಆರ್ ಟೊಮೆಟೊ ಮಂಡಿ ಶೆಡ್ ಕುಸಿದು ಬಿದ್ದಿದೆ. ಹಲವಾರು ವಾಹನ ಜಖಂಗೊಂಡಿವೆ. ಲಕ್ಷಾಂತರ ರೂಪಾಯಿ ನಷ್ಟವಾಗಿದೆ ಎಂದು ಮಂಡಿ ಮಾಲೀಕ ಸಿಎಂಆರ್ ಶ್ರೀನಾಥ್ ತಿಳಿಸಿದರು.

ಮಂಡ್ಯ, ಚಾಮರಾಜನಗರ ವರದಿ: ಮೈಸೂರು ಭಾಗದ ಮಂಡ್ಯ ನಗರ ಮತ್ತು ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಕೆಲವೆಡೆ ಸೋಮವಾರ ರಾತ್ರಿ ಗುಡುಗು ಮಿಂಚು ಸಹಿತ ಮಳೆ ಸುರಿಯಿತು.

ಯಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನ ಬೆಟ್ಟದ ಸುತ್ತಮುತ್ತ ಅರ್ಧ ಗಂಟೆ ಮಳೆ ಸುರಿಯಿತು.

ಉರುಳಿದ ಮರ, ಜಾಹೀರಾತು ಫಲಕ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಮತ್ತು ತಾಲ್ಲೂಕಿನಾದ್ಯಂತ ಸಂಜೆ ನಾಲ್ಕು ಗಂಟೆ ವೇಳೆಗೆ ಅರ್ಧ ತಾಸು ಗುಡುಗು ಸಹಿತ ಸಾಧಾರಣ ಮಳೆ ಸುರಿಯಿತು.

ಮಧ್ಯಾಹ್ನದಿಂದಲೇ ಮೋಡ ಕವಿದ ವಾತಾವರಣ ಇತ್ತು. ಕೆಲವೆಡೆ ಕೇವಲ ಗುಡುಗಿನ ಶಬ್ದ ಮಾತ್ರ ಕೇಳಿತು. ಮಳೆ ಸುರಿಯಲಿಲ್ಲ. ಕೆಲವೇ ನಿಮಿಷ ಬಿದ್ದ ಮಳೆ ಮತ್ತು ತಂಗಾಳಿ ಜನರಿಗೆ ನೆಮ್ಮದಿ ತಂದಿವೆ.

ಆನೇಕಲ್ ತಾಲ್ಲೂಕಿನಲ್ಲಿ ಬಿರುಗಾಳಿ ಮಳೆಗೆ ಅನೇಕ ಬೃಹತ್ ಮರಗಳು ನೆಲಕ್ಕೆ ಉರುಳಿವೆ. ಸಂಜೆ ಶುರುವಾದ ಮಳೆ ತಾಸಿಗೂ ಹೆಚ್ಚು ಸುರಿಯಿತು. ರಸ್ತೆಗಳಲ್ಲಿ ನೀರು ಹರಿಯಿತು.

ಚಂದಾಪುರದಲ್ಲಿ ಗಾಳಿ, ಮಳೆಗೆ ಭಾರಿ ಗಾತ್ರದ ಜಾಹೀರಾತು ಫಲಕಗಳು ಉರುಳಿ ಬಿದ್ದಿವೆ. ಗೆರಟಿಗನಬೆಲೆ ಬಳಿ ರಸ್ತೆಯಲ್ಲಿ ಮರ ಉರುಳಿ ಬಿದ್ದಿದೆ. ತಿಮ್ಮಸಂದ್ರ ಗೇಟ್ ಬಳಿ ರಸ್ತೆಯಿಂದ ನೀರು ಹರಿದು ಹೋಗಲು ದಾರಿ ಇಲ್ಲದ ಕಾರಣ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು.

ಶಿಡ್ಲಘಟ್ಟ, ರಾಮನಗರ ಮತ್ತು ಮಾಗಡಿ ತಾಲ್ಲೂಕಿನಲ್ಲಿ ಹಲವೆಡೆ ಗುಡುಗು, ಗಾಳಿ ಅಬ್ಬರ ಭಾರಿ ಇತ್ತಾದರೂ ಮಳೆ ಮಾತ್ರ ಸಾಧಾರಣವಾಗಿ ಆಗಿದೆ.

ಕಚೇರಿಗೆ ವಕೀಲರ ಭೇಟಿ: ಕೆಲವರಿಗೆ ತಡೆ

ಎಸ್‌ಐಟಿ ಕಸ್ಟಡಿಯಲ್ಲಿರುವ ಎಚ್.ಡಿ. ರೇವಣ್ಣ ಅವರನ್ನು ಅರಮನೆ ರಸ್ತೆಯಲ್ಲಿರುವ ಸಿಐಡಿ ಅನೆಕ್ಸ್‌–1ರ ಕಟ್ಟಡದ ಸೆಲ್‌ನಲ್ಲಿ ಇರಿಸಲಾಗಿದೆ. ಇದೇ ಕಟ್ಟಡದಲ್ಲಿ ಎಸ್‌ಐಟಿ ಕಚೇರಿಯಿದ್ದು, ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ.

ಎಸ್‌ಐಟಿ ಕಚೇರಿಗೆ ಹಲವು ವಕೀಲರು ಮಂಗಳವಾರ ಭೇಟಿ ನೀಡಿದರು. ರೇವಣ್ಣ ಜೊತೆಯಲ್ಲಿ ಜಾಮೀನು ಸಂಬಂಧ ಮಾತುಕತೆ ನಡೆಸಿದರೆಂದು ಗೊತ್ತಾಗಿದೆ.

ಎಸ್‌ಐಟಿ ಕಚೇರಿ ಪ್ರವೇಶ ದ್ವಾರದಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ. ಕಚೇರಿಯೊಳಗೆ ಹೋಗಲು ಬಂದಿದ್ದ ಕೆಲ ವಕೀಲರನ್ನು ಪೊಲೀಸರು ಒಳಗೆ ಬಿಡಲಿಲ್ಲ. ಇದೇ ಕಾರಣಕ್ಕೆ, ಮಾತಿನ ಚಕಮಕಿ ನಡೆಯಿತು.

ಕೃತ್ಯ ವಿವರಿಸಿದ ಸಂತ್ರಸ್ತೆ: ವಿಡಿಯೊ ಚಿತ್ರೀಕರಣ, ಪುರಾವೆಗಳ ಸಂಗ್ರಹ

ರೇವಣ್ಣ ಮನೆಯಲ್ಲಿ ಮಹಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತ್ಯಾಚಾರ ಸಂತ್ರಸ್ತೆ ಅಪಹರಣ' ಪ್ರಕರಣದಲ್ಲಿ ಬಂಧಿಸಲಾಗಿರುವ ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ಅವರ ಬಸವನಗುಡಿ ಮನೆಯಲ್ಲಿ ಎಸ್‌ಐಟಿ ಅಧಿಕಾರಿಗಳು ಸೋಮವಾರ ಮಹಜರು ಪ್ರಕ್ರಿಯೆ ನಡೆಸಿದರು.

ಕೆ.ಆರ್. ನಗರ ಠಾಣೆ ವ್ಯಾಪ್ತಿಯಿಂದ ಏಪ್ರಿಲ್ 29ರಂದು ಅಪಹರಣವಾಗಿದ್ದ ಸಂತ್ರಸ್ತೆಯನ್ನು ರಕ್ಷಿಸಿ ಹೇಳಿಕೆ ಪಡೆದಿರುವ ಅಧಿಕಾರಿಗಳು, ಪ್ರಕರಣಕ್ಕೆ ಸಂಬಂಧಪಟ್ಟ ಪುರಾವೆಗಳನ್ನು ಸಂಗ್ರಹಿಸುತ್ತಿದ್ದಾರೆ.

ಸಂತ್ರಸ್ತೆಯನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಿ ಸಿಆರ್‌ಪಿಸಿ 164 ಅಡಿ ಹೇಳಿಕೆ ದಾಖಲಿಸುವ ಸಾಧ್ಯತೆಯಿದೆ.



ಇದಕ್ಕೂ ಮುನ್ನ ಎಸ್‌ಐಟಿ ಅಧಿಕಾರಿಗಳು, ಸಂತ್ರಸ್ತೆಯನ್ನು ಆರೋಪಿಯ ಮನೆ ಹಾಗೂ ಇತರೆ ಕಡೆಗಳಿಗೆ ಕರೆದೊಯ್ದು ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೂ ಮಹಜರು ನಡೆಸಿದರು. ಮನೆಯಲ್ಲಿ ನಡೆದ ಕೃತ್ಯದ ಬಗ್ಗೆ ಸಂತ್ರಸ್ತೆ ವಿವರಣೆ ನೀಡಿದರು.

ಸಂತ್ರಸ್ತೆ ಸಹಕಾರ: 'ಆರೋಪಿಗಳು ಹಾಗೂ ಅವರ ಕಡೆಯವರಿಂದ ಏನಾದರೂ ಆಗಬಹುದೆಂದು ಸಂತ್ರಸ್ತೆ ಹೆದರಿದ್ದರು. ಆದರೆ, ಕೌನ್ಸೆಲಿಂಗ್ ಮಾಡಿಸಿ ಸಂಬಂಧಿಕರ ಮೂಲಕ ಮನವೊಲಿಸಿ ಹೇಳಿಕೆ ಪಡೆಯಲಾಗಿದೆ. ಮಹಜರು ಪ್ರಕ್ರಿಯೆ ಸಂದರ್ಭದಲ್ಲಿ, ತನಿಖೆಗೆ ಮಹಿಳೆ ಸಹಕಾರ ನೀಡಿದರು. ಮುಂದಿನ ದಿನಗಳಲ್ಲಿ ಆರೋಪಿ ರೇವಣ್ಣ ಅವರನ್ನು ಇದೇ ಮನೆಗೆ ಕರೆತಂದು ಮಹಜರು ಮಾಡಬೇಕಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಸಹಿಗೆ ನಿರಾಕರಣೆ: ಸಂತ್ರಸ್ತೆಯನ್ನು ಅಪಹರಣ ಮಾಡಿಸಿದ್ದಕ್ಕೆ ಸಂಬಂಧಪಟ್ಟಂತೆ ತಪ್ಪೊಪ್ಪಿಗೆ ಹೇಳಿಕೆಗೆ ಸಹಿ ಮಾಡಲು ಎಚ್.ಡಿ.ರೇವಣ್ಣ ನಿರಾಕರಿಸುತ್ತಿರುವುದಾಗಿ ಗೊತ್ತಾಗಿದೆ.

ಎಸ್‌ಐಟಿ ಅಧಿಕಾರಿಗಳು, ಆರೋಪಿ ಹೇಳಿಕೆ ಸಿದ್ಧಪಡಿಸಿ ಸಹಿ ಮಾಡುವಂತೆ ಕೋರಿದ್ದರು. ಆದರೆ, ರೇವಣ್ಣ ಸಹಿ ಮಾಡಿಲ್ಲ. ತಾವು ಹೇಳಿದಂತೆ ಬರೆದರೆ ಮಾತ್ರ ಸಹಿ ಮಾಡುವುದಾಗಿ ಅವರು ಬೇಡಿಕೆ ಇರಿಸುತ್ತಿದ್ದಾರೆ. ಇದೇ ಕಾರಣಕ್ಕೂ ರೇವಣ್ಣ ಅವರಿಂದ ಸೋಮವಾರ ಯಾವುದೇ ಲಿಖಿತ ಹೇಳಿಕೆಯನ್ನು ಅಧಿಕಾರಿಗಳು ಪಡೆದಿಲ್ಲವೆಂಬುದು ಗೊತ್ತಾಗಿದೆ.

ಭವಾನಿ ರೇವಣ್ಣ ಅವರಿಗೂ ನೋಟಿಸ್?: ಅಪಹರಣ ಹಾಗೂ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಪಟ್ಟಂತೆ ಮಹಿಳೆ ಹಲವು ಆರೋಪಿಗಳ ಹೆಸರು ಹೇಳಿದ್ದಾರೆ. ಅವರೆಲ್ಲರಿಗೂ ನೋಟಿಸ್ ನೀಡಲು ಎಸ್‌ಐಟಿ ತಯಾರಿ ನಡೆಸಿದೆ. ಕೃತ್ಯಕ್ಕೆ ಸಹಕರಿಸಿದ್ದ ಆರೋಪದಡಿ ರೇವಣ್ಣ ಅವರ ಪತ್ನಿ ಭವಾನಿ ಅವರಿಗೂ ನೋಟಿಸ್ ನೀಡುವ ಸಾಧ್ಯತೆ ಇರುವುದಾಗಿ ಮೂಲಗಳು ಹೇಳಿವೆ.

'ಅಶ್ಲೀಲ ವಿಡಿಯೊ ಇಟ್ಟುಕೊಂಡರೂ ಕ್ರಮ'

'ಅಶ್ಲೀಲ ವಿಡಿಯೊ, ಫೋಟೊ ಹಾಗೂ ಧ್ವನಿ ಮುದ್ರಣವನ್ನು ಇಟ್ಟುಕೊಳ್ಳುವುದು ಸಹ ಅಪರಾಧ. ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್ ಹಾಗೂ ಇತರೆ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಸಂಗ್ರಹಿಸಿಟ್ಟುಕೊಂಡಿದ್ದು ಪತ್ತೆಯಾದರೆ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಎಸ್‌ಐಟಿ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಹಾಗೂ ಜೆಡಿಎಸ್ ಶಾಸಕ ಎಚ್.ಡಿ.ರೇವಣ್ಣ ವಿರುದ್ಧ ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಪಟ್ಟ ಅಶ್ಲೀಲ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ. ಇದರಿಂದ ಸಂತ್ರಸ್ತೆಯರ ಗೌರವಕ್ಕೆ ಧಕ್ಕೆ ಉಂಟಾಗಿತ್ತು. ಇದೇ ಕಾರಣಕ್ಕೆ, ವಿಡಿಯೊ ಹಂಚಿಕೊಳ್ಳದಂತೆ ಎಸ್‌ಐಟಿ ಭಾನುವಾರ ಎಚ್ಚರಿಕೆ ನೀಡಿತ್ತು.

ಸೋಮವಾರ ಮತ್ತೊಂದು ಪತ್ರಿಕಾ ಪ್ರಕಟಣೆ ನೀಡಿರುವ ಎಸ್‌ಐಟಿ ಮುಖ್ಯಸ್ಥ ಬಿ.ಕೆ.ಸಿಂಗ್, 'ಅಶ್ಲೀಲ ವಿಡಿಯೊ, ಫೋಟೊ ಹಾಗೂ ಧ್ವನಿವರ್ಧಕ ಹಂಚಿಕೊಳ್ಳುವುದಷ್ಟೇ ಅಲ್ಲದೇ ಇಟ್ಟುಕೊಳ್ಳುವುದು ಸಹ ಅಪರಾಧ. ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಕ್ರಮ ಜರುಗಿಸಲು ಅವಕಾಶವಿದೆ' ಎಂದಿದ್ದಾರೆ.

'ಯಾರಾದರೂ ಅಂಥ ವಿಡಿಯೊ ಹಾಗೂ ಫೋಟೊ ಇಟ್ಟುಕೊಂಡಿದ್ದರೆ 'ಅಳಿಸಿ (ಡಿಲಿಟ್)' ಹಾಕುವುದರಿಂದ ಕಾನೂನು ಕ್ರಮಗಳಿಂದ ಪಾರಾಗುವ ಸಾಧ್ಯತೆ ಇರುತ್ತದೆ' ಎಂದೂ ಹೇಳಿದ್ದಾರೆ.

ಸತೀಶ್ ಬಾಬಣ್ಣ ಎಸ್‌ಐಟಿ ಕಸ್ಟಡಿಗೆ

ಅಪಹರಣ ಆರೋಪದಡಿ ಕೆ.ಆರ್.ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಬಂಧಿಸಲಾಗಿದ್ದ ಸತೀಶ್ ಬಾಬಣ್ಣ ಅವರನ್ನು ಎಸ್‌ಐಟಿ ಅಧಿಕಾರಿಗಳು ಮುಂದಿನ 8 ದಿನಗಳವರೆಗೆ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

'ರೇವಣ್ಣ ಹಾಗೂ ಇತರರು, ಸತೀಶ್ ಬಾಬಣ್ಣ ಮೂಲಕವೇ ಸಂತ್ರಸ್ತೆಯನ್ನು ಅಪಹರಣ ಮಾಡಿಸಿದ್ದರು. ಹೀಗಾಗಿ, ಇವರ ವಿಚಾರಣೆ ಅಗತ್ಯವಿರುವುದಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ವಿಚಾರಣೆ ನಡೆಸಿದ ಕೋರ್ಟ್, ಸತೀಶ್‌ನನ್ನು ಕಸ್ಟಡಿಗೆ ನೀಡಿದೆ. ಈತನನ್ನು ಎಸ್‌ಐಟಿ ಕಚೇರಿಗೆ ಕರೆತಂದು ವಿಚಾರಣೆ ಮುಂದುವರಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಲಂಚದ ಆರೋಪ: ಬಿಲ್ ಪಾವತಿ ಸ್ಥಗಿತ!

ಅಧಿಕಾರಿಗಳಿಂದ ಬೇಡಿಕೆ: ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ.ಮಂಜುನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಲ್ ಪಾವತಿ ಮಾಡಲು ಮುಖ್ಯ ಎಂಜಿನಿಯರ್ ಸೇರಿದಂತೆ ಹಲವು ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇರಿಸುತ್ತಿದ್ದಾರೆ' ಎಂಬ ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ.ಮಂಜುನಾಥ್ ಆರೋಪದ ಹಿನ್ನೆಲೆಯಲ್ಲಿ ಎಲ್ಲ ರೀತಿಯ ಬಿಲ್ ಪಾವತಿಯನ್ನು ಸ್ಥಗಿತಗೊಳಿಸಲಾಗಿದೆ.

'ಬಿಲ್ ಪಾವತಿಯಾಗಬೇಕು ಎಂಬ ಸಂದರ್ಭದಲ್ಲಿ 'ರ‍್ಯಾಂಡಮೈಸೇಷನ್ ಚೆಕ್ಕಿಂಗ್' ಹೆಸರಿನಲ್ಲಿ ಮತ್ತೆ ತಪಾಸಣೆ ಮಾಡಬೇಕು, ಗುಣಮಟ್ಟದ ವರದಿ ಸಲ್ಲಿಸಬೇಕು ಎಂದು ಮುಖ್ಯ ಎಂಜಿನಿಯರ್‌ಗಳು ತಕರಾರು ಎತ್ತುತ್ತಿದ್ದಾರೆ. ಲಂಚ ಕೊಟ್ಟರೆ ಯಾವ ಪರಿಶೀಲನೆಯೂ ಇಲ್ಲದೆ ಪಾವತಿಯಾಗುತ್ತಿದೆ' ಎಂದು ಅವರು ದೂರಿದ್ದರು. ಈ ಬಗ್ಗೆ, 'ಪ್ರಜಾವಾಣಿ'ಯಲ್ಲಿ ಮೇ 5ರಂದು 'ಬಿಬಿಎಂಪಿ: ಬಿಲ್ ಪಾವತಿಗೆ ಲಂಚ' ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು.

'ಬಿಬಿಎಂಪಿ ಅನುದಾನದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳೂ ಸೇರಿದಂತೆ ಯಾವ ಬಿಲ್‌ಗಳನ್ನೂ ಗುತ್ತಿಗೆದಾರರಿಗೆ ಸದ್ಯಕ್ಕೆ ಪಾವತಿ ಮಾಡಬೇಡಿ ಎಂದು ವಲಯಗಳ ಮುಖ್ಯ ಎಂಜಿನಿಯರ್‌ಗಳಿಗೆ ಪ್ರಧಾನ ಎಂಜಿನಿಯರ್ (ಇಐಸಿ) ಅವರು ಮೌಖಿಕವಾಗಿ ತಿಳಿಸಿದ್ದಾರೆ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

'ಸರ್ಕಾರದ ಅನುದಾನದ ಕಾಮಗಾರಿಗಳಿಗೆ ಶೇ7.5 ಹಾಗೂ ಬಿಬಿಎಂಪಿ ಅನುದಾನದ ಕಾಮಗಾರಿಗಳ ಬಿಲ್ ಪಾವತಿಗೆ ಶೇ3.5ರಷ್ಟು ಲಂಚ ನೀಡಬೇಕು' ಎಂದು ಆರೋಪಿಸಲಾಗಿತ್ತು. 'ಲಂಚ ಪಡೆಯುತ್ತಿರುವವರ ಮೇಲೆ ಕ್ರಮ ಕೈಗೊಳ್ಳದೆ, ಬಿಲ್ ಪಾವತಿಯನ್ನೇ ನಿಲ್ಲಿಸಿರುವುದು ಸರಿಯಲ್ಲ' ಎಂದು ಗುತ್ತಿಗೆದಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತುರ್ತು ಕಾಮಗಾರಿ ಆರಂಭಿಸಲು ಆಯೋಗಕ್ಕೆ ಮನವಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ತುರ್ತು ಕಾಮಗಾರಿಗಳನ್ನು ಆರಂಭಿಸಲು ಅನುಮತಿ ನೀಡಬೇಕು ಎಂದು ರಾಜ್ಯ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಲು ಬಿಬಿಎಂಪಿ ಚಿಂತನೆ ನಡೆಸಿದೆ.

ಮಳೆಗಾಲ ಆರಂಭವಾಗುತ್ತಿರುವುದರಿಂದ, ಕಾರ್ಯಾದೇಶ ನೀಡಿರುವ ಹಾಗೂ ಟೆಂಡರ್ ಹಂತದಲ್ಲಿರುವ ಕೆಲವು ತುರ್ತು ಕಾಮಗಾರಿಗಳನ್ನು ಆರಂಭಿಸಬೇಕಾಗಿದೆ. ಆದರೆ, ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜೂನ್ 5ರವರೆಗಿದೆ. ಅಲ್ಲಿಯವರೆಗೆ ಕಾಮಗಾರಿ ಆರಂಭಿಸದಿದ್ದರೆ ಸಮಸ್ಯೆ ಉದ್ಭವಿಸುವ ಸಾಧ್ಯತೆ ಇದೆ.

ಲೋಕಸಭಾ ಚುನಾವಣೆಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಮತದಾನ ಮುಗಿದು 10 ದಿನಗಳಾಗಿವೆ. ಮಂಗಳವಾರ ಮತದಾನ ಮುಗಿದರೆ, ರಾಜ್ಯದ ಅಷ್ಟೂ ಕ್ಷೇತ್ರಗಳ ಮತದಾನ ಪೂರ್ಣಗೊಂಡಂತಾಗುತ್ತದೆ. ಹೀಗಾಗಿ, ನೀತಿ ಸಂಹಿತೆ ಅವಧಿಯಲ್ಲೂ ತುರ್ತು ಕಾಮಗಾರಿಯನ್ನು ಆರಂಭಿಸಲು ಅನುವು ಮಾಡಿಕೊಡಬೇಕೆಂದು ಚುನಾವಣೆ ಆಯೋಗಕ್ಕೆ ಮನವಿ ಸಲ್ಲಿಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ.

ಬೆಂಗಳೂರು ಪದವೀಧರರ ಕ್ಷೇತ್ರ ಸೇರಿದಂತೆ ವಿಧಾನಪರಿಷತ್‌ನ ಆರು ಸ್ಥಾನಗಳಿಗೆ ಚುನಾವಣೆ ಘೋಷಣೆಯಾಗಿದ್ದು, ಮೇ 9ರಂದು ಅಧಿಸೂಚನೆ ಪ್ರಕಟವಾಗಲಿವೆ. ಇದಕ್ಕೂ ಮಾದರಿ ನೀತಿ ಸಂಹಿತೆ ಈಗಾಗಲೇ ಜಾರಿಯಲ್ಲಿದೆ. ಹೀಗಾಗಿ, ಹೊಸ ಕಾಮಗಾರಿಗಳ ಆರಂಭಕ್ಕೆ ಚುನಾವಣೆ ಆಯೋಗ ಅನುಮತಿ ನೀಡುವುದಿಲ್ಲ ಎಂಬ ಆತಂಕವೂ ಎದುರಾಗಿದೆ.

ಪದವೀಧರರ ಕ್ಷೇತ್ರಕ್ಕೆ ಜೂನ್ 3ರಂದು ಮತದಾನ ನಡೆಯಲಿದ್ದು, ನೀತಿ ಸಂಹಿತೆ ಜೂನ್ 12ರವರೆಗೂ ಇದೆ. ಆ ವೇಳೆಗೆ ಮಳೆಗಾಲ ಹೆಚ್ಚಾಗುತ್ತದೆ. ಆದ್ದರಿಂದ ಈ ಎಲ್ಲ ನೀತಿ ಸಂಹಿತೆ ನಡುವೆಯೂ ತುರ್ತು ಕಾಮಗಾರಿಗಳಿಗೆ ಅನುಮತಿ ನೀಡಲು ಚುನಾವಣೆ ಆಯೋಗಕ್ಕೆ ಮನದಟ್ಟು ಮಾಡಿಕೊಡಲು ಬಿಬಿಎಂಪಿ ಅಧಿಕಾರಿಗಳು ನಿರ್ಧರಿಸಿದ್ದಾರೆ.

ನಕ್ಷೆ ಅಕ್ರಮ ಮಂಜೂರು: ಸೇವೆಯಿಂದ ಬಿಡುಗಡೆ

ಬೆಂಗಳೂರು: ಅಕ್ರಮವಾಗಿ ಕಟ್ಟಡ ನಕ್ಷೆ ಮಂಜೂರಾತಿ ನೀಡಿದ ನಗರ ಯೋಜನೆ ಪಶ್ಚಿಮ ವಲಯದ ಸಹಾಯಕ ನಿರ್ದೇಶಕ ಸಿ. ನಾರಾಯಣ ಸ್ವಾಮಿ ಅವರನ್ನು ಬಿಬಿಎಂಪಿ ಸೇವೆಯಿಂದ ಬಿಡುಗಡೆ ಮಾಡಲಾಗಿದೆ.

ಲೋಕೋಪಯೋಗಿ ಇಲಾಖೆಯ ನಾರಾಯಣಸ್ವಾಮಿ ಅವರು ಎರವಲು ಸೇವೆಯಲ್ಲಿ ಬಿಬಿಎಂಪಿಗೆ ನಿಯೋಜನೆಗೊಂಡು ಪಶ್ಚಿಮ ವಲಯದಲ್ಲಿ ಸಹಾಯಕ ನಿರ್ದೇಶಕರಾಗಿದ್ದರು. ರಾಜಮಹಲ್ ವಿಲಾಸ್‌ನ 9ನೇ ಮುಖ್ಯರಸ್ತೆಯ 32ನೇ ಸಂಖ್ಯೆ ಸ್ವತ್ತಿಗೆ ಅಕ್ರಮವಾಗಿ ನಕ್ಷೆ ಮಂಜೂರು ನೀಡಿದ್ದಾರೆ.

ದಾಖಲೆಗಳು ನಕಲಿ ಎಂಬ ಮಾಹಿತಿ ಇದ್ದರೂ, ನಾರಾಯಣಸ್ವಾಮಿ ಲಾಗಿನ್ ಮೂಲಕ ಅವುಗಳನ್ನು ಅಪ್‌ಲೋಡ್ ಮಾಡಿ, ಅಕ್ರಮವಾಗಿ ನಕ್ಷೆ ಮಂಜೂರು ಮಾಡಿದ್ದಾರೆ. ಇದನ್ನು ಗಂಭೀರ ಕರ್ತವ್ಯಲೋಪ ಎಂದು ಪರಿಗಣಿಸಿ, ಅವರ ಸೇವೆ ಪಾಲಿಕೆಗೆ ಅವಶ್ಯವಿಲ್ಲ ಎಂದು ಬಿಬಿಎಂಪಿ ಸೇವೆ, ಕಚೇರಿ ಕೆಲಸಗಳಿಂದ ಬಿಡುಗಡೆಗೊಳಿಸಿ ಮುಖ್ಯ ಆಯುಕ್ತರ ಆದೇಶದ ಮೇರೆಗೆ ಆಡಳಿತ ವಿಭಾಗದ ಉಪ ಆಯುಕ್ತರು ಮೇ 6ರಂದು ಆದೇಶ ಹೊರಡಿಸಿದ್ದಾರೆ.



ನಗರದ ನಾಗರಾಬಾವಿಯ ಕಲಾಗ್ರಾಮದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಕಲಾ ದರ್ಪಣ–ಆರ್ಟ್ ರಿಫ್ಲೆಕ್ಟ್ ಸಂಸ್ಥೆ ನೀಡುವ 'ಕಲಾದರ್ಪಣ' ಪ್ರಶಸ್ತಿಯನ್ನು ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ಅನಸೂಯ ದ್ವಾರಕನಾಥ ಮತ್ತು ನಪದ ಗಾಯಕ ಗೋ.ನಾ ಸ್ವಾಮಿ ಅವರಿಗೆ ಪ್ರದಾನ ಮಾಡಲಾಯಿತು. ತಬಲವಾದಕ ಪಂಡಿತ್ ಸತೀಶ್ ಹಂಪಿಹೊಳಿ, ಎಸ್‌ಎಸ್‌ವಿಎಸ್‌ಪಿಎಸ್ ಶಾಲೆಯ ಪ್ರಾಂಶುಪಾಲರಾದ ಲತಾ ಎಸ್., ಹೇಮಾ ವಿನಾಯಕ್ ಪಾಟೀಲ ಮತ್ತು ಕರ್ನಾಟಕ ಚಿತ್ರಕಲಾ ಪರಿಷತ್ತಿನ ಪ್ರಾಧ್ಯಾಪಕ ವಿ.ಎಸ್. ನಾಯಕ ಬಳಕೂರು ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

'ಶರಣ ಸಂಗಮ' ಅನುಭವ ಮಂಟಪದಲ್ಲಿ ಶರಣರ ಕಾಯಕ ಸೇವೆ– ಉಪನ್ಯಾಸ: ಸಾನ್ನಿಧ್ಯ: ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಅತಿಥಿಗಳು: ಎಚ್.ಆರ್. ಮಲ್ಲಿಕಾರ್ಜುನಯ್ಯ, ಗಂಗಾಂಬಿಕೆ ಎಸ್., ಮಯೂರ ಎಂ. ದೀಕ್ಷಿತ್, ಋತು ಎಸ್. ಭಟ್, ಅರುಣಕುಮಾರ್, ಆಯೋಜನೆ: ರಾಷ್ಟ್ರೀಯ ಬಸವತತ್ವ ಪರಿಷತ್, ಸ್ಥಳ: ಎಂ. ಚಿದಾನಂದಮೂರ್ತಿ ಸಭಾಂಗಣ, ವಿಜಯನಗರ, ಸಂಜೆ 4.30

ರಾಮನವಮಿ ಸಂಗೀತೋತ್ಸವ–2024: ಸ್ವರೂಪಾನಂದ ಕಶ್ಯಪ್ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ, ವಿಶೇಷ ಕರ್ನಾಟಕ ಸಂಗೀತ ಕಛೇರಿ: ವಿನಯ್ ಶರ್ವ, ಮಥೂರ್ ಶ್ರೀನಿಧಿ, ಕೆ.ಯು. ಜಯಚಂದ್ರ ರಾವ್, ಭಾರಧ್ವಾಜ್ ಆರ್. ಶತವಲ್ಲಿ ಆಯೋಜನೆ: ಶ್ರೀರಾಮ ಸೇವಾ ಮಂಡಲಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 5ರಿಂದ

'ಕಲಾ ಭಾರತ್' ಸಿನಿಮಾ ಮತ್ತು ರಂಗಭೂಮಿ ಕ್ಲಬ್ ಪ್ರಾರಂಭ, 'ಭಾರತ್ ಸ್ಟೋರ್ಸ್' ಚಿತ್ರ ಪ್ರದರ್ಶನ: ಅತಿಥಿ: ಪಿ. ಶೇಷಾದ್ರಿ, ಅಧ್ಯಕ್ಷತೆ: ಕೆ.ಎಸ್. ಗೋಪಾಲಕೃಷ್ಣ, ಆಯೋಜನೆ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯದ ಗ್ರಂಥಾಲಯ, ಸಂಜೆ 6.30

ರಾಮನವಮಿ ಸಂಗೀತೋತ್ಸವ: ನಾಮಸಂಕೀರ್ತನ: ಚಂದನಾ ಬಾಲ ಕಲ್ಯಾಣ್, ಅದಮ್ಯ ರಮಾನಂದ್, ಬಿ.ಕೆ. ರಘು, ಬಿ.ಆರ್. ರವಿಕುಮಾರ್ ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30ರಿಂದ

'ಸರಸ ವಿರಸ ಸಮರಸ' ನಾಟಕ ಪ್ರದರ್ಶನ: ಆಯೋಜನೆ: ಸುಸ್ಥಿರ ಫೌಂಡೇಶನ್, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7

ಕ್ಷೇಮ ಕುಶಲ


ರೋಗಗಳು ಎಷ್ಟೇ ಬರಲಿ ಮನಸ್ಸು ಗಟ್ಟಿ ಇರಲಿ

ಡಾ. ಕಿರಣ್ ವಿ. ಎಸ್.

ಅನೇಕ ಅಂಗಾಂಗಗಳಿರುವ ನಮ್ಮ ದೇಹ ಒಂದು ಸಮಷ್ಟಿ ರಚನೆ. ಹೀಗಾಗಿ, ದೇಹದ ಯಾವುದೇ ಒಂದು ಅಂಗಕ್ಕೆ ಸಮಸ್ಯೆ ಬಂದರೂ ಇಡೀ ದೇಹಕ್ಕೆ ಅಹಿತವಾಗುತ್ತದೆ. ಆ ಸಮಸ್ಯೆಯ ನಿವಾರಣೆಗೆ ಅನೇಕ ಅಂಗಗಳು ತಮ್ಮ ಸಾಮರ್ಥ್ಯಕ್ಕಿಂತ ಹೆಚ್ಚು ಕೆಲಸ ಮಾಡಿ ಸಹಾಯ ನೀಡುತ್ತವೆ. ಈ ಎಲ್ಲ ಹೊಂದಾಣಿಕೆಯ ಪ್ರಕ್ರಿಯೆಗಳನ್ನೂ ಮಿದುಳು ನಿರ್ವಹಿಸುತ್ತದೆ. ಉದಾಹರಣೆಗೆ, ಕಾಲಿಗೆ ಪೆಟ್ಟಾದಾಗ ಹೃದಯದ ಬಡಿತ ವೇಗವಾಗಿ, ಪೆಟ್ಟಾದ ಜಾಗಕ್ಕೆ ಹೆಚ್ಚು ರಕ್ತಸಂಚಾರ ಆಗುವಂತೆ ಮಾಡಿ, ಹೆಚ್ಚಿನ ಪೋಷಕಾಂಶಗಳನ್ನು ಒದಗಿಸುತ್ತದೆ; ರಿಪೇರಿ ಮಾಡಬಲ್ಲ ರಕ್ತಕೋಶಗಳನ್ನು ತಲುಪಿಸುತ್ತದೆ. ಉಸಿರಾಟದ ಗತಿ ಮತ್ತು ಆಳ ಹೆಚ್ಚಾಗಿ, ಶ್ವಾಸಕೋಶಗಳು ಹೆಚ್ಚಿನ ಆಕ್ಸಿಜನ್ ಒದಗಿಸುತ್ತವೆ. ಸುತ್ತಮುತ್ತಲ ಸ್ನಾಯುಗಳು ತಮ್ಮ ಕೆಲಸವನ್ನು ಕಡಿಮೆ ಮಾಡಿ ಪೆಟ್ಟಾದ ಜಾಗ ಹೆಚ್ಚು ಅಲುಗಾಡದಂತೆ ನೋಡಿಕೊಳ್ಳುತ್ತವೆ. ಒಟ್ಟಾರೆ, ಇಡೀ ದೇಹ ಸಮಸ್ಯೆಗೆ ಸ್ಪಂದಿಸುತ್ತದೆ.

ಆದರೆ ದೇಹಕ್ಕೆ ಹಲವಾರು ದೀರ್ಘಕಾಲಿಕ ಕಾಯಿಲೆಗಳು ಅಡರಿಕೊಂಡಾಗ ಪರಿಣಾಮ ಏನಾಗಬಹುದು? ಮಧುಮೇಹ, ಅಧಿಕ ರಕ್ತದೊತ್ತಡ, ಸಂಧಿವಾತ, ಸ್ನಾಯುಗಳ ಕಂಪನ, ಬೊಜ್ಜು, ಹೃದಯದೌರ್ಬಲ್ಯ, ಕಿಡ್ನಿಗಳ ವೈಫಲ್ಯ ಮೊದಲಾದುವು ದೀರ್ಘಕಾಲಿಕ ಕಾಯಿಲೆಗಳು. ಇವುಗಳಲ್ಲಿ ಬಹುತೇಕ ಕಾಯಿಲೆಗಳಿಗೆ ಶಾಶ್ವತ ಪರಿಹಾರ ಎನ್ನುವುದು ಇಲ್ಲ. ಔಷಧಗಳು, ಜೀವನಶೈಲಿಯ ಸೂಕ್ತ ಬದಲಾವಣೆಗಳ ಮೂಲಕ ಕಾಯಿಲೆಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು, ಅವುಗಳೊಡನೆ ಸಹಬಾಳ್ವೆ ಮಾಡಬೇಕಾಗುತ್ತದೆ. ಎಷ್ಟೇ ಶಿಸ್ತಾಗಿ ಬದುಕಿದರೂ ಒಮ್ಮೊಮ್ಮೆ ಅವುಗಳ ನಿಯಂತ್ರಣ ಏರುಪೇರಾಗಿ ಸಮಸ್ಯೆ ಮೂಡುವುದುಂಟು. ಒಂದಕ್ಕಿಂತ ಹೆಚ್ಚಿನ ಇಂತಹ ಸಮಸ್ಯೆಗಳು ಇದ್ದರೆ, ಅವುಗಳ ಪರಸ್ಪರ ಪೂರಕ ನಿಯಂತ್ರಣ ಬಹಳ ತ್ರಾಸದಾಯಕ. ಒಂದು ಕಾಯಿಲೆಯ ನಿಯಂತ್ರಣ ಮತ್ತೊಂದನ್ನು ಉಲ್ಬಣಿಸುವ ಸಮಸ್ಯೆ ಇದ್ದೇ ಇರುತ್ತದೆ. ಉದಾಹರಣೆಗೆ, ಮಧುಮೇಹ ಮತ್ತು ಸಂಧಿವಾತ. ಮಧುಮೇಹದ ನಿಯಂತ್ರಣದಲ್ಲಿ ವ್ಯಾಯಾಮದ ಅಗತ್ಯವನ್ನು ಹೆಚ್ಚಾಗಿ ಹೇಳಬೇಕಿಲ್ಲ. ಬಿರುಸುನಡಿಗೆ, ಯೋಗಾಸನಗಳು, ಸರಳ ಏರೋಬಿಕ್ ವ್ಯಾಯಾಮಗಳು ಮಧುಮೇಹ ನಿಯಂತ್ರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆದರೆ, ಸಂಧಿವಾತದ ರೋಗಿಗಳಿಗೆ ಇಷ್ಟು ವ್ಯಾಯಾಮ ಸಾಧ್ಯವಾಗುವುದಿಲ್ಲ; ಅವರ ಅಶಕ್ತ ಕೀಲುಗಳು ಆ ಚಲನೆಯನ್ನು ಸಹಿಸಲಾರವು. ಜೊತೆಗೆ, ಸಂಧಿವಾತಕ್ಕೆ ಬಳಸುವ ಹಲವು ಔಷಧಗಳು ಮಧುಮೇಹಿಗಳ ರಕ್ತದಲ್ಲಿನ ಸಕ್ಕರೆಯ ಅಂಶವನ್ನು ಏರಿಸಬಲ್ಲವು. ಇದು ನಿಧಾನವಾಗಿ ಬೊಜ್ಜಿನ ಬೆಳವಣಿಗೆಗೂ ಕಾರಣವಾಗಬಹುದು. ಹೀಗೆ, ಒಂದು ಸಮಸ್ಯೆ ಮತ್ತೊಂದಕ್ಕೆ ದಾರಿ ಮಾಡಿಕೊಡುವುದು ಬಹಳ ಸಾಮಾನ್ಯ.

ಇಂತಹ ಸಂದರ್ಭಗಳಲ್ಲಿ ಬಹಳ ಮಂದಿ ರೋಗಿಗಳ ಮಾನಸಿಕ ಸಾಮರ್ಥ್ಯ ಕುಸಿಯುತ್ತದೆ. ತಮ್ಮ ದೇಹ ತಮ್ಮ ನಿಯಂತ್ರಣದಲ್ಲಿ ಇಲ್ಲ ಎಂಬುದು ಆಘಾತ ನೀಡುವ ವಿಷಯ. ದಿನ ಬೆಳಗಾದರೆ ಯಾವ ಹೊಸ ಆರೋಗ್ಯ ಸಮಸ್ಯೆ ಕಾಡುತ್ತದೋ ಎಂಬ ಆತಂಕ. ಯಾವ ಹೊಸ ಔಷಧ ಸೇವಿಸಿದರೆ ಯಾವ ಅಡ್ಡಪರಿಣಾಮವಾಗಿ ಮತ್ಯಾವ ತೊಂದರೆ ಉಲ್ಬಣವಾಗುತ್ತದೋ ಎಂಬ ಭೀತಿ. ಇಷ್ಟು ಉದ್ವೇಗಗಳ ನಡುವೆ ಮನಸ್ಸನ್ನು ಶಾಂತವಾಗಿ ಇಟ್ಟುಕೊಳ್ಳುವುದು ಸುಲಭದ ಮಾತಲ್ಲ. ಮಾನಸಿಕ ಉದ್ವೇಗ ಭೌತಿಕ ದೇಹದ ಹಲವಾರು ಕೆಲಸಗಳನ್ನು, ಅಂಗಗಳ ನಡುವಿನ ಸಮನ್ವಯವನ್ನು ಕೆಡಿಸಬಲ್ಲದು. ಇದೊಂದು ರೀತಿಯ ವಿಷಮ ಆವರ್ತನ ಚಕ್ರ. ಮನಸ್ಸಿನ ಭೀತಿ ದೈಹಿಕ ಆರೋಗ್ಯದ ಮೇಲೆ ಅಸಹಜ ಪರಿಣಾಮವನ್ನು ಬೀರಿ ಚಿತ್ತಶಾಂತಿಯನ್ನು ಮತ್ತಷ್ಟು ಕಂಗೆಡಿಸುತ್ತದೆ. ಒಮ್ಮೆ ಇದರ ಚಕ್ರವ್ಯೂಹಕ್ಕೆ ಸಿಲುಕಿದರೆ ಹೊರಬರುವುದು ಬಹಳ ಕಠಿಣ. ಮಾನಸಿಕ ಧೃಢತೆಯನ್ನು ಕಳೆದುಕೊಂಡರೆ ಆರೋಗ್ಯದ ಒಟ್ಟಾರೆ ಸುಧಾರಣೆ ಸುಲಭವಲ್ಲ. ಹೀಗಾಗಿ ಮನಸ್ಸನ್ನು ಶಾಂತವಾಗಿ, ಧೃಢವಾಗಿ ಇಟ್ಟುಕೊಳ್ಳುವತ್ತ ಪ್ರಯತ್ನಗಳು ಸದಾ ನಡೆಯುತ್ತಿರಬೇಕು. ಇದಕ್ಕೆ ಕೆಲವು ಸಲಹೆಗಳಿವೆ:



1 ಆರೋಗ್ಯ ಸಮಸ್ಯೆಗಳು ಎಷ್ಟೇ ಇರಲಿ; ಅವೆಲ್ಲವನ್ನೂ ನಿಮ್ಮ ವಿಶ್ವಾಸಕ್ಕೆ ಪಾತ್ರವಾಗಿರುವ ಒಬ್ಬರು ವೈದ್ಯರ ಸುಪರ್ದಿಯಲ್ಲಿ ಇರಿಸಬೇಕು. ಸಣ್ಣ-ಪುಟ್ಟ ಏರುಪೇರುಗಳನ್ನು ಇಂತಹ ಅನುಭವಿ ವೈದ್ಯರು ಸುಲಭವಾಗಿ ಪರಿಹರಿಸುತ್ತಾರೆ. ಪ್ರತಿಬಾರಿಯೂ ಆಯಾ ಸಮಸ್ಯೆಯ ತಜ್ಞವೈದ್ಯರನ್ನೇ ಕಾಣಬೇಕು ಎಂಬುದಿಲ್ಲ. ಅನೇಕ ಬಾರಿ ಒಂದು ಸಮಸ್ಯೆಯ ತಜ್ಞವೈದ್ಯರಿಗೆ ನಿಮಗೆ ಇರುವ ಮತ್ತೊಂದು ಸಮಸ್ಯೆಯ ಬಗ್ಗೆ ಹೆಚ್ಚಿನ ಅರಿವು ಇಲ್ಲದಿರಬಹುದು. ಹೀಗಾಗಿ, ಅವರು ಔಷಧಗಳನ್ನು ಬದಲಾಯಿಸುವ ಮುನ್ನ ಈ ಸಂಗತಿಯನ್ನು ಗಮನಿಸದೆ ಇರಬಹುದು. ಆದರೆ ನೀವು ಸದಾ ಕಾಣುವ ಕುಟುಂಬ ವೈದ್ಯರಿಗೆ ಇವೆಲ್ಲವೂ ತಿಳಿದಿರುತ್ತವೆ. ಅಗತ್ಯ ಬಂದಾಗ ಅವರೇ ಕ್ಲುಪ್ತ ಮಾಹಿತಿಯನ್ನು ಬರೆದು ತಜ್ಞವೈದ್ಯರ ಸಲಹೆಗೆ ನಿಮ್ಮನ್ನು ಕಳಿಸುತ್ತಾರೆ. ಇದರಿಂದ 'ಏನಾಗಿಹೋಗುವುದೋ' ಎನ್ನುವ ಆತಂಕ ಇರುವುದಿಲ್ಲ.

2 ದೀರ್ಘಕಾಲಿಕ ಕಾಯಿಲೆಗಳನ್ನು ಒಪ್ಪಿಕೊಳ್ಳಬೇಕು. ಶಾಶ್ವತ ಚಿಕಿತ್ಸೆ ಇಲ್ಲದಿರುವ ಕಾಯಿಲೆಗಳನ್ನು ಯಾವ್ಯಾವುದೋ ಜಾದೂ ಮಾದರಿಯ ಚಿಕಿತ್ಸೆಯಿಂದ ಗುಣಪಡಿಸುವ ಮಾತುಗಳನ್ನು ನಂಬಬಾರದು. ಈ ವಿಷಯದಲ್ಲಿ ತಜ್ಞವೈದ್ಯರ ಮಾತೇ ಅಂತಿಮ. ಕಾಯಿಲೆಗಳ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಅವನ್ನು ನಿಯಂತ್ರಿಸಬೇಕೇ ಹೊರತು, ಎಂತಹದೋ ಅಪಾಯಕಾರಿ ಪ್ರಯೋಗಗಳಿಗೆ ದೇಹವನ್ನು ಒಡ್ಡಬಾರದು.

3 ಪ್ರಾಣಾಯಾಮ, ಧ್ಯಾನ, ಅಧ್ಯಾತ್ಮಚಿಂತನೆ, ಸಮಾಜಕ್ಕೆ ಅಭಿಮುಖವಾದ ಹವ್ಯಾಸಗಳು, ಆರೋಗ್ಯಕರ ಜೀವನಶೈಲಿ, ಕುಟುಂಬ ಸಭ್ಯರೊಡನೆ ಒಳ್ಳೆಯ ಸಂಬಂಧ, ಸಮಾನಮನಸ್ಕ ಮಿತ್ರಬಳಗ, ಮಾನಸೋಲ್ಲಸವಾದ ಹವ್ಯಾಸಗಳು ಮೊದಲಾದುವು ಮನಸ್ಸಿನ ಶಾಂತಿಗೆ, ದೃಢತೆಗೆ ಕಾರಣವಾಗಿ, ಜೀವನದ ಕಠಿಣ ಆರೋಗ್ಯ ಸಮಸ್ಯೆಗಳನ್ನೂ ಸಹ್ಯವಾಗಿಸಬಲ್ಲವು.

ಜೀವನಪಯಣದಲ್ಲಿ ಅನಾರೋಗ್ಯಗಳು ಅಹಿತಕರ ಸಹ-ಪ್ರಯಾಣಿಕರು! ದೇಹದ ಆರೋಗ್ಯವನ್ನು ಸಾಧ್ಯವಾದಷ್ಟೂ ಸ್ಥಿರವಾಗಿ ಇರಿಸಿಕೊಳ್ಳುವಲ್ಲಿ ನಮ್ಮ ಮನಸ್ಸಿನ ದೃಢತೆಯ ಪಾತ್ರ ದೊಡ್ಡದು. ಯಾವುದೇ ಕಾಯಿಲೆಯ ನಿರ್ವಹಣೆಯಲ್ಲೂ ಈ ಅಂಶವನ್ನು ಮರೆಯಬಾರದು.

❖



ಶಾಖಕ್ಕೆ ಪಾನಕಗಳ ತಂಪು

ಡಾ. ಸತ್ಯನಾರಾಯಣ ಭಟ್ ಪಿ.

ಕ್ರೋಧಿಯ ರವಿ ಕಿರಣಗಳು ದಿನೇ ದಿನೇ ಪ್ರಖರವಾಗುತ್ತಿವೆ. ಬೇಸಿಗೆಯಲ್ಲಿ ಕಾಯಿಲೆಗಳ ತಡೆ ಮತ್ತು ರಸಾದಿ ಧಾತುಗಳ ಮರುಪೂರಣದ, ಎಂದರೆ 'ರೀಹೈಡ್ರೇಷನ್' ಹಾದಿಗಳೆಲ್ಲಿವೆ:

- **ಬೆಲ್ಲಪಾನಕ:** ಕಾಳು ಮೆಣಸುಪುಡಿಯ ಪ್ರಮಾಣಕ್ಕೆ ಅನುಗುಣವಾಗಿ ಶುದ್ಧ ನೀರಿಗೆ ಬೆರೆಸಿರಿ. ರಾಸಾಯನಿಕ ರಹಿತ ಬೆಲ್ಲವನ್ನು ಕೂಡಿಸಿರಿ. ಶುದ್ಧ ನೀರು ಪ್ರಮಾಣಕ್ಕನುಗುಣ ಸೇರಿಸಿ. ಜಾತ್ರೆಯ ಜನ ಸಂದಣಿಯಿರಲಿ. ಮನೆ ಬಳಕೆಯ ಮಂದಿಗಾಗಲಿ. ಕಡಿಮೆ ಖರ್ಚಿನ ದಿನದಿನದ ಪಾನಕ ಸಿದ್ಧ. ಕಫದ ಕಾಯಿಲೆ, ಗ್ಯಾಸ್ಟ್ರಿಕ್ ಸಂಗಡ ದಣಿವಡಗಿಸುವ ದ್ರವಾಹಾರ ಸಿದ್ಧ.
- **ಶುಂಠಿ, ಲಿಂಬೆ ಸಹಿತ ಇಕ್ಷು ರಸ:** ಕಬ್ಬಿ ಹಾಲು ತಾಜಾ ಇರಲಿ. ತಕ್ಷಣ ಎನರ್ಜಿ. ಮೂತ್ರಪ್ರವೃತ್ತಿ ಸರಾಗ.
- **ಖರ್ಜೂರಾದಿ ಮಂಥ:** ಖರ್ಜೂರ, ದಾಳಿಂಬೆ, ಒಣದ್ರಾಕ್ಷಿ, ಹಳೆಹುಣಸೆ, ಹಸಿ ನೆಲ್ಲಿಕಾಯಿ ಮಿಶ್ರಣದ ದ್ರವಾಹಾರ. ಮಿಕ್ಸಿಗೆ ಹಾಕಿ ಸಿದ್ಧಮಾಡಿ ಕುಡಿಯಿರಿ. ಎಲ್ಲ ಸಿಗದಾದರೆ ಒಂದೊಂದನ್ನೂ ಬಳಸಲು ಶಕ್ಯ. ಎಳೆಗೂಸಿನಿಂದ ವೃದ್ಧರಿಗೂ ಅತ್ಯಂತ ಚೇತೋಹಾರಿ.
- **ತಿಲಜೀವನ:** ಕರಿ ಎಳ್ಳು ಹಾಲೊಡನೆ ಬೀಸಿದ ಜ್ಯೂಸ್ ಉತ್ತಮ ಶಕ್ತಿದಾಯಕ. ಎಳ್ಳಿನ ಕಷಾಯ ಸಹ ಇಂತಹದೇ ದ್ರವಾಹಾರ. ತಣಿದ ಕಷಾಯಕ್ಕೆ ಬೆಲ್ಲ ಅಥವಾ ಜೇನು ಬೆರೆಸಿ.
- **ತೆಂಗಿನ ಕಾಯಿ ಹಾಲು:** ತಾಜಾ ಕಾಯಿ ತಿರುಳು ರುಬ್ಬಿಕೊಳ್ಳಿರಿ. ಹಾಲು ಹಿಂಡಿಕೊಳ್ಳಿರಿ. ಕುಡಿಯಲು ಬಹಳ ಸ್ವಾದಿಷ್ಟ. ಮಕ್ಕಳಿಗೆ, ಹಿರಿಯರಿಗೆ ಮಲಪ್ರವೃತ್ತಿ ಸರಾಗ.
- **ಎಳನೀರು:** ಬೇಸಿಗೆಯಲ್ಲಿ ಅತ್ಯಂತ ತುಟ್ಟಿಯಾಗುವ ತಾಜಾ ಎಳನೀರು ಅಮೃತೋಪಮ. ಜೇನುಗೂಡಿಸಿ ಕುಡಿದರೆ ಅನುಪಮ ಆರೋಗ್ಯ. ಎಲ್ಲಾ ವಯಸ್ಸಿನವರಿಗೆ ಒಗ್ಗುವಂಥದ್ದು.
- **ಆಮ್ರ ರಸಾಲ:** ಹಣ್ಣುಗಳ ರಾಜ ಮಾವು. ಹೃದಯದ ಟಾನಿಕ್ ಪಟ್ಟಿಯಲ್ಲಿ ದಾಳಿಂಬೆ, ಮುರುಗಲ, ಅಂಬಟೆ, ದಾಳಿಂಬೆ, ವಾಟೆ ಹುಳಿ, ಕೌಳಿ ಹಣ್ಣು, ದ್ರಾಕ್ಷಿ ಹಣ್ಣು ಮುಂತಾದ ಹತ್ತು ಹಣ್ಣುಗಳಿವೆ. ಮೊದಲನೆಯ ಆಯ್ಕೆ ಮಾವು. ಮಾವಿನ ಕಾಯಿಯ ಬೇಯಿಸಿದ ಜ್ಯೂಸ್ ಅಪ್ಪೆ ಹುಳಿ ಹೆಸರಿನದು. ಹಣ್ಣಿನ ರಸಕ್ಕೆ 'ರಸಾಲ' ಎಂಬರು. ಪಟ್ಟಿಯ ಉಳಿದ ಹಣ್ಣುಗಳೂ ಅಂತಹದೇ ಉಪಕಾರಿ ಗುಣದವು. ಹೃದಯದ ಕಾಯಿಲೆ ತಡೆಯುವ ಶಕ್ತಿ ಇವಕ್ಕಿವೆ.
- **ಸೊಗದೆ ಷರಬತ್:** ನಾಮದ ಬೇರು, ನನ್ನಾರಿ, ನಾಮಸೊಗದೆ ಎಂಬ ಹೆಸರಿನ ಅತಿ ಪರಿಮಳದ ಬೇರು ಬಳ್ಳಿ ತಿಳಿಯಿರಿ. ಇದು ಕಾಡಿನ ಮೂಲದ್ದು. ಇದರ ಕಷಾಯ, ಸಕ್ಕರೆ ಪಾಕದಲ್ಲಿ ಬೆರೆಸಿದ ದ್ರವ ಅಂಗಡಿಗಳಲ್ಲಿ ಲಭ್ಯ. ಎಂತಹದೇ ಉಷ್ಣ, ಉರಿಮೂತ್ರವಿರಲಿ, ಚರ್ಮದ ಗಾದರಿ, ಕೆರೆತಗಳಿರಲಿ. ಬೇಸಿಗೆಯುದ್ದಕ್ಕೆ ಕುಡಿಯಲು ಅನುಪಮ ದ್ರವಾಹಾರ.
- **ಮಾದೀಫಲ ರಸಾಯನ:** ಬರೋಬ್ಬರಿ ಕಿಲೋ ತೂಗಬಲ್ಲ ದೊಡ್ಡ ನಿಂಬೆ ಇದು. ಮೂಲವ್ಯಾಧಿಯ ಉಪಟಳ ಬೇಸಿಗೆಯಲ್ಲಿ ಹೆಚ್ಚು. ಗ್ಯಾಸ್ಟ್ರಿಕ್ ಎಂಬ ಶ್ರೀಸಾಮಾನ್ಯರ ಪೆಡಂಭೂತ ವಾಸ್ತವವಾಗಿ ಮೂಲವ್ಯಾಧಿಯ ಮೊದಲ ಲಕ್ಷಣ. ಇಂತಹ ಹಣ್ಣಿನ ತಾಜಾ ಪಾನಕ ತಯಾರಿಸಲಾದೀತು. ನಿತ್ಯ ಸೇವನೆಗೆ ಅರ್ಹ. ನಿಂಬೆ ಷರಬತ್ ರೂಪದಲ್ಲಿ ಮಾಡಿಕೊಳ್ಳಿರಿ. ನಿತ್ಯ ಕುಡಿಯಿರಿ.
- **ಹೆಸರು ಪಾನಕ:** ನೆನೆ ಹಾಕಿದ ಹಸಿರು ಹೆಸರು ಕಾಳುಗಳನ್ನು ಮಿಕ್ಸಿಯಲ್ಲಿ ರುಬ್ಬಿಕೊಳ್ಳಿರಿ. ತಾಜಾ ಪಾನಕ ಅತಿಶಯ ಗುಣಕಾರಿ.
- **ಉದ್ದಿನ ಪಾನಕ:** ಶ್ರಮದ ಕೆಲಸ ಮಾಡುವ ಮಂದಿಗೆ ಇದು ಅತ್ಯಂತ ಅವಶ್ಯ. ಬೆಲ್ಲಗೂಡಿಸಿ ನೆನೆದ ಉದ್ದು ಬೀಸಿ ಸಿದ್ಧಗೊಳಿಸಿದ ಉದ್ದಿನ ಪಾನಕ ಕುಡಿದರೆ ದೇಹಕ್ಕೆ ಬಲ ಮತ್ತು ಪುಷ್ಟಿ.
- **ಸಾಂಬಾರ ಸೌತೆಯ ಪಾನಕ:** ಕರಬೂಜ, ಕಲ್ಲಂಗಡಿ ಪಾನಕ ನಿಮಗೆ ತಿಳಿದಿದೆ. ಕರಾವಳಿ ಮಂದಿಗೆ ಪರಿಚಿತವಾದ ಹಣ್ಣು ಸಾಂಬಾರ್ ಸೌತೆಯ ಪಾನಕ ಗೊತ್ತೇ? ಬೀಜ, ಸಿಪ್ಪೆ ಸುಲಿದ ಹಣ್ಣು ಸೌತೆ ಕಾಯಿ ಕತ್ತರಿಸಿ ಹೋಳಾಗಿಸಿರಿ. ಅಥವಾ ತುರಿಮಣೆಯಲ್ಲಿ ತುರಿಯಿರಿ. ರುಚಿಗೆ ತಕ್ಕ ಬೆಲ್ಲ ಹಾಕಿರಿ. ಎನರ್ಜಿ ಡ್ರಿಂಕ್ ಸಿದ್ಧ.
- **ಬೇಲದ ಹಣ್ಣು, ಕಾಶಿ ಬಿಲ್ಪತ್ರೆ ಹಣ್ಣು ಷರಬತ್:** ಬೇಲ ಮತ್ತು ಬಿಲ್ವಗಳನ್ನು ಬಳಸಿ ಸಿದ್ಧಪಡಿಸುವ ತಾಜಾ ಷರಬತ್ತನ್ನು ಸರ್ವ ರೋಗಸಂಜೀವಿನಿ ಎಂದು ಕರೆದರೆ ಅಚ್ಚರಿಯಿಲ್ಲ.
- **ಸತ್ತೂ:** ಒಂದು ಲೋಟ ನೀರಿಗೆ ಒಂದೇ ಚಮಚೆ ಕಡಲೆ ಹಿಟ್ಟು. ಉಪ್ಪು, ಸಕ್ಕರೆ ಕೂಡಿಸಿ ಕಡೆಗೋಲಿನಿಂದ ಮಥಿಸಿರಿ. ಲೋಟ ತುಂಬ ಕುಡಿದರೆ ಹೊಟ್ಟೆ ತುಂಬುತ್ತದೆ. ಕಡಲೆಧಾನ್ಯಕ್ಕೆ ವಿಷಹರ ಗುಣ ಇದೆ. ಬೇಸಿಗೆಯ ವಿಷ(ಟಾಕ್ಸಿನ್) ಕಳೆಯಲು ಕಡಲೆ ಹಿಟ್ಟಿನ ಪಾನಕ, ಕೋಸಂಬರಿ ಬಳಸಲು ಮರೆಯದಿರಿ.
- **ಕೊತ್ತಂಬರಿ ಕಷಾಯ:** ಇನಿತು ಹಾಲಿಗೆ ನೀರು ಬೆರೆಸಿರಿ. ದನಿಯಾ ಪುಡಿಗೂಡಿಸಿ ಕುದಿಸಿದ ಪಾನೀಯಕ್ಕೆ ಕಲ್ಲುಸಕ್ಕರೆ, ಬೆಲ್ಲಗೂಡಿಸಿ ಹದ ಬಿಸಿ ಕುಡಿದರೆ ದಾಹ, ನೀರಡಿಕೆ ಇಂಗೀತು. ಸಾರ್ವಕಾಲಿಕ ಬಳಕೆಗೆ ಯೋಗ್ಯವಾದ ಬಿಸಿ ಪಾನೀಯ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ –ಇತಿಹಾಸ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

ಹಿಂದಿನ ಪ್ರಶ್ನೆಪತ್ರಿಕೆಯಿಂದ

ಮೊದಲಿಗೆ ಈ ಹಿಂದೆ ವಾರ್ಷಿಕ ಪರೀಕ್ಷೆಗಳಲ್ಲಿ ಈ ಪಾಠದಿಂದ ಕೇಳಲಾದ ಪ್ರಶ್ನೆಗಳನ್ನು ನೋಡೋಣ

1) ಬಕ್ಸಾರ್ ಕದನವು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಮೇಲೆ ಬೀರಿದ ಪರಿಣಾಮಗಳೇನು?

(2024 ಮಾರ್ಚ್ ವಾರ್ಷಿಕ ಪರೀಕ್ಷೆ 3 ಅಂಕದ ಪ್ರಶ್ನೆ)

ಉತ್ತರ:– ಬಕ್ಸಾರ್ ಕದನವು **ಈಸ್ಟ್ ಇಂಡಿಯಾ ಕಂಪನಿಯ ಮೇಲೆ** ಬೀರಿದ ಪರಿಣಾಮಗಳು:–

1. ಈಸ್ಟ್ ಇಂಡಿಯಾ ಕಂಪನಿಯು ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ಎರಡನೇ ಷಾ ಆಲಂ ನಿಂದ ಪಡೆಯಿತು
2. ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಟ್ಟನು
3. ಔದ್‌ನ ನವಾಬನಾದ ಷುಜಾ–ಉದ್–ದೌಲನು ಕಂಪನಿಗೆ ಯುದ್ಧ ನಷ್ಟದ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ನೀಡಿದನು
4. ಮೀರ್‌ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು

ಅಂತಿಮವಾಗಿ ಬಕ್ಸಾರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು ಹಾಗೂ ಔದ್ ಕೂಡ ಅವರ ಅಧೀನದಲ್ಲಿ ಉಳಿಯುವಂತಾಯಿತು. 1765ರಲ್ಲಿ ರಾಬರ್ಟ್ ಕ್ಲೈವನು ಬಂಗಾಳದಲ್ಲಿ 'ದ್ವಿ ಪ್ರಭುತ್ವ' ಪದ್ಧತಿಯನ್ನು ಜಾರಿಗೆ ತಂದನು.

2) ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು ಸ್ಪಷ್ಟೀಕರಿಸಿ

(2019 ಮಾರ್ಚ್ ವಾರ್ಷಿಕ ಪರೀಕ್ಷೆ 2 ಅಂಕದ ಪ್ರಶ್ನೆ)

ಉತ್ತರ:– ಬಕ್ಸಾರ್ ಕದನದ ಪರಿಣಾಮ ಬಿಹಾರ, ಒಡಿಶಾ ಮತ್ತು ಬಂಗಾಳ ಪ್ರಾಂತ್ಯಗಳು ಇಂಗ್ಲಿಷರ ವಶವಾದವು ಮೊಘಲ್ ಚಕ್ರವರ್ತಿ ಷಾ ಅಲಂ ದಿವಾನಿ ಹಕ್ಕನ್ನು ಇಂಗ್ಲಿಷರಿಗೆ ನೀಡಿದನು.

1765ರಲ್ಲಿ ಕಂಪನಿ ಗವರ್ನರ್ ಆಗಿ ನೇಮಕಗೊಂಡಿದ್ದ ರಾಬರ್ಟ್‌ಕ್ಲೈವನು ದ್ವಿ–ಸರ್ಕಾರವನ್ನು ಜಾರಿಗೆ ತಂದನು. ಇದರ ಪ್ರಕಾರ ಇಂಗ್ಲಿಷರು ದಿವಾನಿ ಹಕ್ಕಿನಿಂದಾಗಿ ಭೂ ಕಂದಾಯವನ್ನು ವಸೂಲಿ ಮಾಡಿಕೊಂಡು ತಮ್ಮ ಸಂಪತ್ತನ್ನು ವೃದ್ಧಿಸಿಕೊಂಡರು.. ಈ ರೀತಿ ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು

3) 1453ರಲ್ಲಿ ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡವರು..............................

ಎ) ಅರಬರು ಬಿ) ಅಟೊಮನ್ ಟರ್ಕರು
ಸಿ) ಇಟಲಿ ಡಿ) ಪೋರ್ಚುಗೀಸರು

(2020 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

ಉತ್ತರ:–ಬಿ

4) ಬಂಗಾಳದಲ್ಲಿ ದ್ವಿಪ್ರಭುತ್ವವನ್ನು ಜಾರಿಗೆ ತಂದವನು ಯಾರು?

ಉತ್ತರ:– ರಾಬರ್ಟ್ ಕ್ಲೈವ್

(2020ರ ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)

5) ಕಾನ್‌ಸ್ಟಾಂಟಿನೋಪಲ್‌ನ್ನು ವ್ಯಾಪಾರದ ದ್ವಾರವೆಂದು ಪರಿಗಣಿಸಲಾಗಿತ್ತು. ಏಕೆಂದರೆ ಅದು............

ಎ) ಅಂತಾರಾಷ್ಟ್ರೀಯ ವ್ಯಾಪಾರ ಮಾರ್ಗಗಳ ಕೇಂದ್ರ
ಬಿ) ಅದೊಂದೇ ಜಲಮಾರ್ಗ
ಸಿ) ರೋಮನ್ ಸಾಮ್ರಾಜ್ಯದ ರಾಜಧಾನಿ
ಡಿ) ಯೂರೋಪಿಯನ್ ಸಂಪನ್ಮೂಲಗಳ ಏಕೈಕ ಮೂಲ

ಉತ್ತರ:– ಎ **(2021 ಮಾರ್ಚ್ ವಾರ್ಷಿಕ ಪರೀಕ್ಷೆ 1 ಅಂಕದ ಪ್ರಶ್ನೆ)**

6) ಪ್ಲಾಸಿ ಕದನದ ಪರಿಣಾಮಗಳೇನು? (ಜೂನ್ 2017 ಪರೀಕ್ಷೆ)

ಉತ್ತರ:– ಪ್ಲಾಸಿ ಕದನದ ಪರಿಣಾಮಗಳು

1. ಈ ಯುದ್ಧವು ಭಾರತೀಯರಲ್ಲಿದ್ದ ಅನೈಕ್ಯತೆ, ಅಸಂಘಟನೆ ಮತ್ತು ಈ ಕಾಲದ ವ್ಯಾಪಾರಿ ವರ್ಗದಲ್ಲಿದ್ದ ಲೋಭಿತನವನ್ನು ಪ್ರದರ್ಶಿಸಿತು.
2. ಮೀರ್ ಜಾಫರ್ ಬಂಗಾಳದ ನವಾಬನಾದನು.
3. ಕಂಪನಿಯು ಬಂಗಾಳ ಪ್ರಾಂತ್ಯದಲ್ಲಿ ವ್ಯಾಪಾರ ನಡೆಸಲು ಅನಿರ್ಬಂಧಿತ ಹಕ್ಕನ್ನು ಪಡೆಯಿತು.
4. ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ನೀಡಿದನು.

ಒಟ್ಟಾರೆ, ಮೀರ್ ಜಾಫರನು ಕಂಪನಿ ಮತ್ತು ನೌಕರರ ಕೈಗೊಂಬೆಯಾಗುವ ಮೂಲಕ ನಿರಂತರ ಶೋಷಣೆಗೆ ಒಳಗಾದನು. ಇದರಿಂದ ನವಾಬನ ಬೊಕ್ಕಸ ಬರಿದಾಯಿತೇ ವಿನಃ ಧನ ಪಿಶಾಚಿಗಳಾದ ಕಂಪನಿಯ ಅಧಿಕಾರಿಗಳ ತೃಷೆ ಮಾತ್ರ ತೀರಲಿಲ್ಲ. ಪರಿಣಾಮವಾಗಿ ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ಮೀರ್ ಖಾಸಿಂನನ್ನು ಬಂಗಾಳದ ನವಾಬನೆಂದು ನೇಮಿಸಿದರು.

7) 'ದ್ವಿ ಪ್ರಭುತ್ವ' ಪದ್ಧತಿ ಎಂದರೇನು?

ಉತ್ತರ:– ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು ಹಾಗೂ **ನವಾಬನು** ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಇದನ್ನೇ 'ದ್ವಿ ಪ್ರಭುತ್ವ' ಎನ್ನುವರು. **(ಏಪ್ರಿಲ್ 2017 ವಾರ್ಷಿಕ ಪರೀಕ್ಷೆ)**

ಬಹುಆಯ್ಕೆ ಪ್ರಶ್ನೆಗಳು

I) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) 1453ರಲ್ಲಿ ಆಟೋಮಾನ್ ಟರ್ಕರು .... ನಗರವನ್ನು ವಶಪಡಿಸಿಕೊಂಡರು

ಎ) ಕಾನ್‌ಸ್ಟಾಂಟಿನೋಪಲ್ ಬಿ) ರೋಮ್
ಸಿ) ಕಾಬೂಲ್ ಡಿ) ಕರಾಚಿ

ಉತ್ತರ:– (ಎ) **ಕಾನ್‌ಸ್ಟಾಂಟಿನೋಪಲ್**

2) 1510ರಲ್ಲಿ ವಿಜಯಪುರದ ಸುಲ್ತಾನನಿಂದ ಗೋವಾ ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಮಾಡಿಕೊಂಡವನು ಯಾರು?

ಎ) ವಾಸ್ಕೋಡಗಾಮ ಬಿ) ಆಲ್ಫನ್ಸೋ ಅಲ್ಬುಕರ್ಕ್
ಸಿ) ಫ್ರಾನ್ಸಿಸ್ಕೋ ಡಿ ಅಲ್ಮೇಡ ಡಿ) ಮೇಲಿನ ಯಾರೂ ಅಲ್ಲ

ಉತ್ತರ:– (ಬಿ)ಆಲ್ಫನ್ಸೋ ಅಲ್ಬುಕರ್ಕ್

3) ಪ್ರಾಚೀನ ಕಾಲದಿಂದಲೂ ಭಾರತ ಹಾಗೂ ಯುರೋಪಿನ ನಡುವೆ ವಾಣಿಜ್ಯ ಸಂಬಂಧಗಳು ಬೆಸೆದುಕೊಂಡಿದ್ದವು. ಪ್ರಮುಖವಾಗಿ ಭಾರತದ .... ವಸ್ತುಗಳಿಗೆ ಯೂರೋಪಿನಲ್ಲಿ ತುಂಬಾ ಬೇಡಿಕೆಯಿತ್ತು.

ಎ) ಸಾಂಬಾರು ಪದಾರ್ಥದ ಬಿ) ಎಣ್ಣೆ ಪದಾರ್ಥದ
ಸಿ) ಚಿನ್ನದ ಪದಾರ್ಥದ ಡಿ) ಬಟ್ಟೆಯ ಪದಾರ್ಥದ

ಉತ್ತರ:– (ಎ) ಸಾಂಬಾರು ಪದಾರ್ಥದ

4) ....ಅಂತಾರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ 'ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ' ಪರಿಗಣಿಸಲ್ಪಟ್ಟಿತು.

(ಮುಂದುವರಿಯುವುದು

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

22. Write dimensional formula of potential gradient.

$$\text{Ans:} - \text{Potential gradient} = \frac{V}{r} = \frac{ML^2T^{-3}A^{-1}}{L} = MLT^{-3}A^{-1}$$


23. A charge of + 1 C is placed at the centre of a spherical shell of radius 10 cm. What will be the work done in moving a charge of +1μC on its surface through a distance of 5 cm?

Ans:- Zero, because all points on the surface of sphere are at same potential.

24. No two equipotential surfaces intersect each other. Why?


Ans:- If two equipotential surfaces intersect, then there will be two different values of electric potential at the point of intersection, which is not possible.

25. What is the work done in moving a 2 μC point charge from corner A to corner B of a square ABCD when a 10 μ C charge exists at the centre of the square.



Ans:- Zero, because $V_A = V_B$ (A and B at same distance from central charge i.e. 10 μC).


26. Two protons A and B are placed between two parallel plates having a potential difference V as shown in figure. Will these protons experience equal or unequal force?



Ans:- Both will experience same force

$F = qE$.

27. In the given diagram what is the work done in moving a point charge from X to the points Y and Z respectively?



Ans:- Points Z and Y lie on the same equipotential surface. Work done to carry charge from X to Y will be equal to work done in carrying charge from X to Z.


$\therefore W_Y = W_Z$

28. What is the work done in moving a charge of 10 nC between two points on an equipotential surface?

Ans:- $W = q(V_1 - V_2)$. On equipotential surface, $V_1 = V_2$; $\therefore W = 0$.


29. Draw an equipotential surface in a uniform electric field.

Ans:-



30. Sketch two equipotential surfaces for a point charge.

Ans:-



S_1 and S_2 are two required equipotential surfaces.

31. Electric field is zero at a point. Can electric potential be zero at this point?

Ans :– No.

$$\frac{dV}{dr} = -E = 0 \text{ or } dv = 0$$


$\therefore V = \text{constant (i.e., non-zero)}$

32. Two parallel surfaces are at same potential. Distance between these surfaces is r. A charge q is taken from one surface to the other. What is the work done in this case?

Ans:- Work done is zero because both surfaces are at same potential.

33. Show equipotential surfaces between two equally and oppositely charged parallel plates separated by a certain distance.

Ans:- The solid lines show the field lines and the dotted lines show the equipotential surfaces.



34. A point charge q is rotated around a charge Q in a circle of radius r. What is the work done?

Ans:- $W = q\,\Delta V$. Since $\Delta V = 0$ between any two points on a circle, therefore, $W = 0$

ಹೂಡಿಕೆ: ₹ 5.17 ಕೋಟಿ ವಂಚನೆ

ವಾಟ್ಸ್ಆ್ಯಪ್ ಸಂದೇಶ: ದುಪ್ಪಟ್ಟು ಲಾಭದ ಆಮಿಷಕ್ಕೆ ಮೋಸ ಹೋದ ಉದ್ಯಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಡಿಮೆ ಹಣ ಹೂಡಿಕೆ ಮಾಡಿ, ದುಪ್ಪಟ್ಟು ಲಾಭ ಗಳಿಸಿ' ಎಂಬುದಾಗಿ ವಾಟ್ಸ್ಆ್ಯಪ್‌ನಲ್ಲಿ ಬಂದ ಸಂದೇಶ ನಂಬಿದ್ದ ಉದ್ಯಮಿಯೊಬ್ಬರು ₹ 5.17 ಕೋಟಿ ಕಳೆದುಕೊಂಡಿದ್ದು, ಸೈಬರ್ ವಂಚಕರ ಪತ್ತೆಗಾಗಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ಹೂಡಿಕೆ ಹೆಸರಿನಲ್ಲಿ ವಂಚನೆ ಮಾಡಿರುವ ಬಗ್ಗೆ ಉದ್ಯಮಿ ದೂರು ನೀಡಿದ್ದಾರೆ. ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಮೊಬೈಲ್ ನಂಬರ್ ಹಾಗೂ ಮೊಬೈಲ್ ಖಾತೆಗಳ ವಿವರ ನೀಡಿದ್ದಾರೆ. ಅವುಗಳನ್ನು ಆಧರಿಸಿ ಪ್ರಕರರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಜನರಿಗೆ ಲಾಭದ ಆಮಿಷವೊಡ್ಡಿ ವಂಚಿಸುವ ಜಾಲ ಇದಾಗಿದೆ. ಹೊರ ರಾಜ್ಯದವರು ಕೃತ್ಯದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಉದ್ಯಮಿಯ ಬ್ಯಾಂಕ್ ಖಾತೆ ವಿವರಗಳನ್ನು ಸಂಗ್ರಹಿಸಿ, ಆರೋಪಿಗಳ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ತಿಳಿಸಿದರು.

ಅಪರಿಚಿತ ಲಿಂಕ್, ವಾಟ್ಸ್ಆ್ಯಪ್ ಗ್ರೂಪ್‌ಗೆ ಸೇರ್ಪಡೆ: 'ದೂರುದಾರರ ಮೊಬೈಲ್ ನಂಬರ್‌ಗೆ ಅಪರಿಚಿತ ಸಂಖ್ಯೆಯಿಂದ ಲಿಂಕ್ ಬಂದಿತ್ತು. ಹೂಡಿಕೆ ಬಗ್ಗೆ ಸಂದೇಶದಲ್ಲಿ ಬರೆಯಲಾಗಿತ್ತು. ದೂರುದಾರ ಲಿಂಕ್ ಒತ್ತಿದ್ದರು. ಆದರೆ, ಯಾವುದೇ ಜಾಲತಾಣ ತೆರೆದುಕೊಂಡಿರಲಿಲ್ಲ' ಎಂದು ಪೊಲೀಸರು ಹೇಳಿದರು.



ಮುಖ್ಯಾಂಶಗಳು

- ಹಣ ದೋಚಲು ವ್ಯವಸ್ಥಿತ ಜಾಲ
- ಹೊರ ರಾಜ್ಯದ ಕೆಲವರು ಭಾಗಿ
- ಸಂದೇಶ ನಂಬುವ ಮುನ್ನ ಎಚ್ಚರ

1930 / 112 ಸೈಬರ್ ಕ್ರೈಂ ಸಹಾಯವಾಣಿ

'ನಕಲಿ ಸಂದೇಶವಿರಬಹುದೆಂದು ದೂರುದಾರ ಸುಮ್ಮನಾಗಿದ್ದರು. ಆದರೆ, ಕೆಲ ಹೊತ್ತಿನ ನಂತರ ವಾಟ್ಸ್ಆ್ಯಪ್ ಗ್ರೂಪ್‌ವೊಂದರಲ್ಲಿ ಅವರ ನಂಬರ್ ಸೇರ್ಪಡೆ ಮಾಡಲಾಗಿತ್ತು. ಗ್ರೂಪ್‌ನಲ್ಲಿ ಹಲವರು ಸಂದೇಶ ಪೋಸ್ಟ್ ಮಾಡುತ್ತಿದ್ದರು. 'ನನಗೆ ಇಂದು ದುಪ್ಪಟ್ಟು ಲಾಭ ಆಯಿತು' ಎನ್ನುತ್ತಿದ್ದರು.'

'ಗ್ರೂಪ್‌ನಲ್ಲಿ ಇರುವವರು ಹಣ ಹೂಡಿಕೆ ಮಾಡಿ ಲಾಭ ಗಳಿಸುತ್ತಿರಬಹುದೆಂದು ದೂರುದಾರ ತಿಳಿದುಕೊಂಡಿದ್ದರು. ಇದಾದ ಕೆಲ ಹೊತ್ತಿನಲ್ಲಿ ಗ್ರೂಪ್‌ನಲ್ಲಿದ್ದ ಮೂವರು ಅಪರಿಚಿತರು, ದೂರುದಾರರಿಗೆ ಕರೆ ಮಾಡಿದ್ದರು. 'ಕಡಿಮೆ ಹಣ ಹೂಡಿಕೆ ಮಾಡಿದರೆ, ಹೆಚ್ಚು ಲಾಭ ಸಿಗುತ್ತದೆ. ನೀವು ಇಂದೇ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು ಹಣ ಹೂಡಿಕೆ ಮಾಡಿ' ಎಂದಿದ್ದರು. ಜೊತೆಗೆ, ಆ್ಯಪ್ ಲಿಂಕ್ ಸಹ ಕಳುಹಿಸಿದ್ದರು' ಎಂದು ಪೊಲೀಸರು ತಿಳಿಸಿದರು.

ಹಂತ ಹಂತವಾಗಿ ಹೂಡಿಕೆ: 'ಆರೋಪಿಗಳ ಮಾತು ನಂಬಿದ್ದ ದೂರುದಾರ, ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡಿದ್ದರು. ಸ್ಟೇಟ್ ಬ್ಯಾಂಕ್ ಇಂಡಿಯಾ (ಎಸ್‌ಬಿಐ) ಶಾಖೆಯಲ್ಲಿದ್ದ ತಮ್ಮ ಖಾತೆಯಿಂದ ಆ್ಯಪ್‌ನಲ್ಲಿದ್ದ ಖಾತೆಗೆ ಸ್ವಲ್ಪ ಹಣ ವರ್ಗಾಯಿಸಿದ್ದರು' ಎಂದು ಪೊಲೀಸರು ಹೇಳಿದರು.

'ಹೂಡಿಕೆ ಹಾಗೂ ಲಾಭದ ಮಾಹಿತಿ ಆ್ಯಪ್‌ನಲ್ಲಿ ನೋಡಲು ಲಭ್ಯವಾಗುತ್ತಿತ್ತು. ಹೂಡಿಕೆ ಮಾಡಿದ್ದ ಹಣಕ್ಕೆ ಲಾಭ ಬಂದಿರುವುದಾಗಿ ಆ್ಯಪ್‌ನಲ್ಲಿ ನಮೂದಿಸಲಾಗಿತ್ತು. ಲಾಭದ ಹಣವನ್ನು ವಾಪಸು ಪಡೆಯಲು, ದೂರುದಾರ ಪ್ರಯತ್ನಿಸಿದ್ದರು. ಆರೋಪಿಗಳು, 'ಲಾಭದ ಹಣವನ್ನು ಪುನಃ ಹೂಡಿಕೆ ಮಾಡಿ, ನಿಮಗೆ ಮತ್ತಷ್ಟು ಲಾಭ ಬರುತ್ತದೆ' ಎಂದಿದ್ದರು. ಅದನ್ನೂ ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 5.17 ಕೋಟಿ ಹೂಡಿಕೆ ಮಾಡಿದ್ದರು' ಎಂದು ತಿಳಿಸಿದರು.

'ದೂರುದಾರರಿಗೆ ಇತ್ತೀಚೆಗೆ ಹಣದ ಅವಶ್ಯಕತೆ ಇತ್ತು. ಹೂಡಿಕೆ ಹಣವನ್ನು ವಾಪಸು ಪಡೆಯಲು ಆ್ಯಪ್‌ನಲ್ಲಿ ಪ್ರಯತ್ನಿಸಿದ್ದರು. ಆದರೆ, ಅದು ಸಾಧ್ಯವಾಗಿರಲಿಲ್ಲ. ಆರೋಪಿಗಳು ಸಹ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದರು. ಅವಾಗಲೇ ದೂರುದಾರರಿಗೆ ತಾವು ವಂಚನೆಗೀಡಾಗಿದ್ದು ಗೊತ್ತಾಗಿದೆ.

ಕ್ರಿಪ್ಟೊ ಕರೆನ್ಸಿ ಹೂಡಿಕೆ: ₹ 1.43 ಲಕ್ಷ ವಂಚನೆ

'ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಚಾಲ್ತಿಯಲ್ಲಿರುವ ಕ್ರಿಪ್ಟೊ ಕರೆನ್ಸಿ ಮೇಲೆ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಬರುತ್ತದೆ' ಎಂಬುದಾಗಿ ಹೇಳಿ ನಗರದ ಎಂಜಿನಿಯರ್‌ವೊಬ್ಬರಿಂದ ₹ 1.43 ಲಕ್ಷ ವರ್ಗಾಯಿಸಿಕೊಂಡು ವಂಚಿಸಲಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬಳೆಪೇಟೆಯ 23 ವರ್ಷದ ಎಂಜಿನಿಯರ್ ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು. 'ದೂರುದಾರರ ಟೆಲಿಗ್ರಾಂ ಆ್ಯಪ್‌ಗೆ ಏಪ್ರಿಲ್ 2ರಂದು ಸಂದೇಶ ಬಂದಿತ್ತು. ಕ್ರಿಪ್ಟೊ ಕರೆನ್ಸಿ ಹಾಗೂ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ, ದುಪ್ಪಟ್ಟು ಲಾಭ ಸಿಗುವುದಾಗಿ ಸಂದೇಶದಲ್ಲಿ ಬರೆಯಲಾಗಿತ್ತು. ಅದನ್ನು ನಂಬಿದ್ದ ದೂರುದಾರ, ಹಣ ಹೂಡಿಕೆ ಮಾಡಿದ್ದರು. ಇದಾದ ಕೆಲದಿನಗಳ ನಂತರ ಮೊದಲ ಬಾರಿಗೆ ದೂರುದಾರರಿಗೆ ಲಾಭ ಬಂದಿತ್ತು. ಅದರ ಆಸೆಯಿಂದ ಅವರು ಹಂತ ಹಂತವಾಗಿ ₹ 1.43 ಲಕ್ಷ ಹೂಡಿಕೆ ಮಾಡಿದ್ದರು. ಇದಾದ ನಂತರ ಯಾವುದೇ ಹಣ ವಾಪಸು ಬಂದಿಲ್ಲ. ಆರೋಪಿಗಳೂ ನಾಪತ್ತೆಯಾಗಿದ್ದಾರೆ' ಎಂದು ತಿಳಿಸಿದರು.

ಅಪಘಾತ ವಿಚಾರಕ್ಕೆ ಗಲಾಟೆ: ಬೈಕ್ ಸವಾರನ ಕೊಲೆ, ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಅಪಘಾತದ ವಿಚಾರವಾಗಿ ನಡೆದ ಗಲಾಟೆಯಲ್ಲಿ ಹಲ್ಲೆಗೀಡಾಗಿ ಬೈಕ್ ಸವಾರ ಪ್ರಭುರಾಮ್ ಪ್ರಸಾದ್ (33) ಎಂಬುವವರು ಮೃತಪಟ್ಟಿದ್ದು, ಅವರನ್ನು ಕೊಲೆ ಮಾಡಿರುವ ಆರೋಪದಡಿ ಅನಿಲ್ ಎಂಬುವವರನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬೆಳ್ತೂರು ಕಾಲೊನಿಯ ಪ್ರಭುರಾಮ್ ಪ್ರಸಾದ್, ವೃತ್ತಿಯಲ್ಲಿ ಕಾರು ಚಾಲಕ. ಇವರ ಕೊಲೆ ಬಗ್ಗೆ ಸಂಬಂಧಿಕರು ದೂರು ನೀಡಿದ್ದಾರೆ. ರಿಯಲ್ ಎಸ್ಟೇಟ್ ಉದ್ಯಮಿ ಅನಿಲ್ ಅವರನ್ನು ಬಂಧಿಸಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಪ್ರಭುರಾಮ್ ಅವರು ಸಹೋದರಿಯ ಪುತ್ರ ಅಭಿಲಾಷ್ ಜೊತೆ ದ್ವಿಚಕ್ರ ವಾಹನದಲ್ಲಿ ಬೆಳ್ತೂರಿನಲ್ಲಿದ್ದ ಜಾತ್ರೆಗೆ ಭಾನುವಾರ (ಮೇ 5) ಹೋಗಿದ್ದರು. ಇಬ್ಬರೂ ಒಟ್ಟಿಗೆ ರಾತ್ರಿ 7 ಗಂಟೆ ಸುಮಾರಿಗೆ ಮನೆಯತ್ತ ವಾಪಸು ಹೊರಟಿದ್ದರು. ಮಾರ್ಗಮಧ್ಯೆ ದ್ವಿಚಕ್ರ ವಾಹನದಲ್ಲಿ ಶಬ್ದ ಬಂದಿತ್ತು. ಪ್ರಭುರಾಮ್ ರಸ್ತೆ ಪಕ್ಕದಲ್ಲಿ ವಾಹನ ನಿಲ್ಲಿಸಿ, ಏನಾಯಿತೆಂದು ಪರಿಶೀಲಿಸುತ್ತಿದ್ದರು' ಎಂದು ತಿಳಿಸಿದರು.

'ಆರೋಪಿ ಅನಿಲ್ ಅವರ ಪತ್ನಿ ತಮ್ಮ ಕಾರಿನಲ್ಲಿ ಅದೇ ಮಾರ್ಗದಲ್ಲಿ ಹೊರಟಿದ್ದರು. ನಿರ್ಲಕ್ಷ್ಯದಿಂದ ಚಾಲನೆ ಮಾಡಿದ್ದರಿಂದ, ಬೈಕ್‌ಗೆ ಕಾರು ತಾಗಿತ್ತು. ಇದನ್ನು ಪ್ರಶ್ನಿಸಿದ್ದ ಪ್ರಭುರಾಮ್, ತರಾಟೆಗೆ ತೆಗೆದುಕೊಂಡಿದ್ದರು. ಅನಿಲ್ ಅವರ ಪತ್ನಿ, 'ಹತ್ತಿರದಲ್ಲೇ ನಮ್ಮ ಮನೆ ಇದೆ. ಅಲ್ಲಿಗೆ ಬಂದರೆ, ಪತಿ ಜೊತೆ ಮಾತನಾಡಿಸುವೆ' ಎಂದಿದ್ದರು. ಅದಕ್ಕೆ ಒಪ್ಪಿ ಪ್ರಭುರಾಮ್ ಮನೆಗೆ ಹೋಗಿದ್ದರು' ಎಂದು ಪೊಲೀಸರು ಹೇಳಿದರು.

'ಅಪಘಾತದ ವಿಚಾರವನ್ನು ಅನಿಲ್ ಅವರಿಗೆ ಪತ್ನಿ ತಿಳಿಸಿದ್ದರು. ಪ್ರಭುರಾಮ್ ಜೊತೆ ಜಗಳ ತೆಗೆದಿದ್ದ ಅನಿಲ್, ಕಪಾಳಕ್ಕೆ ಹೊಡೆದಿದ್ದರು. ತಳ್ಳಾಡಿ ಹಲ್ಲೆ ಮಾಡಿದ್ದರು. ಸ್ಥಳೀಯರು ಜಗಳ ಬಿಡಿಸಿ ಪ್ರಭುರಾಮ್ ಅವರನ್ನು ಸ್ಥಳದಿಂದ ಕಳುಹಿಸಿಕೊಟ್ಟಿದ್ದರು' ಎಂದು ತಿಳಿಸಿದರು.

'ಹಲ್ಲೆಗೀಡಾಗಿದ್ದ ಪ್ರಭುರಾಮ್ ಅವರಿಗೆ ಕಪಾಳ ನೋಯುತ್ತಿತ್ತು. ಯಾವುದೇ ಚಿಕಿತ್ಸೆ ಪಡೆದಿರಲಿಲ್ಲ. ಮನೆಗೆ ಹೋಗಿ ಮಲಗಿದ್ದರು. ರಾತ್ರಿ ತಾಯಿ ಮಾತನಾಡಿಸಲು ಹೋದಾಗ, ಎದ್ದಿರಲಿಲ್ಲ. ತಪಾಸಣೆ ನಡೆಸಿದಾಗ ಮೃತಪಟ್ಟಿದ್ದು ಗೊತ್ತಾಗಿತ್ತು. ಅಪಘಾತ ವಿಚಾರವಾಗಿ ಅನಿಲ್ ಹೊಡೆದಿದ್ದರಿಂದಲೇ ಪ್ರಭುರಾಮ್ ಮೃತಪಟ್ಟಿದ್ದಾಗಿ ಸಂಬಂಧಿಕರು ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

ವ್ಹೀಲಿ: 12 ಮಂದಿ ಬಂಧನ

ಬೆಂಗಳೂರು: ಸಾರ್ವಜನಿಕ ರಸ್ತೆಯಲ್ಲಿ ವ್ಹೀಲಿ ಮಾಡುತ್ತಿದ್ದವರ ಪತ್ತೆಗಾಗಿ ರಾಜಾಜಿನಗರ ಸಂಚಾರ ಠಾಣೆ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದ್ದು, 12 ಮಂದಿಯನ್ನು ಬಂಧಿಸಿದ್ದಾರೆ. ಅಪ್ರಾಪ್ತ ಮಕ್ಕಳಿಗೆ ದ್ವಿಚಕ್ರ ವಾಹನ ನೀಡಿದ್ದ ಪೋಷಕರ ವಿರುದ್ಧವೂ ಎರಡು ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಹೊರ ವರ್ತುಲ ರಸ್ತೆ, ವಾಟಾಳ್ ನಾಗರಾಜ್ ವೃತ್ತ, ಭಾಷ್ಯಂ ವೃತ್ತ, ಕೆಎಲ್‌ಇ ಕಾಲೇಜು, ಮೆಟ್ರೊ ನಿಲ್ದಾಣ, ಮುತ್ಯಾಲಮ್ಮ ದೇವಾಲಯ ವೃತ್ತ, ಪಶ್ಚಿಮ ಕಾರ್ಡ್ ರಸ್ತೆ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿದೆ' ಎಂದು ಸಂಚಾರ ವಿಭಾಗದ ಡಿಸಿಪಿ (ಉತ್ತರ) ಡಿ.ಆರ್. ಸಿರಿಗೌರಿ ತಿಳಿಸಿದ್ದಾರೆ.

'ವ್ಹೀಲಿ ಮಾಡುವುದರಿಂದ ಸಾರ್ವಜನಿಕರ ಜೀವಕ್ಕೆ ಅಪಾಯ ಹೆಚ್ಚು. ಹೀಗಾಗಿ, ವ್ಹೀಲಿ ಮಾಡುವವರ ಮೇಲೆ ಹೆಚ್ಚಿನ ನಿಗಾ ವಹಿಸಲಾಗಿದೆ. ಸಾರ್ವಜನಿಕರು ಸಹ ವ್ಹೀಲಿ ವಿಡಿಯೊಗಳನ್ನು ಪೊಲೀಸರಿಗೆ ನೀಡಿದರೆ, ಕ್ರಮ ಜರುಗಿಸಲಾಗುವುದು' ಎಂದಿದ್ದಾರೆ.

'ರಾಜಾಜಿನಗರ ಸಂಚಾರ ಪೊಲೀಸರು ಇದುವರೆಗೂ 14 ವ್ಹೀಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ಪೈಕಿ 12 ಮಂದಿಯನ್ನು ಬಂಧಿಸಿದ್ದಾರೆ. ಇದರಲ್ಲಿ ಇಬ್ಬರು ಬಾಲಕರು. ಅವರ ಪೋಷಕರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಜೊತೆಗೆ, ಐವರು ಸವಾರರ ಚಾಲನಾ ಪರವಾನಗಿ ರದ್ದುಪಡಿಸುವಂತೆ ಕೋರಿ ಸಾರಿಗೆ ಇಲಾಖೆಗೆ ಪತ್ರ ಬರೆಯಲಾಗಿದೆ' ಎಂದು ತಿಳಿಸಿದ್ದಾರೆ.

ನಾಲ್ವರಿಗೆ ಹೈಕೋರ್ಟ್ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಸ್ಲಿಂ ಮಹಿಳೆ ಜೊತೆ ಮಾತನಾಡಿದ್ದನ್ನು ಆಕ್ಷೇಪಿಸಿ ಹಿಂದೂ ಧರ್ಮದ ವ್ಯಕ್ತಿಯೊಬ್ಬರ ಮೇಲೆ ದಾಳಿ ನಡೆಸಿ ಹಲ್ಲೆ ನಡೆಸಿದ್ದ ಮತ್ತು ಆ ವ್ಯಕ್ತಿಗೆ ಸೇರಿದ ಚಿನ್ನಾಭರಣ ದೋಚಿದ ಆರೋಪದಲ್ಲಿ ಬಂಧನಕ್ಕೆ ಒಳಗಾಗಿದ್ದ ನಾಲ್ವರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗದ ನಿವಾಸಿಗಳಾದ ಯೂನುಸ್ ಅಹ್ಮದ್ (36), ನವೀದ್ (34), ಸಾದತ್ ಅಲಿಯಾಸ್ ಸಯ್ಯದ್ ಸಾದತ್ (27) ಮತ್ತು ಜಾಫರ್ ಸಿದ್ದಿಕ್ (32) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದರೆ ಕ್ಷುಲ್ಲಕ ವಿಚಾರಕ್ಕೆ ಘಟನೆ ನಡೆದಿರುವುದು ತಿಳಿದು ಬರುತ್ತದೆ. ಅಂತೆಯೇ, ಅರ್ಜಿದಾರರರು ಕ್ರಿಮಿನಲ್ ಹಿನ್ನೆಲೆ ಹೊಂದಿಲ್ಲ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಪ್ರಕರಣವೇನು?: 'ನಾನು 2024ರ ಏಪ್ರಿಲ್ 2ರಂದು ಮಧ್ಯಾಹ್ನ 2.30ರಲ್ಲಿ ಚಿತ್ರದುರ್ಗದ ಹೊಳಲ್ಕೆರೆ ರಸ್ತೆಯ ಜೈ ಕನ್ನಡ ನಿವಾಸ ಸಂಸ್ಥೆಯ ಆವರಣದಲ್ಲಿ ಮುಸ್ಲಿಂ ಮಹಿಳೆ ಜೊತೆ ಮಾತನಾಡುತ್ತಾ ಕುಳಿತಿದ್ದೆ. ಇದನ್ನು ಆಕ್ಷೇಪಿಸಿ ಅರ್ಜಿದಾರರೂ ಸೇರಿದಂತೆ ಮುಸ್ಲಿಂ ಸಮುದಾಯಕ್ಕೆ ಸೇರಿದ 18ರಿಂದ 20 ಜನ ನನ್ನನ್ನು ಹಿಡಿದು ನೆಲಕ್ಕೆ ಬೀಳಿಸಿ, ಇಟ್ಟಿಗೆ, ಕಲ್ಲುಗಳಿಂದ ಮನಬಂದಂತೆ ಹಲ್ಲೆ ನಡೆಸಿ ಗಂಭೀರವಾಗಿ ಗಾಯಗೊಳಿಸಿದರು. ಕಲ್ಲನ್ನು ಎತ್ತಿಹಾಕಿ ಕೊಲೆ ಮಾಡಲು ಪ್ರಯತ್ನಿಸಿದ್ದರು. ಬಟ್ಟೆ ಹರಿದು, ನನ್ನ ಕೊರಳಿನಲ್ಲಿದ್ದ 55 ಗ್ರಾಂ ಚಿನ್ನದ ಸರ, ಕೈಯಲ್ಲಿದ್ದ 30 ಗ್ರಾಂ ತೂಕದ ಚಿನ್ನದ ಬ್ರೇಸ್‌ಲೆಟ್ ಮತ್ತು 20 ಗ್ರಾಂ ತೂಕದ ಎರಡು ಉಂಗುರ ಹಾಗೂ ಜೇಬಿನಲ್ಲಿದ್ದ 40 ಸಾವಿರ ನಗದು ದೋಚಿದ್ದಾರೆ' ಎಂದು ಆರೋಪಿಸಿ ಬಿ.ಎಚ್. ಗೌಡ್ರು ಎಂಬವರು ಚಿತ್ರದುರ್ಗ ಗ್ರಾಮೀಣಾ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ದೂರನ್ನು ಆಧರಿಸಿ ಪೊಲೀಸರು ಅರ್ಜಿದಾರರನ್ನು ಬಂಧಿಸಿದ್ದರು. ಜಾಮೀನು ಕೋರಿದ್ದ ಅರ್ಜಿಯನ್ನು ಚಿತ್ರದುರ್ಗ ಜಿಲ್ಲೆಯ 1ನೇ ಹೆಚ್ಚುವರಿ ಸಿವಿಲ್ (ಕಿರಿಯ ಶ್ರೇಣಿಯ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ ವಜಾಗೊಳಿಸಿತ್ತು.

ಕೊಳವೆಬಾವಿ ವಿಫಲ: ರೈತ ಆತ್ಮಹತ್ಯೆ

ತೋವಿನಕೆರೆ (ತುಮಕೂರು): ಕೊಳವೆ ಬಾವಿ ಕೊರೆಸಲು ಲಕ್ಷಾಂತರ ರೂಪಾಯಿ ಕೈ ಸಾಲ ಮಾಡಿದ್ದ ರಾಜಣ್ಣ (38) ಎಂಬ ರೈತ ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತೋವಿನಕೆರೆ ಪಂಚಾಯಿತಿ ವ್ಯಾಪ್ತಿಯ ಚಿಕ್ಕಣ್ಣನಹಳ್ಳಿ ಜಮೀನಿನಲ್ಲಿ ತೋಟದಲ್ಲಿ ಮರಕ್ಕೆ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ದೇಹ ಪತ್ತೆಯಾಗಿದೆ. ರಾಜಣ್ಣ 6 ವರ್ಷದಲ್ಲಿ 7 ಕೊಳವೆ ಬಾವಿ ಕೊರೆಸಿದ್ದರು. ಹತ್ತು ದಿನಗಳ ಅಂತರದಲ್ಲಿ ಎರಡು ಕೊಳವೆ ಬಾವಿ ಕೊರೆಸಿದ್ದು, ತೀರಾ ಕಡಿಮೆ ನೀರು ಬಂದಿದೆ.

ಬಸ್‌ನಲ್ಲಿ ಚಿನ್ನಾಭರಣ ಬ್ಯಾಗ್ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಿಂದ ಪಾವಗಡಕ್ಕೆ ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರ ಬ್ಯಾಗ್‌ನಲ್ಲಿದ್ದ ಚಿನ್ನಾಭರಣ ಕಳ್ಳತನ ಮಾಡಲಾಗಿದ್ದು, ಈ ಬಗ್ಗೆ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಏಪ್ರಿಲ್ 29ರಂದು ನಡೆದಿರುವ ಕಳ್ಳತನ ಸಂಬಂಧ ಮಹಿಳೆಯ ಮಗ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕೆಎಸ್‌ಆರ್‌ಟಿಸಿ ಬಸ್ ಸಾಗಿದ್ದ ರಸ್ತೆ ಹಾಗೂ ಇತರೆ ಸ್ಥಳಗಳಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ತುಮಕೂರು ಜಿಲ್ಲೆಯ ಪಾವಗಡದ ಮಹಿಳೆ, ಕೆಲಸ ನಿಮಿತ್ತ ಯಲಹಂಕದಲ್ಲಿರುವ ಸಂಬಂಧಿಕರ ಮನೆಗೆ ಬಂದಿದ್ದರು. ವಾಪಸು ಊರಿಗೆ ಹೋಗಲು ಯಲಹಂಕದಿಂದ ಮೆಜೆಸ್ಟಿಕ್ ನಿಲ್ದಾಣಕ್ಕೆ ಏಪ್ರಿಲ್ 29ರಂದು ಬೆಳಿಗ್ಗೆ 6.20 ಗಂಟೆ ಸುಮಾರಿಗೆ ಬಂದಿದ್ದರು. ಅಲ್ಲಿಂದ, ಪಾವಗಡಕ್ಕೆ ಹೊರಟಿದ್ದ ಕೆಎಸ್‌ಆರ್‌ಟಿಸಿ ಬಸ್ ಹತ್ತಿದ್ದರು.'

'ಬೆಳಿಗ್ಗೆ 11 ಗಂಟೆಗೆ ಬಸ್ ಪಾವಗಡ ತಲುಪಿತ್ತು. ನಿಲ್ದಾಣದಲ್ಲಿ ಇಳಿದಿದ್ದ ಮಹಿಳೆ, ಮನೆಗೆ ಹೋಗಿದ್ದರು. ಬ್ಯಾಗ್ ಪರಿಶೀಲಿಸಿದಾಗ, ಚಿನ್ನಾಭರಣ ಇರಲಿಲ್ಲ' ಎಂದು ಪೊಲೀಸರು ತಿಳಿಸಿದರು.

'ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಮಹಿಳೆಯ ಬ್ಯಾಗ್‌ನಲ್ಲಿದ್ದ ಚಿನ್ನಾಭರಣವನ್ನು ಆರೋಪಿಗಳು ಕಳ್ಳತನ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ₹ 3.80 ಲಕ್ಷ ಮೌಲ್ಯದ ಚಿನ್ನಾಭರಣ ಬ್ಯಾಗ್‌ನಲ್ಲಿದ್ದವು ಎಂಬುದಾಗಿ ದೂರುದಾರರು ಮಾಹಿತಿ ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಕ್ರಿಮಿನಲ್ ಪ್ರಕರಣವೊಂದರ ವಿಚಾರಣೆ: ಹೈಕೋರ್ಟ್ ಅಸಮಾಧಾನ

ಪೊಲೀಸರ ಕಾರ್ಯ ವೈಖರಿಗೆ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕ್ರಿಮಿನಲ್ ಪ್ರಕರಣಗಳಲ್ಲಿ ಬಹಳಷ್ಟು ಡಿವೈಎಸ್‌ಪಿ ಶ್ರೇಣಿಯ ಅಧಿಕಾರಿಗಳಿಗೆ ಘಟನಾ ಸ್ಥಳದ ಪಂಚನಾಮೆ ಮಾಡಿದ ನಾಲ್ಕು ಸಾಲು ಮಹಜರು ವರದಿ ಬರೆಯುವುದಕ್ಕೆ ಬರುವುದಿಲ್ಲ' ಎಂದು ಹೈಕೋರ್ಟ್ ಪೊಲೀಸರ ಕಾನೂನು ಜ್ಞಾನ ಮತ್ತು ಕಾರ್ಯ ವೈಖರಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಕ್ರಿಮಿನಲ್ ಪ್ರಕರಣವೊಂದರ ವಿಚಾರಣೆ ಸಂದರ್ಭದಲ್ಲಿ ಪೊಲೀಸ್ ತನಿಖಾ ವರದಿಯ ಲೋಪಗಳ ಬಗ್ಗೆ ಮೌಖಿಕವಾಗಿ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರು, 'ಕ್ರಿಮಿನಲ್ ಪ್ರಕರಣಗಳಲ್ಲಿ ಯಾವುದೇ ತನಿಖಾಧಿಕಾರಿಯು ಶವಪರೀಕ್ಷೆ ನಡೆಯುವ ಸ್ಥಳಕ್ಕೆ ಹೋಗುವುದಿಲ್ಲ. ತನಿಖೆ ವೇಳೆ ಅನುಸರಿಸಬೇಕಾದ ವಿಧಾನಗಳನ್ನು ಪಾಲಿಸುತ್ತಿಲ್ಲ. ಕಾನೂನುಗಳ ಬಗ್ಗೆ ಆಳವಾದ ಮಾಹಿತಿ ಇಲ್ಲದ ಕಾನ್‌ಸ್ಟೆಬಲ್‌ಗಳು ತನಿಖೆ ನಡೆಸಿ ವರದಿ ಸಿದ್ಧಪಡಿಸಿದರೆ, ಅದಕ್ಕೆ ಸರ್ಕಲ್ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್‌ಗಳು ಸಹಿ ಮಾಡಿ ಕೋರ್ಟ್‌ಗೆ ಸಲ್ಲಿಸಿಬಿಡುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.



'ಪೊಲೀಸರ ನಿತ್ಯದ ಕೆಲಸದಲ್ಲಿ ಇಂತಹ ಏರುಪೇರಾಗಲು ಹಾಗೂ ಇಂತಹ ಪರಿಸ್ಥಿತಿಗೆ ಮತ್ತೂ ಒಂದು ಕಾರಣವಿದ್ದು, ಪ್ರತಿದಿನ ವಿಐಪಿಯೊಬ್ಬರು ನಗರಕ್ಕೆ ಬರುತ್ತಾರೆ. ಅವರ ಸುಗಮ ಸಂಚಾರ ವ್ಯವಸ್ಥೆ ಹಾಗೂ ಬಂದೋಬಸ್ತ್‌ಗೆ ಪೊಲೀಸರನ್ನು ನಿಯೋಜಿಸಲಾಗುತ್ತದೆ. ಇನ್ನು ಯಾವಾಗ ತನಿಖೆ ನಡೆಸುತ್ತಾರೆ' ಎಂದು ಸದ್ಯದ ಪರಿಸ್ಥಿತಿಯನ್ನೂ ನ್ಯಾಯಮೂರ್ತಿಗಳು ವಿವರಿಸಿದ್ದಾರೆ.

'ಸರ್ಕಾರಿ ವಕೀಲರು, ನ್ಯಾಯಾಧೀಶರು ಹಾಗೂ ಕಾನೂನು ತಜ್ಞರು ನಿಯಮಿತವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪೊಲೀಸ್ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಕಾನೂನು ಅರಿವು ಮೂಡಿಸಬೇಕು. ನ್ಯಾಯಾಲಯದ ತೀರ್ಪುಗಳ ಬಗ್ಗೆ ಮಾಹಿತಿ ನೀಡಬೇಕು. ತನಿಖೆ ವೇಳೆ ಅನುಸರಿಸಬೇಕಾದ ವಿಧಾನಗಳನ್ನು ತಿಳಿಸಿಕೊಡಬೇಕು' ಎಂದು ಸಲಹೆ ನೀಡಿದ್ದಾರೆ.

ಆರು ವರ್ಷದ ವಿವಾದಾದ್ಮತಕ ಒಪ್ಪಂದ ಮುಂದುವರಿಸಲು ಸರ್ಕಾರ ಸಮ್ಮತಿ

ಬಿಡಿಎ ಕಾಂಪ್ಲೆಕ್ಸ್‌ಗಳು ಇನ್ನು ಶಾಪಿಂಗ್ ಮಾಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರು ವರ್ಷಗಳ ಹಿಂದೆ ಅಂತಿಮಗೊಂಡಿದ್ದ ವಿವಾದಾದತ್ಮಕ ಒಪ್ಪಂದಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮರುಜೀವ ನೀಡಲು ನಿರ್ಧರಿಸಿದ್ದು, ಏಳು ಕಾಂಪ್ಲೆಕ್ಸ್‌ಗಳನ್ನು ಶಾಪಿಂಗ್ ಮಾಲ್‌ಗಳನ್ನಾಗಿ ಪರಿವರ್ತಿಸಲಿದೆ.

ಕಾಂಪ್ಲೆಕ್ಸ್‌ಗಳನ್ನು ಶಾಪಿಂಗ್ ಮಾಲ್‌ಗಳನ್ನಾಗಿ ಪರಿವರ್ತಿಸಲು 60 ವರ್ಷಗಳಿಗೆ ಒಪ್ಪಂದ ಮಾಡಿಕೊಂಡಿದ್ದು, ಪ್ರತಿ ವರ್ಷ ಬಿಡಿಎಗೆ ₹40 ಕೋಟಿ ಆದಾಯ ಬರಲಿದೆ.

‘ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಈ ಯೋಜನೆಯ ಒಪ್ಪಂದಕ್ಕೆ ರಾಜ್ಯ ಸರ್ಕಾರ ಸಮ್ಮತಿ ನೀಡಿದೆ. ಈ ಯೋಜನೆ ಮುಂದಿನ ಪ್ರಕ್ರಿಯೆಗಳನ್ನು ಶೀಘ್ರವೇ ನಾವು ಪೂರ್ಣಗೊಳಿಸಲಿದ್ದೇವೆ’ ಎಂದು ಬಿಡಿಎ ಆಯುಕ್ತ ಎನ್. ಜಯರಾಂ ತಿಳಿಸಿದರು.

ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್, ಆರ್.ಟಿ ನಗರ, ಸದಾಶಿವನಗರಗಳಲ್ಲಿರುವ ಬಿಡಿಎ ಕಾಂಪ್ಲೆಕ್ಸ್‌ಗಳನ್ನು ಎಂ–ಎಫ್‌ಎಆರ್ ಡೆವಲಪರ್ಸ್‌ಗೆ ಬಿಡಿಎ ಗುತ್ತಿಗೆಗೆ ನೀಡಿದೆ. ಇಂದಿರಾನಗರದಲ್ಲಿರುವ ಕಾಂಪ್ಲೆಕ್ಸ್ ಅನ್ನು ಎಂಬೆಸ್ಸಿ ಗ್ರೂಪ್ ಮರುಅಭಿವೃದ್ಧಿಗೊಳಿಸಲಿದೆ.

ಮಾಲ್‌ಗಳಾಗುವ ಬಿಡಿಎ ಕಾಂಪ್ಲೆಕ್ಸ್‌ಗಳು

ಕಾಂಪ್ಲೆಕ್ಸ್	ನಿರ್ಮಾಣ ವ್ಯಾಪ್ತಿ (ಚದರ ಮೀಟರ್)		ನಿರೀಕ್ಷಿತ ಆದಾಯ (ವಾರ್ಷಿಕ)
	ಪ್ರಸ್ತುತ	ಪ್ರಸ್ತಾವ	
ಇಂದಿರಾನಗರ	12,466	95,600	₹20 ಕೋಟಿ
ಎಚ್‌ಎಸ್‌ಆರ್ ಲೇಔಟ್	17,212	49,300	₹9.31 ಕೋಟಿ
ಆಸ್ಟಿನ್ ಟೌನ್	937	20,532	₹4.17 ಕೋಟಿ
ಕೋರಮಂಗಲ	4,442	16,888	₹3.43 ಕೋಟಿ
ವಿಜಯನಗರ	1,522	12,904	₹2.36 ಕೋಟಿ
ಆರ್.ಟಿ. ನಗರ	1,923	8,666	₹1.58 ಕೋಟಿ
ಸದಾಶಿವನಗರ	969	2,050	₹44.35 ಲಕ್ಷ

ವಾಣಿಜ್ಯ ಕೇಂದ್ರವಾಗಿ ಕಾಂಪ್ಲೆಕ್ಸ್‌ಗಳನ್ನು ಪರಿವರ್ತಿಸುತ್ತಿರುವುದು ಬಿಡಿಎಯ ನಿಯಮಗಳಿಗೆ ವಿರುದ್ಧವಾಗಿದೆ. ಕಾಂಪ್ಲೆಕ್ಸ್‌ಗಳು ನಾಗರಿಕ ಸೌಲಭ್ಯದ ತಾಣಗಳಾಗಿರಬೇಕು ಎಂಬುದು ಬಿಡಿಎ ನಿಯಮಗಳಲ್ಲಿದೆ.

‘ಬಿಡಿಎ ಕಾಂಪ್ಲೆಕ್ಸ್‌ಗಳನ್ನು ವಾಣಿಜ್ಯ ಕೇಂದ್ರಗಳನ್ನಾಗಿ ಪರಿವರ್ತಿಸಿದರೆ ಬಿಡಿಎಗೆ ಹೆಚ್ಚಿನ ಸ್ಥಳಾವಕಾಶ ಸಿಗಲಿದೆ. ಈಗಿರುವ ಸ್ಥಳಕ್ಕಿಂತ ಸುಮಾರು 21ಪಟ್ಟು ಅಭಿವೃದ್ಧಿಗೊಂಡಿರುವ ಸ್ಥಳ ಈ ಏಳು ಕಾಂಪ್ಲೆಕ್ಸ್‌ಗಳಲ್ಲಿ ಸಿಗಲಿದೆ. ಇಂದಿರಾನಗರದಲ್ಲಿರುವ ಕಾಂಪ್ಲೆಕ್ಸ್ ಅನ್ನು ಎರಡು ಟವರ್‌ಗಳಾಗಿ ನಿರ್ಮಾಣವಾಗಲಿದ್ದು, 10 ಅಂತಸ್ತಿನಲ್ಲಿ ಕಚೇರಿಗಳು, ಐದು ಅಂತಸ್ತಿನಲ್ಲಿ ಶಾಪಿಂಗ್ ಹಾಗೂ ಮನೋರಂಜನಾ ತಾಣಗಳಿರುತ್ತವೆ. ಸದಾಶಿವನಗರದಲ್ಲಿ ಒಂದು ಅಂತಸ್ತಿನಲ್ಲಿದ್ದು, ಇದನ್ನು ಮೂರು ಅಂತಸ್ತಿನ ವಾಣಿಜ್ಯ ಕಟ್ಟಡವನ್ನಾಗಿ ಪರಿವರ್ತಿಸಲಾಗುತ್ತದೆ’ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

‘2018ರಲ್ಲೇ ಟೆಂಡರ್ ಅಂತಿಮಗೊಂಡು ಡೆವಲಪರ್ಸ್‌ಗಳನ್ನು ಅಂತಿಮಗೊಳಿಸಲಾಗಿತ್ತು. ಆದರೆ ಆರು ವರ್ಷವಾದರೂ ಯೋಜನೆ ಆರಂಭವಾಗಲಿಲ್ಲ. ಸಾರ್ವಜನಿಕರ ಹಿತದೃಷ್ಟಿಯಿಂದ ಈ ಯೋಜನೆಯನ್ನು ಸ್ಥಗಿತಗೊಳಿಸಲಾಗಿತ್ತು’ ಎಂದು ಮಾಹಿತಿ ನೀಡಿದರು. 2018ರಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು ಈ ಟೆಂಡರ್ ಅನ್ನು ರದ್ದುಗೊಳಿಸಿದ್ದರು. ಇದನ್ನು ಬಿಡಿಎ ಡೆವಲಪರ್ಸ್‌ಗಳಿಗೆ ತಿಳಿಸಿರಲಿಲ್ಲ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾದ ಅವಧಿಯಲ್ಲಿ ಪ್ರಸ್ತಾವ ಮತ್ತೊಮ್ಮೆ ಅವರ ಮುಂದೆ ಬಂದಿದ್ದರೂ ಮುಂದುವರಿದಿರಲಿಲ್ಲ. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕಳೆದ ವರ್ಷ ಅಧಿಕಾರಕ್ಕೆ ಬಂದಮೇಲೆ ಅವರು ಹಿಂದೆ ಅಧಿಕಾರದಲ್ಲಿದ್ದಾಗ ಚಾಲನೆ ನೀಡಿದ್ದ ಈ ಯೋಜನೆಗೆ ಮರುಜೀವ ಬಂದಿದೆ.

ವಿರೋಧ: ಇಂದಿರಾನಗರದಲ್ಲಿರುವ ನಾಗರಿಕ ಸಂಘ–ಸಂಸ್ಥೆಗಳು ಬಿಡಿಎಯ ಈ ಯೋಜನೆಯನ್ನು ವಿರೋಧಿಸಿವೆ. ‘ಇಂದಿರಾನಗರದಲ್ಲಿರುವ ಕಾಂಪ್ಲೆಕ್ಸ್‌ನಲ್ಲಿ ನಾಗರಿಕರಿಗೆ ಅಗತ್ಯವಾದ ಆರ್‌ಟಿಒ ಕಚೇರಿ, ಬೆಂಗಳೂರು ಒನ್‌ನಂತಹ ಕಚೇರಿಗಳಿವೆ. ಈ ಕಾಂಪ್ಲೆಕ್ಸ್ ಸಂಪೂರ್ಣವಾಗಿ ಸಾರ್ವಜನಿಕರಿಗೆ ಅಗತ್ಯವಾದ ಸೌಕರ್ಯಗಳನ್ನು ಮಾತ್ರ ಹೊಂದಿರಬೇಕು. ಬಿಡಿಎ ಇದೀಗ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಇಳಿದಿದೆ ಎನಿಸುತ್ತಿದೆ. ಬಿಡಿಎ ಕಾನೂನುಬಾಹಿರವಾದ ಕೆಲಸ ಮಾಡಲು ಮುಂದಾಗಿದೆ’ ಎಂದು ‘ಐ ಚೇಂಜ್ ಇಂದಿರಾನಗರ’ದ ಸ್ನೇಹಾ ನಂದಿಹಾಳ್ ಹೇಳಿದರು.

ಪ್ರಧಾನಿಗೆ ಹೃದಯವಂತಿಕೆ ಬರ: ಬಿ.ಕೆ.ಸಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ಬರ ಪರಿಹಾರವನ್ನು ನೀಡದ ಪ್ರಧಾನಿಯವರಿಗೆ ಹೃದಯವಂತಿಕೆಯ ಬರ ಇದೆ ಎಂದು ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಟೀಕಿಸಿದ್ದಾರೆ.

‘ಮೂರನೇ ಹಂತದ ಚುನಾವಣೆಯ ಪ್ರಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದ್ವೇಷ ಭಾಷಣ ಮಾಡಿದ್ದಾರೆ. ‘ಕಾಂಗ್ರೆಸ್‌ನಿಂದ ಮಹಿಳೆಯರ ಮಾಂಗಲ್ಯಕ್ಕೆ ಬರಲಿರುವ ಕುತ್ತು..‘ಮುಸ್ಲಿಂ ಜನಾಂಗದ ಜನಸಂಖ್ಯೆ ಹೆಚ್ಚುತ್ತಿದೆ’.. ಮುಂತಾದ ಕೀಳುಮಟ್ಟದ


ಪ್ರೊ.ಬಿ.ಕೆ. ಚಂದ್ರಶೇಖರ್

ಮಾತುಗಳನ್ನಾಡಿ ಚುನಾವಣೆ ಗೆಲ್ಲಲು ಮಾತಿನ ಮಾಲಿನ್ಯವನ್ನು ಉಂಟು ಮಾಡಿದ್ದಾರೆ. ಬರದ ಏಟು ತಪ್ಪಿಸಿಕೊಳ್ಳಲಾಗದೇ ಬಿಸಿಲಿನಲ್ಲಿ ಕುದಿಯುತ್ತಿರುವ ರೈತರಿಗೆ, ನಿರುದ್ಯೋಗದಿಂದ ಪರಿತಪಿ ಸುತ್ತಿರುವ ಯುವಜನಾಂಗಕ್ಕೆ ಮೋದಿ ಯಾವುದೇ ಸಂದೇಶ ನೀಡದೇ ಮೌನಕ್ಕೆ ಜಾರಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಕಂದಾಯ ಸಚಿವ ಕೃಷ್ಣಭೈರೇಗೌಡ ಅವರು ಅಧಿಕೃತವಾಗಿ ಸಿದ್ಧಪಡಿಸಿದ ದಾಖಲೆಯಲ್ಲಿ ಉಲ್ಲೇಖಿಸಿರುವಂತೆ, ಮುಖ್ಯಮಂತ್ರಿ ಮತ್ತಿತರ ಸಚಿವರು, ರಾಜ್ಯದ ತುರ್ತುಪರಿಸ್ಥಿತಿಗೆ ಕೇಂದ್ರದ ತುರ್ತು ಅನುದಾನ ನೀಡುವಂತೆ ಪ್ರಧಾನಿ ಮತ್ತು ಕೇಂದ್ರ ಸಚಿವರಿಗೆ ಮನವಿ ಮಾಡಿದ್ದರು. ಯಾರೊಬ್ಬರೂ ಸ್ಪಂದಿಸಲಿಲ್ಲ. ಅನಿವಾರ್ಯವಾಗಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟಿನ ಬಾಗಿಲು ತಟ್ಟಬೇಕಾಯಿತು. ನ್ಯಾಯಾಲಯದ ಆದೇಶದಿಂದ ಎಚ್ಚೆತ್ತ ಕೇಂದ್ರ ಸರ್ಕಾರ ಅಲ್ಪ ಹಣ ಬಿಡುಗಡೆ ಮಾಡಿದೆ’ ಎಂದು ದೂರಿದ್ದಾರೆ.

ಐಸಿಎಸ್‌ಇ 10 ನೇ ತರಗತಿ ಫಲಿತಾಂಶ

ಬೆಂಗಳೂರು: ಐಸಿಎಸ್‌ಇಯ 10ನೇ ತರಗತಿ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, ಬೆಂಗಳೂರಿನ ಮೂವರು ವಿದ್ಯಾರ್ಥಿಗಳು ಶೇ 99.80ರಷ್ಟು ಅಂಕ ಗಳಿಕೆಯ ಮೂಲಕ ಉತ್ತಮ ಸಾಧನೆ ತೋರಿದ್ದಾರೆ.

ಗ್ರೀನ್‌ವುಡ್ ಹೈಸ್ಕೂಲ್‌ನ ಆದ್ರಿತಾ ತ್ರಿಪಾಠಿ, ಬೆಥನಿ ಹೈಸ್ಕೂಲ್‌ನ ಮೆಹರ್ ಎಫ್. ಅನ್ನಿಲ್ ಮತ್ತು ಬಿಷಪ್‌ಕಾಟನ್ ಬಾಲಕರ ಹೈಸ್ಕೂಲ್‌ನ ಎಸ್.ವರುಣ್ ಸಾಧನೆ ತೋರಿದ್ದಾರೆ.

ಐಸಿಎಸ್‌ಇ 10ನೇ ತರಗತಿ ಉತ್ತೀರ್ಣ ಪ್ರಮಾಣ ಶೇ 99.83. ಪರೀಕ್ಷೆಗೆ ಹಾಜರಾದ ಒಟ್ಟು 27,826 ವಿದ್ಯಾರ್ಥಿಗಳಲ್ಲಿ 27,779 ಮಂದಿ ಉತ್ತೀರ್ಣರಾಗಿದ್ದು, 47 ಮಂದಿ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ರಾಜ್ಯದ ಹಲವು ಶಾಲೆಗಳ ಫಲಿತಾಂಶ ಶೇ 100ರಷ್ಟಿದೆ. ಅವುಗಳಲ್ಲಿ ಆರ್ಕಿಡ್ ಇಂಟರ್‌ನ್ಯಾಷನಲ್ ಸ್ಕೂಲ್, ಸ್ವಾಮಿ ವಿವೇಕಾನಂದ ಸ್ಕೂಲ್, ಗ್ರೀನ್‌ವುಡ್ ಹೈಸ್ಕೂಲ್ ಪ್ರಮುಖವಾದವು.

ರಾಷ್ಟ್ರ ಮಟ್ಟದಲ್ಲಿ ಐಸಿಎಸ್‌ಇ ಪರೀಕ್ಷೆಗೆ ಹಾಜರಾಗಿದ್ದ 1,734 ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಲ್ಲಿ ಶೇ 99.42 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪರಿಶಿಷ್ಟ ಪಂಗಡದ 395 ವಿದ್ಯಾರ್ಥಿಗಳಲ್ಲಿ ಶೇ 99.49 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಹಿಂದುಳಿದ ವರ್ಗಕ್ಕೆ ಸೇರಿದ 11,693 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಶೇ 99.79 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಜುಲೈನಲ್ಲಿ ಬರ ಪರಿಹಾರ ಅರ್ಜಿ ವಿಚಾರಣೆ: ಸುಪ್ರೀಂ

ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಪರಿಹಾರ: ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್‌ಎಫ್) ಹಾಗೂ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯ (ಎನ್‌ಡಿಆರ್‌ಎಫ್) ಮಾರ್ಗಸೂಚಿಗಳಿಗೆ ಅನುಗುಣವಾಗಿಯೇ ಕರ್ನಾಟಕಕ್ಕೆ ಬರ ಪರಿಹಾರ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಬರ ಪರಿಹಾರ ಅತ್ಯಲ್ಪ ಎಂದು ಆರೋಪಿಸಿ ಕರ್ನಾಟಕ ಸರ್ಕಾರವು ಸಲ್ಲಿಸಿರುವ ಅರ್ಜಿಯ ವಿಚಾರಣೆಯ ವೇಳೆ ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಸಂದೀಪ್ ಮೆಹ್ತಾ ಅವರ ಪೀಠಕ್ಕೆ ಕೇಂದ್ರ ಸರ್ಕಾರ ಈ ಉತ್ತರ ನೀಡಿದೆ.

ಎನ್‌ಡಿಆರ್‌ಎಫ್ ಮಾನದಂಡಗಳು ಮತ್ತು ಐಎಂಸಿಟಿಯ ವರದಿಯ ಆಧಾರದಲ್ಲಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಉಪ ಸಮಿತಿ ಶಿಫಾರಸಿನ ಪ್ರಕಾರ ಕೇಂದ್ರ ಸರ್ಕಾರವು ಹಣಕಾಸಿನ ನೆರವು ಬಿಡುಗಡೆ ಮಾಡಿದೆ ಎಂದು ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರು ನ್ಯಾಯಪೀಠಕ್ಕೆ ತಿಳಿಸಿದರು. ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆ 2005ರ ಮಾರ್ಗಸೂಚಿ ಹಾಗೂ ನಿಯಮಗಳ ಅನ್ವಯ ಕೇಂದ್ರ ಸರ್ಕಾರ ಈ ಕ್ರಮ ಕೈಗೊಂಡಿದೆ ಎಂದರು.

ಕರ್ನಾಟಕ ಸರ್ಕಾರವು ಅಗತ್ಯ ಮಾಹಿತಿ ಹಾಗೂ ಅಂಕಿ ಅಂಶಗಳನ್ನು ಒದಗಿಸಿಲ್ಲ ಎಂದು ಕೇಂದ್ರವು ದೂರಿತು. ಈ ಬಗ್ಗೆ ಪ್ರತಿಕ್ರಿಯೆ ಸಲ್ಲಿಸಲು ಕಾಲಾವಕಾಶ ನೀಡುವುದಾಗಿ ನ್ಯಾಯಪೀಠವು ರಾಜ್ಯಕ್ಕೆ ತಿಳಿಸಿತು.

ಕರ್ನಾಟಕ ಸರ್ಕಾರದ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, ‘ಕೇಂದ್ರ ನೀಡಿರುವ ಉತ್ತರದಲ್ಲಿ ಕೆಲವು ದೋಷಗಳಿವೆ. ಕೆಲವು ತಪ್ಪು ದತ್ತಾಂಶಗಳಿವೆ. ಅದಕ್ಕೆ ಪ್ರತಿಕ್ರಿಯೆಯಾಗಿ ಪ್ರಮಾಣಪತ್ರ ಸಲ್ಲಿಸಲು ಸ್ವಲ್ಪ ಕಾಲಾವಕಾಶ ನೀಡಬೇಕು’ ಎಂದರು.

ಸುಪ್ರೀಂ ಕೋರ್ಟ್‌ನ ಬೇಸಿಗೆ ರಜೆಯ ನಂತರ (ಜುಲೈನಲ್ಲಿ) ಕರ್ನಾಟಕದ ಅರ್ಜಿಯ ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ತಿಳಿಸಿತು.

ಎನ್‌ಡಿಆರ್‌ಎಫ್ ನಿಯಮಾವಳಿಗಳ ಪ್ರಕಾರ ₹18,171 ಕೋಟಿ ಬಿಡುಗಡೆ ಮಾಡುವಂತೆ ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿತ್ತು. ಆದರೆ, ಕೇಂದ್ರವು ₹ 3,498 ಕೋಟಿಗಷ್ಟೇ ಅನುಮೋದನೆ ನೀಡಿ ₹ 3,454 ಕೋಟಿ ಬಿಡುಗಡೆಗೊಳಿಸಿದೆ. ಇದು ತೀರಾ ಕಡಿಮೆ’ ಎಂದು ಆರೋಪಿಸಿ ರಾಜ್ಯವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ‘ಕೇಂದ್ರ ಸರ್ಕಾರ ನೇಮಿಸಿದ ಅಂತರ್ ಸಚಿವಾಲಯದ ತಜ್ಞರ ಸಮಿತಿಯು ಬರಪೀಡಿತ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿತ್ತು. ಆ ವರದಿಯ ಆಧಾರದಲ್ಲಿ ಸಚಿವರ ಸಮಿತಿಯು ಪರಿಹಾರ ಘೋಷಣೆ ಮಾಡಿದೆ’ ಎಂದು ವೆಂಕಟರಮಣಿ ಅವರು ನ್ಯಾಯಪೀಠಕ್ಕೆ ಕಳೆದ ಸೋಮವಾರ ತಿಳಿಸಿದ್ದರು. ಈ ವರದಿಯ ಪ್ರತಿಯನ್ನು ಸಲ್ಲಿಸುವಂತೆ ನ್ಯಾಯಪೀಠ ಸೂಚಿಸಿತ್ತು.

ಅಧಿಕಾರಿ ಸಾವು

ಪ್ರಜಾವಾಣಿ ವಾರ್ತೆ

ಬೀದರ್: ಜಿಲ್ಲೆಯ ಚಿಟಗುಪ್ಪ ತಾಲ್ಲೂಕಿನ ಕುಡಂಬಲ್ ಚೆಕ್‌ಪೋಸ್ಟ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಹಾಯಕ ಕೃಷಿ ಅಧಿಕಾರಿ ಆನಂದ ತೆಲಂಗ್ (32) ಹೃದಯಾಘಾತದಿಂದ ಸೋಮವಾರ ಮಧ್ಯಾಹ್ನ ನಿಧನರಾದರು.

ಆನಂದ ಅವರು ಚುನಾವಣಾ ಕರ್ತವ್ಯಕ್ಕಾಗಿ ಕುಡಂಬಲ್ ಚೆಕ್‌ಪೋಸ್ಟ್‌ನಲ್ಲಿ ನಿಯೋಜನೆಗೊಂಡಿದ್ದರು.

ವಿನಯ ಕುಲಕರ್ಣಿ ಅರ್ಜಿ ತಿರಸ್ಕರಿಸಿದ ಕೋರ್ಟ್

ಬೆಂಗಳೂರು: ಮತ ಚಲಾಯಿಸುವುದಕ್ಕಾಗಿ ಜಿಲ್ಲೆ ಪ್ರವೇಶಿಸಲು ಅನುಮತಿ ನೀಡುವಂತೆ ಕೋರಿದ್ದ ಕೊಲೆ ಪ್ರಕರಣದ ಆರೋಪಿಯಾದ ಧಾರವಾಡ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಅವರ ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ. ಈ ಕುರಿತಂತೆ ವಿನಯ ಕುಲಕರ್ಣಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ (ಸಿಸಿಎಚ್–82) ನ್ಯಾಯಾಧೀಶ ಸಂತೋಷ ಗಜಾನನ ಭಟ್ ಸೋಮವಾರ ತಿರಸ್ಕರಿಸಿ ಆದೇಶಿಸಿದರು.

‘ಅರ್ಜಿದಾರರು ಧಾರವಾಡ ಜಿಲ್ಲೆ ಪ್ರವೇಶಿಸದಂತೆ ಸುಪ್ರೀಂ ಕೋರ್ಟ್ ನಿರ್ಬಂಧ ವಿಧಿಸಿದ್ದು, ಈಗಾಗಲೇ ಹಲವು ಬಾರಿ ವಿವಿಧ ಕಾರಣಗಳಿಗಾಗಿ ಅವರು ಧಾರವಾಡ ಪ್ರವೇಶ ಕೋರಿ ಅರ್ಜಿ ಸಲ್ಲಿಸಿದ್ದರು. ಇಂತಹ ಅರ್ಜಿಗಳೆಲ್ಲಾ ತಿರಸ್ಕೃತಗೊಂಡಿವೆ. ಹಾಗಾಗಿ, ಈ ಅರ್ಜಿ ಯನ್ನೂ ಮಾನ್ಯ ಮಾಡಬಾರದು’ ಎಂಬ ಪ್ರಾಸಿಕ್ಯೂಷನ್ ವಾದವನ್ನು ಮನ್ನಿಸಿದ ನ್ಯಾಯಾಧೀಶರು ಅರ್ಜಿ ತಿರಸ್ಕರಿಸಿದರು. ಶಾಸಕ ವಿನಯ ಕುಲಕರ್ಣಿ, ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದ ಆರೋಪ ಎದುರಿಸುತ್ತಿದ್ದಾರೆ.

ನಾಗದೇವನಹಳ್ಳಿಯಲ್ಲಿ ಉತ್ಸವ ಮೂರ್ತಿ ಮೆರವಣಿಗೆ

ಭೂತಪ್ಪಸ್ವಾಮಿ ದೇವರ ಉತ್ಸವ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ನಾಗದೇವನಹಳ್ಳಿಯಲ್ಲಿ ಕಾಡುಗೊಲ್ಲ ಜನಾಂಗದ ಆರಾಧ್ಯ ದೈವ ಶ್ರೀ ಭೂತಪ್ಪಸ್ವಾಮಿ ದೇವರ ಜಾತ್ರಾ ಮಹೋತ್ಸವವು ಅದ್ದೂರಿಯಾಗಿ ನಡೆಯಿತು.

ನಾಗದೇವನಹಳ್ಳಿ, ದೊಡ್ಡಗೊಲ್ಲರಹಟ್ಟಿ, ಚಿಕ್ಕಗೊಲ್ಲರಹಟ್ಟಿಯ ಗ್ರಾಮಸ್ಥರು ನಡೆಸಿಕೊಂಡು ಬರುತ್ತಿರುವ ಜಾತ್ರಾಮಹೋತ್ಸವದಲ್ಲಿ ಮೂರು ಗ್ರಾಮಗಳ ಹಿರಿಯರು, ದೇವಸ್ಥಾನದ ಆಡಳಿತ ಮಂಡಳಿಯವರು, ಅರ್ಚಕರು, ಸಂಬಂಧಿಕರು, ನೆಂಟರಿಷ್ಟರು, ಸುತ್ತಮುತ್ತಲಿನ ಬಡಾವಣೆಯ ನಾಗರಿಕರು ಭಾಗವಹಿಸಿದ್ದರು.

ಮೂರು ಗ್ರಾಮಗಳ ಹೆಣ್ಣು ಮಕ್ಕಳು ಶ್ರದ್ಧೆಯಿಂದ ಆರತಿ ಎತ್ತಿ, ತಂಬಿಟ್ಟು ಇಟ್ಟು ವಿಶೇಷ ಪೂಜೆ ಸಲ್ಲಿಸಿದರು. ಭೂತಪ್ಪಸ್ವಾಮಿ ದೇವರ ಪಲ್ಲಕ್ಕಿ ಉತ್ಸವ ನಾಗದೇವನಹಳ್ಳಿ, ದೊಡ್ಡಗೊಲ್ಲರಹಟ್ಟಿ,


ನಾಗದೇವನಹಳ್ಳಿಯಲ್ಲಿ ಭೂತಪ್ಪಸ್ವಾಮಿ ದೇವರ ಉತ್ಸವ ಮೂರ್ತಿ ಮೆರವಣಿಗೆ ನಡೆಯಿತು

ಚಿಕ್ಕಗೊಲ್ಲರಹಟ್ಟಿಯಲ್ಲಿ ನಡೆದ ನಂತರ ದೇವಸ್ಥಾನಕ್ಕೆ ತೆರಳಿತು. ಗ್ರಾಮಸ್ಥರು ಹರಕೆ ತೀರಿಸಿದರು.

ದೇವಸ್ಥಾನ ಸುತ್ತ ಮುತ್ತ ಸಂಜೆ ಪೂಜಾಕುಣಿತ, ಪಟ್ಟದ ಕುಣಿತ, ವಿವಿಧ ಜನಪದ ಪ್ರದರ್ಶನಕ್ಕೆ ಸಾವಿರಾರು ಜನರು ಸಾಕ್ಷಿಯಾದರು. ಸಾಕಿರುವ ಕುರಿ, ಮೇಕೆಗಳಿಗೆ ಯಾವುದೇ ಕಾಯಿಲೆ ಬಾರದಂತೆ ದೇವರಲ್ಲಿ ಪೂಜೆ ಸಲ್ಲಿಸಿ ಕುರಿ, ಮೇಕೆಗಳನ್ನು ದೇವಸ್ಥಾನಕ್ಕೆ ಮೂರು ಸುತ್ತು ಪ್ರದಕ್ಷಿಣೆ ಹಾಕಿಸಲಾಯಿತು.

ನೂರಾರು ವರ್ಷಗಳಿಂದ ಕಾಡುಗೊಲ್ಲ ಜನಾಂಗದವರು ಒಗ್ಗೂಡಿ ಜಾತ್ರಾ ಮಹೋತ್ಸವವನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ದೇವಸ್ಥಾನದ ಪದಾಧಿಕಾರಿಗಳು ಹಿರಿಯರ ಸಮ್ಮುಖದಲ್ಲಿ ಮುಂದುವರಿಸುತ್ತಿದ್ದಾರೆ. ಹಿಂದೆ ಮಣ್ಣಿನ ಗುಡಿಯಿತ್ತು. ಟ್ರಸ್ಟ್ ರಚನೆ ಮಾಡಿಕೊಂಡು, ದೇವಸ್ಥಾನ ಜೀರ್ಣೋದ್ಧಾರ ಮಾಡಲಾಯಿತು. ನಂತರ ಗ್ರಾಮೀಣ ಸೊಗಡನ್ನು ಯುವ ಜನಾಂಗಕ್ಕೆ ತಿಳಿಸಲು ಅದ್ದೂರಿ ಜಾತ್ರಾಮಹೋತ್ಸವ ನಡೆಸಲಾಗುತ್ತಿದೆ ಎಂದು ಭೂತಪ್ಪಸ್ವಾಮಿ ದೇವಸ್ಥಾನದ ಅಧ್ಯಕ್ಷ ಕೃಷ್ಣಪ್ಪ ಮಾಹಿತಿ ನೀಡಿದರು.

ಪೂಜಾರಿ ಕಾಟಪ್ಪ, ತಿಮ್ಮಯ್ಯ, ರಾಮಣ್ಣ, ದೊಡ್ಡಯ್ಯ, ಪೂಜಾರಿ ಯರಪ್ಪ, ವಿವಿಧ ಗ್ರಾಮಗಳ ಮುಖ್ಯಸ್ಥರು ಭಾಗವಹಿಸಿದ್ದರು.







1.ಲೋಕಸಭಾ ಚುನಾವಣೆಯ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಸಿಬ್ಬಂದಿ ಹುಬ್ಬಳ್ಳಿಯ ಲ್ಯಾಮಿಂಗ್ಟನ್ ಶಾಲೆಯ ಮಸ್ಟರಿಂಗ್ ಕೇಂದ್ರದಿಂದ ಎಲೆಕ್ಟ್ರಾನಿಕ್ ಮತಯಂತ್ರಗಳೊಂದಿಗೆ ಸೋಮವಾರ ಮತಗಟ್ಟೆಗಳಿಗೆ ತೆರಳಿದರು 2.ಲೋಕಸಭೆ ಚುನಾವಣೆ ಅಂಗವಾಗಿ ಕೊಪ್ಪಳದ ಗವಿಸಿದ್ಧೇಶ್ವರ ಬಿ.ಎಡ್ ಕಾಲೇಜಿನ ಮಸ್ಟರಿಂಗ್ ಕೇಂದ್ರದಲ್ಲಿ ನೀಡಲಾದ ಮತದಾನದ ಸಾಮಗ್ರಿಗಳನ್ನು ಪರಿಶೀಲಿಸಿಕೊಂಡ ಸಿಬ್ಬಂದಿ 3. ಕಲಬುರಗಿಯ ಎನ್‌ವಿ. ಮೈದಾನದಲ್ಲಿ ಸೋಮವಾರ ಮಧ್ಯಾಹ್ನ ಬಿರುಬಿಸಿಲಿನ ನಡುವೆ ಚುನಾವಣಾ ಸಿಬ್ಬಂದಿ ಮತಯಂತ್ರಗಳನ್ನು ಹೊತ್ತು ಮತಗಟ್ಟೆಗಳತ್ತ ಸಾಗಿದರು. (ಪ್ರಜಾವಾಣಿ ಚಿತ್ರಗಳು: ಗೋವಿಂದರಾಜ ಜವಳಿ, ಭರತ್ ಕಂದಕೂರ, ತಾಜುದ್ದೀನ್ ಆಜಾದ್)

ಮತಗಟ್ಟೆಗಳಲ್ಲಿ ಮತದಾರರಿಗೆ ನೆರಳಿನ ವ್ಯವಸ್ಥೆ • ಕೂರಲು ಆಸನ, ಫ್ಯಾನ್/ಏರ್‌ಕೂಲರ್ ಸೌಲಭ್ಯ

ಮತದಾನ: ಬಿಸಿಲ ಬೇಗೆ ತಡೆಗೆ ಮುನ್ನೆಚ್ಚರಿಕೆ

ಪ್ರಜಾವಾಣಿ ವಾರ್ತೆ

ವಿಜಯಪುರ: ನೆತ್ತಿ ಸುಡುವ ಬಿಸಿಲಿನ ನಡುವೆ ನಡೆಯುತ್ತಿರುವ ಲೋಕಸಭೆ ಚುನಾವಣೆಯಲ್ಲಿ ಮೇ 7ರಂದು ಹಕ್ಕು ಚಲಾಯಿಸಲು ಮತಗಟ್ಟೆಯತ್ತ ಬರುವ ಮತದಾರರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಲು ಚುನಾವಣಾ ಆಯೋಗ ಸಾಕಷ್ಟು ಮುನ್ನೆಚ್ಚರಿಕೆ ವಹಿಸಿದೆ.

'ಮತಗಟ್ಟೆ ಕೇಂದ್ರದಲ್ಲಿ ಮತದಾರರು ಸರತಿ ಸಾಲಿನಲ್ಲಿ ನಿಲ್ಲಲು ನೆರಳಿನ ವ್ಯವಸ್ಥೆ, ಹಿರಿಯ ನಾಗರಿಕರಿಗೆ ಆಯಾಸ ಆಗದಂತೆ ಕೂರಲು ಆಸನದ ವ್ಯವಸ್ಥೆ, ಫ್ಯಾನ್, ಏರ್‌ಕೂಲರ್, ಅಂಗವಿಕಲರಿಗೆ ವಿಲ್‌ಚೇರ್ ವ್ಯವಸ್ಥೆ, ಕುಡಿಯಲು ತಂಪಾದ ನೀರು, ಶೌಚಾಲಯ, ಅಂಬುಲೆನ್ಸ್ ವ್ಯವಸ್ಥೆ ಸೇರಿ ಮೂಲಸೌಲಭ್ಯ ಕಲ್ಪಿಸಲು ಆದ್ಯತೆ ನೀಡಲಾಗಿದೆ' ಎಂದು ವಿಜಯಪುರ ಜಿಲ್ಲಾ ಚುನಾವಣಾಧಿಕಾರಿ ಟಿ.ಭೂಬಾಲನ್ ತಿಳಿಸಿದ್ದಾರೆ.

ಪಕ್ಷಗಳಿಂದಲೂ ಕ್ರಮ: ಮತದಾರರನ್ನು ಬೆಳಿಗ್ಗೆ 11ರ ಒಳಗೆ ಮತಗಟ್ಟೆಗೆ ಕರೆತಂದು ಮತ ಹಾಕಿಸಲು ಕಾಂಗ್ರೆಸ್, ಬಿಜೆಪಿ ಸೇರಿ ಪಕ್ಷಗಳ ಬೂತ್ ಏಜೆಂಟರು ಸಿದ್ಧತೆ ಮಾಡಿಕೊಂಡಿದ್ದಾರೆ. ಸಂಜೆ 4ರಿಂದ ಮತದಾನ ಮುಕ್ತಾಯದ ವರೆಗೆ ಮತದಾರರನ್ನು ಮತಗಟ್ಟೆಯತ್ತ ಕರೆತರಲು ಈಗಾಗಲೇ ಪಕ್ಷಗಳು ತಮ್ಮ ತಮ್ಮ ಪಕ್ಷಗಳ ಕಾರ್ಯಕರ್ತರ ಮೂಲಕ ವಾಹನ, ಕುಡಿಯಲು ನೀರು, ಮಜ್ಜಿಗೆ, ತಂಪಾದ ಪಾನೀಯ ನೀಡಲು ವ್ಯವಸ್ಥೆ ಮಾಡಿಕೊಂಡಿವೆ.



ವಿಜಯಪುರ ನಗರದ ಸೈನಿಕ ಶಾಲೆಯ ಮಸ್ಟರಿಂಗ್ ಕೇಂದ್ರದಿಂದ ವಿದ್ಯುನ್ಮಾನ ಮತಯಂತ್ರ ಹಾಗೂ ಇನ್ನಿತರ ಸಾಮಗ್ರಿ ಪಡೆದ ಚುನಾವಣಾ ಸಿಬ್ಬಂದಿ ಬಿಸಿಲಿನ ನಡುವೆ ಮತಗಟ್ಟೆಯತ್ತ ಹೆಜ್ಜೆ ಹಾಕಿದರು

45 ಡಿಗ್ರಿ ಸೆಲ್ಸಿಯಸ್ ದಾಟಿದ ಉಷ್ಣಾಂಶ: ವಿಜಯಪುರದಲ್ಲಿ ಸೋಮವಾರ 45 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು, ಬಿರುಗಾಳಿಯೂ ಇತ್ತು. ಮೇ 7ರಂದು ಕೂಡ ಉಷ್ಣಾಂಶ ಗರಿಷ್ಠ ಮಟ್ಟದಲ್ಲಿ ಇರಲಿದೆ, ಬಿಸಿಗಾಳಿಯೂ ಬೀಸಲಿದೆ ಎಂದು ಈಗಾಗಲೇ ಹವಾಮಾನ ಇಲಾಖೆಯೂ ಮುನ್ಸೂಚನೆ ನೀಡಿದೆ. ಅಧಿಕ ಉಷ್ಣಾಂಶದ ಪರಿಣಾಮ ಮತದಾನ ಪ್ರಮಾಣವು ತಗ್ಗುವ ಸಾಧ್ಯತೆ ಇದೆ.

ಚುನಾವಣಾ ಪ್ರಕ್ರಿಯೆ ವೀಕ್ಷಿಸಿದ ವಿದೇಶಿ ಪ್ರತಿನಿಧಿಗಳು

ಬೆಳಗಾವಿ: ಕಾಂಬೋಡಿಯಾ, ಮಾಲ್ಡೊವಾ, ನೇಪಾಳ, ಸೀಶೆಲ್ ಹಾಗೂ ಟ್ಯುನೀಷಿಯಾ ದೇಶಗಳ ಚುನಾವಣಾ ಆಯೋಗಗಳ ಮುಖ್ಯಸ್ಥರು ಮತ್ತು ಅಧಿಕಾರಿಗಳು ಸೋಮವಾರ ಬೆಳಗಾವಿಗೆ ಬಂದು, ಲೋಕಸಭಾ ಚುನಾವಣೆ ಸಿದ್ಧತೆಯನ್ನು ಕುತೂಹಲದಿಂದ ವೀಕ್ಷಿಸಿದರು.

ಇಲ್ಲಿನ ವನಿತಾ ವಿದ್ಯಾಲಯದಲ್ಲಿ ಸ್ಥಾಪಿಸಿದ ಬೆಳಗಾವಿ ಗ್ರಾಮೀಣ ಕ್ಷೇತ್ರದ ಮಸ್ಟರಿಂಗ್ ಕೇಂದ್ರಕ್ಕೆ ಭೇಟಿ ನೀಡಿದ ವಿದೇಶಿ ಪ್ರತಿನಿಧಿಗಳ ತಂಡಕ್ಕೆ ಮತಗಟ್ಟೆ ಸಿಬ್ಬಂದಿ ನಿಯೋಜನೆ, ಸ್ಟ್ರಾಂಗ್‌ರೂಮ್, ವಿದ್ಯುನ್ಮಾನ ಮತಯಂತ್ರಗಳ ವಿತರಣೆ, ಸಾರಿಗೆ ವ್ಯವಸ್ಥೆ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿ ನಿತೇಶ್ ಪಾಟೀಲ ಮಾಹಿತಿ ನೀಡಿದರು.

ನಂತರ ಮಾದರಿ ನೀತಿಸಂಹಿತೆ ಕೇಂದ್ರ, ವಾರ್ತಾ ಭವನದಲ್ಲಿ ಸ್ಥಾಪಿಸಿದ ಮಾಧ್ಯಮ ಪ್ರಮಾಣೀಕರಣ ಹಾಗೂ ಕಣ್ಗಾವಲು ಕೇಂದ್ರಕ್ಕೂ ತಂಡ ಭೇಟಿ ನೀಡಿತು. ಚುನಾವಣೆ ಕರ್ತವ್ಯಕ್ಕೆ ನಿಯೋಜನೆಗೊಂಡ ಸಿಬ್ಬಂದಿ ಜತೆ ಸಂವಾದ ನಡೆಸಿದರು. ತಮ್ಮ ದೇಶದ ಮತ್ತು ಭಾರತದ ಚುನಾವಣೆ ವ್ಯವಸ್ಥೆಗಿರುವ ವ್ಯತ್ಯಾಸದ ಕುರಿತು ಮಾತನಾಡಿದರು.

'ಭಾರತದಲ್ಲಿ ಚುನಾವಣೆ ಪ್ರಕ್ರಿಯೆ ಶಿಸ್ತುಬದ್ಧವಾಗಿ ನಡೆಯುತ್ತದೆ. ಸಿಬ್ಬಂದಿಗೆ ಹೆಚ್ಚಿನ ತರಬೇತಿ ನೀಡಲಾಗಿದೆ. ಇಲ್ಲಿ ಅನುಸರಿಸುವ ವಿಧಾನದಿಂದ ಚುನಾವಣೆ ವೆಚ್ಚ ತಗ್ಗಿಸಬಹುದು. ಭಾರತ ಮತ್ತು ನೇಪಾಳದಲ್ಲಿ ನಡೆಯುವ ಚುನಾವಣೆಗೆ ಸಾಮ್ಯತೆಯಿದೆ. ಭಾರತೀಯರು ಚುನಾವಣೆ ಮೇಲಿಟ್ಟ ವಿಶ್ವಾಸ ಕಂಡು ಖುಷಿಯಾಗಿದೆ' ಎಂದು ನೇಪಾಳದ ಚುನಾವಣಾ ಆಯೋಗದ ಅಧೀನ ಕಾರ್ಯದರ್ಶಿ ಥಾನೇಶ್ವರಬುಸಾಲ್ ತಿಳಿಸಿದರು.

ಕಾಂಬೋಡಿಯಾದ ರಾಷ್ಟ್ರೀಯ ಚುನಾವಣಾ ಮಂಡಳಿ ಸದಸ್ಯ ಹೆಲ್.ಸರಾಥ್, ಕಾಂಬೋಡಿಯಾದ ರಾಷ್ಟ್ರೀಯ ಚುನಾವಣಾ ಮಂಡಳಿ ಮುಖ್ಯ ಕಾರ್ಯದರ್ಶಿ ಹೌಟ್ ಬೋರಿನ್, ಮಾಲ್ಡೊವಾದ ಕೇಂದ್ರ ಚುನಾವಣಾ ಆಯೋಗದ ಸದಸ್ಯೆ ಡಾನಾ ಮಂಟೇನುವಾ, ಮಾಲ್ಡೊವಾದ ಕೇಂದ್ರ ಚುನಾವಣಾ ಆಯೋಗದ ಸ್ಥಳೀಯ ಜಿಲ್ಲಾ ಚುನಾವಣಾ ಪರಿಷತ್ ಮುಖ್ಯಸ್ಥ ಆ್ಯಡ್ರಿಯನ್ ಗಮರ್ತಾ ಎಸಾನು, ನೇಪಾಳದ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತ ದಿನೇಶ್ ಕುಮಾರ್ ಥಾಪಾಲಿಯಾ, ಸೀಶೆಲ್‌ನ ಚುನಾವಣಾ ಆಯೋಗದ ಮುಖ್ಯಸ್ಥ ಡ್ಯಾನಿ ಸಿಲ್ವಾ ಲುಕಾಸ್, ಸೀಶೆಲ್‌ನ ಚುನಾವಣಾ ಆಯೋಗದ ಆಯುಕ್ತ ನೊರ್ಲಿಸ್ ನಿಕೋಲಸ್ ರೋಸ್ ಹೋರೌ, ಟ್ಯುನೀಷಿಯಾದ ಎಲೆಕ್ಷನ್ ಹೈಕಮಿಷನ್‌ನ ಮಾನಸ್ರೀ ಮೊಹ್ಮದ್ ತ್ಲಿಲಿ ಮತ್ತು ಎಲೆಕ್ಷನ್ ಹೈಕಮಿಷನ್‌ನ ಪ್ರಾದೇಶಿಕ ನಿರ್ದೇಶಕ ಜೆಲ್ಲಾಲಿ ನಬೀಲ್ ಈ ತಂಡದಲ್ಲಿದ್ದಾರೆ.

ಮಂಗಳವಾರ (ಮೇ 7) ಜಿಲ್ಲೆಯ ವಿವಿಧ ಮತಗಟ್ಟೆಗಳಿಗೂ ತೆರಳಿ, ಅವರು ಚುನಾವಣೆ ವ್ಯವಸ್ಥೆ ಅಧ್ಯಯನ ಮಾಡುವರು.



ವಿದೇಶಿ ತಂಡದಿಂದ ವೀಕ್ಷಣೆ

ಬಿರುಗಾಳಿ ಆರ್ಭಟ: ತಂಪೆರೆದ ಆಲಿಕಲ್ಲು ಮಳೆ

ಒಂದನೇ ಪುಟದಿಂದ...

ಸಂಜೆ ವೇಳೆ ನಗರದ ತಾಪಮಾನ 35 ಡಿಗ್ರಿ ಸೆಲ್ಸಿಯಸ್‌ವರೆಗೆ ಇಳಿಕೆಯಾಯಿತು. ಆದರೆ, ವಿದ್ಯುತ್ ವ್ಯತ್ಯಯ ಕಾರಣ ಸೆಖೆಯಿಂದ ಜನರು ಪರದಾಡಿದರು.

ತಾಲ್ಲೂಕಿನ ಉರಿಗಿಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 3.4 ಸೆ.ಮೀ ಮತ್ತು ಮದನಹಳ್ಳಿ ಪಂಚಾಯಿತಿ ವ್ಯಾಪ್ತಿಯಲ್ಲಿ 3.5 ಸೆ.ಮೀ ಮಳೆಯಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು ತಿಳಿಸಿವೆ.

ಜಿಲ್ಲೆಯಲ್ಲಿ ಏಪ್ರಿಲ್‌ನಲ್ಲಿ ಒಂದೂ ಹನಿ ಮಳೆಯಾಗಿರಲಿಲ್ಲ. ಆ ತಿಂಗಳಲ್ಲಿ ರಾಜ್ಯದಲ್ಲಿ ಮಳೆ ಆಗದ ಏಕೈಕ ಜಿಲ್ಲೆ ಕೋಲಾರ ಆಗಿತ್ತು. ಮೇ ತಿಂಗಳಲ್ಲಿ ಕಳೆದ ವಾರ ಎರಡು ದಿನ ಮಳೆಯಾಗಿದೆ.

ರಾಜಧಾನಿ ಬೆಂಗಳೂರಿನಲ್ಲೂ ಸೋಮವಾರ ಮತ್ತೆ ಮಳೆ ಸುರಿದಿದೆ.

ಮಂಡ್ಯ, ಚಾಮರಾಜನಗರದಲ್ಲಿ ಮಳೆ

(ಮಂಡ್ಯ/ಚಾಮರಾಜನಗರ) ಮೈಸೂರು ಭಾಗದ ಮಂಡ್ಯ ನಗರ ಮತ್ತು ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಕೆಲವೆಡೆ ಸೋಮವಾರ ರಾತ್ರಿ ಗುಡುಗು ಮಿಂಚು ಸಹಿತ ಮಳೆ ಸುರಿಯಿತು.

ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದ ಸುತ್ತಮುತ್ತಲಿನ ಕಾಡಂಚಿನ ಪ್ರದೇಶದಲ್ಲಿ ಅರ್ಧ ಗಂಟೆ ಮಳೆ ಸುರಿಯಿತು. ಸಣ್ಣದಾಗಿ ಆರಂಭವಾದ ಮಳೆ 10 ನಿಮಿಷದಲ್ಲೇ ಬಿರುಸು ಪಡೆಯಿತು. ಧಾರಾಕಾರ ಮಳೆ ಸುರಿದು ವಾಹನಗಳ ಮೇಲೆ ಮರಗಳು ಬಿದ್ದಿದ್ದರಿಂದ ಮಂಡ್ಯದ 100 ಅಡಿ ರಸ್ತೆಯಲ್ಲಿ ವಾಹನ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು.

ಕುಸಿದು ಬಿದ್ದ ಟೊಮೆಟೊ ಮಂಡಿ ಶೆಡ್

ಕೋಲಾರ ಎಪಿಎಂಸಿ ಬಳಿ ಇರುವ ಸಿಎಂಆರ್ ಟೊಮೆಟೊ ಮಂಡಿ ಶೆಡ್ ಕುಸಿದು ಬಿದ್ದಿದೆ. ಹಲವಾರು ವಾಹನ ಜಖಂಗೊಂಡಿವೆ. ಲಕ್ಷಾಂತರ ರೂಪಾಯಿ ನಷ್ಟವಾಗಿದೆ ಎಂದು ಮಂಡಿ ಮಾಲೀಕ ಸಿಎಂಆರ್ ಶ್ರೀನಾಥ್ ತಿಳಿಸಿದರು.

'ಮರ ಹಾಗೂ ಜಿಂಕ್ ಶೀಟ್ ಬಳಸಿ ನಿರ್ಮಿಸಲಾದ ಹಳೆಯ ಶೆಡ್ ನೆಲಕ್ಕೆ ಉರುಳಿದ್ದು, ಅಡಿಯಲ್ಲಿದ್ದ ಸುಮಾರು ₹5 ಲಕ್ಷ ಮೌಲ್ಯದ 30 ಟನ್ ಟೊಮೆಟೊದೊಂದಿಗೆ ಕಾರು, ಎರಡು ಆಟೊ ಮತ್ತು ದ್ವಿಚಕ್ರ ವಾಹನಗಳಿಗೆ ಹಾನಿ ಆಗಿದೆ' ಎಂದರು.

'ರೈತರು ತಂದಿದ್ದ ಟೊಮೆಟೊ ಬಿಕರಿ ಆಗಿದ್ದು, ಖರೀದಿದಾರರಿಗೆ ತೊಂದರೆ ಆಗಬಾರದೆಂದು ಶೆಡ್ ತೆರವುಗೊಳಿಸಿ ಟೊಮೆಟೊ ಸಾಗಾಟಕ್ಕೆ ಕೆಲಸ ಆರಂಭಿಸಲಾಗಿದೆ' ಎಂದು ಹೇಳಿದರು.

ಜಾಮೀನು ಕೋರಿ ಎಚ್‌.ಡಿ. ರೇವಣ್ಣ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪದ ಪ್ರಕರಣಕ್ಕೆ ಸಂಬಂಧಿಸಿದ ಮತ್ತೊಂದು ಪ್ರಕರಣ-ದಲ್ಲಿ ಮಹಿಳೆಯೊಬ್ಬರ ಅಪಹರಣದ ಆರೋಪಿಯಾಗಿ ಸದ್ಯ ಎಸ್‌ಐಟಿ ಬಂಧ-ನದಲ್ಲಿರುವ ಹೊಳೆನರಸೀಪುರ ಕ್ಷೇತ್ರದ ಜೆಡಿಎಸ್ ಶಾಸಕ ಎಚ್‌.ಡಿ.ರೇವಣ್ಣ ನಿಯಮಿತ (ರೆಗ್ಯುಲರ್) ಜಾಮೀನು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಈ ಕುರಿತ ಅರ್ಜಿಯನ್ನು ಎಚ್‌.ಡಿ.ರೇವಣ್ಣ ಪರ ವಕೀಲ ಪವನ್ ಸಾಗರ್ ಸೋಮವಾರ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ (ಸಿಸಿಎಚ್–82) ನ್ಯಾಯಾಧೀಶ ಸಂತೋಷ ಗಜಾನನ ಭಟ್ ಮುಂದೆ ಪ್ರಸ್ತುತಪಡಿಸಿದರು. ಇದೇ 7ಕ್ಕೆ ವಿಚಾರಣೆ ನಿಗದಿಪಡಿಸಲಾಯಿತು.

ಪ್ರಜ್ವಲ್ ಪ್ರಕರಣ: ತಾತ್ಕಾಲಿಕ ಪ್ರತಿಬಂಧ

ಬೆಂಗಳೂರು: ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಹೊತ್ತಿರುವ ಜೆಡಿಎಸ್‌ನ ಉಚ್ಚಾಟಿತ ಸಂಸದ ಪ್ರಜ್ವಲ್ ರೇವಣ್ಣಗೆ ಸಂಬಂಧಿಸಿದ ಪ್ರಕರಣದಲ್ಲಿ ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡ ಮತ್ತು ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಅವರ ವಿರುದ್ಧ ನಕಲಿ ಸುದ್ದಿ, ಚಿತ್ರ ಅಥವಾ ವಿಡಿಯೊಗಳು ಅಥವಾ ತಿರುಚಿದ ಸುದ್ದಿಗಳ ಪ್ರಸಾರ ಅಥವಾ ಪ್ರಕಟ ಮಾಡದಂತೆ ಕೋರ್ಟ್ ತಾತ್ಕಾಲಿಕ ಪ್ರತಿಬಂಧ ವಿಧಿಸಿದೆ.

ಈ ಸಂಬಂಧ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಮತ್ತು ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಸಲ್ಲಿಸಿರುವ ಅಸಲು ದಾವೆಯ ವಿಚಾರಣೆಯನ್ನು ರಜಾಕಾಲೀನ ಸಿಸಿಎಚ್ ಕೋರ್ಟ್ ನ್ಯಾಯಾಧೀಶ ಎಚ್‌.ಎ.ಮೋಹನ್ ವಿಚಾರಣೆ ನಡೆಸಿದ್ದು; ಪ್ರತಿವಾದಿಗಳಾದ ಮುದ್ರಣ, ವಿದ್ಯುನ್ಮಾನ ಮತ್ತು ಸಾಮಾಜಿಕ ಮಾಧ್ಯಮಗಳೂ ಸೇರಿದಂತೆ ಒಟ್ಟು 89 ಮಾಧ್ಯಮ ಸಂಸ್ಥೆಗಳ ವಿರುದ್ಧ ತಾತ್ಕಾಲಿಕ ಪ್ರತಿಬಂಧಕ ಆದೇಶ ನೀಡಿದ್ದಾರೆ.

'ಪ್ರತಿವಾದಿ ಮಾಧ್ಯಮಗಳು ತಮ್ಮ ಬಳಿ ಪ್ರಬಲವಾದ ಸಾಕ್ಷ್ಯ ಹೊಂದಿದ್ದರೆ ಸುದ್ದಿ ಪ್ರಸಾರ ಅಥವಾ ಪ್ರಕಟ ಮಾಡದಂತೆ ಸಂಪೂರ್ಣವಾಗಿ ನಿರ್ಬಂಧಿಸಲಾಗಿಲ್ಲ' ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ. ಪ್ರತಿವಾದಿ ಮಾಧ್ಯಮ ಸಂಸ್ಥೆಗಳಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಲಾಗಿದ್ದು, ಇದೇ 29ಕ್ಕೆ ವಿಚಾರಣೆ ಮುಂದೂಡಲಾಗಿದೆ.

'ಷಡ್ಯಂತ್ರದ ಬಗ್ಗೆ ಸೂಕ್ತ ತನಿಖೆ ಆಗಲಿ'

ಹಾಸನ: 'ಕೆಲವರು ಅಶ್ಲೀಲ ವಿಡಿಯೊಗಳನ್ನು ಫೋಟೋಶಾಪ್ ಮೂಲಕ ತಿರುಚಿ ಹರಿಬಿಡುತ್ತಿರುವುದರಿಂದ, ಜಿಲ್ಲೆಯ ಅನೇಕ ಮಹಿಳೆಯರ ಮಾನಕ್ಕೆ ಹಾನಿಯಾಗುತ್ತಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಒತ್ತಾಯಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಹರಿದಾಡುವುದನ್ನು ತಡೆಯುವಲ್ಲಿ ಗುಪ್ತಚರ ಇಲಾಖೆ ವಿಫಲವಾಗಿದೆ. ಸಿಐಡಿ, ಗೃಹ ಇಲಾಖೆ, ಸರ್ಕಾರ ಇನ್ನಾದರೂ ಎಚ್ಚೆತ್ತು-ಕೊಳ್ಳಬೇಕು' ಎಂದು ಆಗ್ರಹಿಸಿದರು.

'ಬೇಕಾಬಿಟ್ಟಿಯಾಗಿ ಪೆನ್ ಡ್ರೈವ್ ಹಂಚಿಕೆಯಾಗಲು ಕಾರಣ ಯಾರು? ಕೃತ್ಯ ನಡೆಯಲು ಕಾರಣಕರ್ತರು ಯಾರು ಎಂಬುದರ ಬಗ್ಗೆ ಹಾಗೂ ಷಡ್ಯಂತ್ರದ ಬಗ್ಗೆ ಸೂಕ್ತ ತನಿಖೆಯಾಗಬೇಕು. ಅದರ ಮಾಹಿತಿ ಬಹಿರಂಗವಾಗಬೇಕು' ಎಂದು ಆಗ್ರಹಿಸಿದರು. ನಂತರ ಜೆಡಿಎಸ್ ಮುಖಂಡರು ಎಸ್ಪಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಇದಕ್ಕೂ ಮೊದಲು ಕೆ.ಎಸ್. ಲಿಂಗೇಶ್ ಹಾಗೂ ಸಿ.ಎನ್. ಬಾಲಕೃಷ್ಣ ಅವರು ಹೊಳೆನರಸೀಪುರದ ರೇವಣ್ಣ ಅವರ ಮನೆಗೆ ತೆರಳಿ, ಭವಾನಿ ಅವರೊಂದಿಗೆ ಚರ್ಚಿಸಿದರು.

'ಪೆನ್‌ಡ್ರೈವ್ ರೂವಾರಿ ಡಿಕೆಶಿ'

ಒಂದನೇ ಪುಟದಿಂದ...

'ಶಿವಕುಮಾರ್ ಅವರು ಒಮ್ಮೆ ನನ್ನನ್ನು ಮನೆಗೆ ಕರೆಸಿದರು. ಈ ಪ್ರಕ-ರಣದಲ್ಲಿ ಸಹಕರಿಸಿದರೆ ಲೋಕಸಭಾ ಚುನಾವಣೆ ಮುಗಿದ ಬಳಿಕ ಸಂಪುಟದಲ್ಲಿ ಸಚಿವರನ್ನಾಗಿ ಮಾಡುವುದಾಗಿಯೂ ಆಮಿಷ ಒಡ್ಡಿದ್ದರು' ಎಂದು ಹೇಳಿದರು.

'ನನ್ನ ಜೀವನದ ಉದ್ದಕ್ಕೂ ಎಚ್‌. ಡಿ.ರೇವಣ್ಣ ಮತ್ತು ಕುಟುಂಬದ ವಿರುದ್ಧ ಹೋರಾಟ ಮಾಡುತ್ತಲೇ ಬಂದಿದ್ದೇನೆ. ಸಂಸದ ಪ್ರಜ್ವಲ್ ರೇವಣ್ಣ ಅವರ ಮಾಜಿ ಕಾರು ಚಾಲಕ ಕಾರ್ತಿಕ್ ಪೆನ್‌ಡ್ರೈವ್ ಕೊಟ್ಟ ಬಳಿಕ ಅದರಲ್ಲಿ ಅಶ್ಲೀಲ ವಿಡಿಯೊ ಇರುವುದನ್ನು ನೋಡಿದೆ. ಇದಕ್ಕೂ ಮೊದಲೇ ಪ್ರಜ್ವಲ್ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ತಡೆಯಾಜ್ಞೆ ತೆರವುಗೊಳಿಸುವಂತೆ ಕಾರ್ತಿಕ್ ಕೇಳಿಕೊಂಡಿದ್ದ. ನಾನು ಯಾವುದೇ ಕೆಲಸ ಮಾಡುವುದಿದ್ದರೂ ಕಾನೂನು ವ್ಯಾಪ್ತಿಯಲ್ಲೇ ಮಾಡುತ್ತೇನೆ. ಇನ್ನಷ್ಟು ಪುರಾವೆಗಳನ್ನು ತರುವಂತೆ ಆತನಿಗೆ ಸ್ಪಷ್ಟವಾಗಿ ಹೇಳಿದ್ದೆ' ಎಂದು ಹೇಳಿದ ಅವರು ಕಾರ್ತಿಕ್ ಜತೆಗಿನ ಸಂಭಾಷಣೆಯ ವಿಡಿಯೊವೊಂದನ್ನು ಪ್ರದರ್ಶಿಸಿದರು.

'ಇವೆಲ್ಲ ಆದ ಬಳಿಕ ಪೆನ್‌ಡ್ರೈವ್ ಯಾವ ರೀತಿ ಬೆಂಗಳೂರಿಗೆ ಬಂತು ಎಂಬ ಸಂಪೂರ್ಣ ಮಾಹಿತಿಯನ್ನೂ ಎಸ್‌ಐಟಿ ಅಧಿಕಾರಿಗಳಿಗೆ ಹೇಳಿಕೆ ಮೂಲಕ ವಿವರ ನೀಡಿದ್ದೇನೆ' ಎಂದರು.

ಮೋದಿ– ಕುಮಾರಸ್ವಾಮಿ ಗುರಿ: 'ಈ ಪೆನ್‌ಡ್ರೈವ್ ಬಿಡುಗಡೆ ಹಿಂದೆ ಪ್ರಧಾನಿ ನರೇಂದ್ರ ಮೋದಿ ಮತ್ತು ಎಚ್‌. ಡಿ.ಕುಮಾರಸ್ವಾಮಿ ಗುರಿ ಮಾಡುವ ಉದ್ದೇಶವಿತ್ತು. ಎಚ್‌.ಡಿ.ರೇವಣ್ಣ ಅವರನ್ನು ರಾಜಕೀಯವಾಗಿ ಮುಗಿಸಿದರು. ಮೋದಿ ಮತ್ತು ಕುಮಾರಸ್ವಾಮಿ ಅವರನ್ನು ಮುಗಿಸಲು ತಂತ್ರ ಮಾಡಿದ್ದಾರೆ. ಇದರಿಂದ ಚುನಾವಣೆಯಲ್ಲಿ ಲಾಭ ಪಡೆಯುವುದು ಅವರ ಉದ್ದೇಶ' ಎಂದು ದೇವರಾಜೇಗೌಡ ಆರೋಪಿಸಿದರು. 'ಬೇಲೂರಿನ ಅರೇಹಳ್ಳಿಗೆ ಹೋಗಿ ಕಾಂಗ್ರೆಸ್ ಪಕ್ಷದವರು ಸಂತ್ರಸ್ತೆಗೆ ಹಣ ಹಂಚಿಕೆ ಮಾಡಿದ್ದಾರೆ. ಅಲ್ಲಿಗೆ ಹೋಗಿದ್ದು ಯಾರು, ಎಷ್ಟು ಗಾಡಿಗಳು ಹೋಗಿದ್ದವು, ಯಾರನ್ನು ಕರೆದುಕೊಂಡು ಬಂದ್ರು. ಹಾಸನದ ಸ್ಕೈಬರ್ಡ್ ಹೋಟೆಲ್‌ನಲ್ಲಿ ಸಂತ್ರಸ್ತೆಯ ಜೊತೆ ಶ್ರೇಯಸ್ ಪಟೇಲ್ ಎಷ್ಟು ಹೊತ್ತು ಮಾತನಾಡಿದ್ದಾರೆ ಎಂಬುದೆಲ್ಲ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ರೆಕಾರ್ಡ್ ಆಗಿದೆ. ತೆಗೆಸಿ ನೋಡಬಹುದು' ಎಂದರು.

ಡಿಕೆಶಿ ಹೇಳಿದ್ದೇನು; ದೇವರಾಜ್ ವಿವರಣೆ

ಮಾಜಿ ಸಂಸದ ಎಲ್‌.ಆರ್‌.ಶಿವರಾಮೇಗೌಡ ದೂರವಾಣಿ ಕರೆ ಮಾಡಿ, 'ಎಲ್ಲಪ್ಪಾ ನಿನ್ನ ಮನೆ. ಸದಾಶಿವನಗರದ ಡಿಕೆ ಸಾಹೇಬ್ರ ಮನೆಗೆ ಬಂದು ಹೋಗಲು ಆಗುತ್ತಾ' ಎಂದು ದೇವರಾಜೇಗೌಡ ಅವರನ್ನು ಪ್ರಶ್ನಿಸಿದರು.

'ದೇವನಹಳ್ಳಿ ಸಮೀಪ ಮನೆ ಇದೆ' ಎಂದು ದೇವರಾಜೇಗೌಡ ಉತ್ತರಿಸಿದರು.'ಡಿಕೆ ಸಾಹೇಬ್ರಿಗೆ ಫೋನ್ ಕೊಡ್ತೇನೆ ಮಾತಾಡು' ಎನ್ನುತ್ತಾರೆ ಶಿವರಾಮೇಗೌಡ. 'ನಮಸ್ಕಾರ ದೇವರಾಜ್...' ಎಂದು ಡಿ.ಕೆ.ಶಿವಕುಮಾರ್ ಅವರದ್ದು ಎನ್ನಲಾದ ಧ್ವನಿ ಕೇಳಿ ಬರುತ್ತದೆ.

ಇಷ್ಟು ಸಂಭಾಷಣೆ ಕೇಳಿಸಿದ ದೇವರಾಜೇಗೌಡ, 'ಮುಂದಿನ ಸಂಭಾಷಣೆ ಅತ್ಯಂತ ಮಹತ್ವದಾದ್ದರಿಂದ ಅದನ್ನು ಸಿಬಿಐಗೆ ಕೊಡಬೇಕು. ಆದ್ದರಿಂದ ಉಳಿದ ಮಾಹಿತಿ ಹಂಚಿಕೊಳ್ಳಲು ಸಾಧ್ಯವಿಲ್ಲ' ಎಂದರು.

ಡಿ.ಕೆ.ಶಿವಕುಮಾರ್ ಮನೆಗೆ ಭೇಟಿ ನೀಡಿ, ಮಾತನಾಡುವ ಸಂದರ್ಭದಲ್ಲಿ, 'ದೂರು ಕೊಡುವವರು ಗಟ್ಟಿಯಾಗಿ ನಿಂತರೆ ಆರೋಪಿ ತಪ್ಪಿಸಿಕೊಳ್ಳಲು ಆಗುವುದಿಲ್ಲ' ಎಂದು ಹೇಳಿದೆ. ಅದಕ್ಕೆ ಶಿವಕುಮಾರ್ ಅವರು, 'ನಾವು ಇದ್ದೇವಲ್ಲ, ಅದೆಲ್ಲ ಮಾಡ್ತೀವಿ ಬಿಡು' ಎಂದು ಪ್ರತಿಕ್ರಿಯಿಸಿದರು.

ಮತ್ತೆ ಎನ್‌ಐಎ ಕಸ್ಟಡಿಗೆ ಶಂಕಿತರು

ಪ್ರಜಾವಾಣಿ ವಾರ್ತೆ

ಕೆಫೆ ಬಾಂಬ್ ಸ್ಫೋಟ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿಗಳಾದ ಅಬ್ದುಲ್ ಮಥೀನ್ ಅಹಮ್ಮದ್ ತಾಹಾ ಹಾಗೂ ಮುಸಾವೀರ್ ಹುಸೇನ್ ಶಾಜೀಬ್‌ನನ್ನು ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ಅಧಿಕಾರಿಗಳು ಪುನಃ ಕಸ್ಟಡಿಗೆ ಪಡೆದುಕೊಂಡಿದ್ದಾರೆ. ಮಾರ್ಚ್ 1ರಂದು ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣ-ದಲ್ಲಿ ಇಬ್ಬರನ್ನೂ ಏಪ್ರಿಲ್ 12ರಂದು ಬಂಧಿಸಲಾಗಿತ್ತು. ಬಳಿಕ, ವಿಚಾರಣೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಎನ್‌ಐಎ ಅಧಿಕಾರಿಗಳು, ಮತ್ತಷ್ಟು ಮಹತ್ವದ ಮಾಹಿತಿ ಕಲೆಹಾಕಿದ್ದಾರೆ. ಈ ಬಗ್ಗೆ ಹೆಚ್ಚಿನ ತನಿಖೆ ನಡೆಸುವ ಉದ್ದೇಶದಿಂದ ನ್ಯಾಯಾಲಯದ ಅನುಮತಿ ಪಡೆದು, ಮುಸಾವೀರ್ ಹಾಗೂ ತಾಹಾನನ್ನು ಕಸ್ಟಡಿಗೆ ಪಡೆದು-ಕೊಂಡಿದ್ದಾರೆ. 'ಬಾಂಬ್ ಸ್ಫೋಟದ ಆರೋಪಿಗಳು, ಹಲವು ದಿನಗಳಿಂದ ಸಂಚು ರೂಪಿಸಿದ್ದರು. ಇದಕ್ಕೆ ಹಲವರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಾಯ ಮಾಡಿದ್ದರು. ಇದೀಗ, ಎಲ್ಲರನ್ನೂ ಪತ್ತೆ ಮಾಡಬೇಕಿದೆ. ತನಿಖೆಯ ಪ್ರಗತಿಯನ್ನು ನ್ಯಾಯಾಲಯಕ್ಕೆ ತಿಳಿಸಿ, ಇಬ್ಬರನ್ನೂ ಕಸ್ಟಡಿಗೆ ನೀಡಲು ಕೋರಲಾಗಿತ್ತು. ಮನವಿ ಪುರಸ್ಕರಿಸಿದ ನ್ಯಾಯಾಲಯ, ಇಬ್ಬರನ್ನೂ ಮೇ 12ರವರೆಗೆ ಕಸ್ಟಡಿಗೆ ಒಪ್ಪಿಸಿದೆ' ಎಂದು ಎನ್‌ಐಎ ಮೂಲಗಳು ಹೇಳಿವೆ.



ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಸೋಮವಾರ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಅಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಮುಖ್ಯಮಂತ್ರಿ ಎಸ್‌.ಎಂ. ಕೃಷ್ಣ ಅವರ ಆರೋಗ್ಯ ವಿಚಾರಿಸಿದರು

ಮಮತಾ 'ದೀದಿಗಿರಿ'ಗೆ ಅವಕಾಶ ನೀಡಲ್ಲ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ 'ಅಸಹ್ಯಕರ ರಾಜಕಾರಣ' ಮಾಡುತ್ತಿದ್ದಾರೆ ಎಂದು ರಾಜ್ಯಪಾಲ ಸಿ.ವಿ.ಆನಂದ ಬೋಸ್ ವಾಗ್ದಾಳಿ ನಡೆಸಿದ್ದಾರೆ.

'ರಾಜಭವನದ ಮೇಲೆ ಅವರ 'ದೀದಿಗಿರಿ' ನಡೆಯಲು ನಾನು ಅವಕಾಶ ನೀಡುವುದಿಲ್ಲ. ಲೈಂಗಿಕ ಕಿರುಕುಳ ಕುರಿತಂತೆ ಮಹಿಳಾ ಸಿಬ್ಬಂದಿಯ ದೂರು ಕುರಿತು ವಿವಾದ ಸೃಷ್ಟಿಸಿದ್ದಾರೆ' ಎಂದು ಸುದ್ದಿಗಾರರ ಜೊತೆ ಮಾತನಾಡುತ್ತಾ ಹೇಳಿದರು.

ಅವರದು ಅಸಹ್ಯವಾದ ರಾಜಕಾರಣ. ಆದರೆ, ಅವರನ್ನು ರಕ್ಷಿಸು ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಆದರೆ, ರಕ್ಷಿಸುವುದು ದೇವರಿಗೂ ಅಸಾಧ್ಯ ಎಂದು ಹೇಳಿದರು.

ಪಾಂಡವಪುರ: ಆರೋಗ್ಯ ಇಲಾಖೆ ವಸತಿಗೃಹದಲ್ಲೇ ಕೃತ್ಯ

ಹೆಣ್ಣುಭ್ರೂಣ ಹತ್ಯೆ; ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ತಾಲ್ಲೂಕು ಆರೋಗ್ಯಾಧಿಕಾರಿ ಕಚೇರಿ ಹಿಂಭಾಗದಲ್ಲಿರುವ, ಆರೋಗ್ಯ ಇಲಾಖೆ ವಸತಿ ಗೃಹದಲ್ಲೇ ಹೆಣ್ಣು ಭ್ರೂಣ ಹತ್ಯೆ ನಡೆಸುತ್ತಿದ್ದ ಆರೋಪದ ಮೇರೆಗೆ ಮೂವರನ್ನು ಅಧಿಕಾರಿಗಳು ಹಾಗೂ ಪೊಲೀಸರ ತಂಡ ಭಾನುವಾರ ತಡರಾತ್ರಿ ದಾಳಿ ನಡೆಸಿ ಬಂಧಿಸಿದೆ.

ಇಲಾಖೆಯ ಗ್ರೂಪ್ ಡಿ ನೌಕರರಾದ ಅಶ್ವಿನಿ, ಅವರ ಪತಿ ಹಾಗೂ ಆ್ಯಂಬುಲೆನ್ಸ್ ಚಾಲಕ ಆನಂದ ಮತ್ತು ಗರ್ಭಪಾತಕ್ಕೆಂದು ಕರೆತಂದಿದ್ದ ಮೈಸೂರು ಜಿಲ್ಲೆಯ ಮಹಿಳೆಯ ಅತ್ತೆ ಶಶಿಕಲಾ ಬಂಧಿತರು.



ಆರೋಪಿಗಳಾದ ಆನಂದ್, ಅಶ್ವಿನಿ ದಂಪತಿ

ಮಧ್ಯರಾತ್ರಿ 12.30ರ ವೇಳೆಯಲ್ಲಿ ಭ್ರೂಣಹತ್ಯೆ ನಡೆಸುತ್ತಿದ್ದಾರೆಂಬ ಖಚಿತ ಮಾಹಿತಿ ಆಧಾರದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಮೋಹನ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಸಿ.ಎ.ಅರವಿಂದ್, ಪಿಎಸ್‌ಐ ಉಮೇಶ್ ಮತ್ತು ಸಿಬ್ಬಂದಿ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದರು. ಭ್ರೂಣಹತ್ಯೆಗೆ ಬಳಸುವ ಎಂಟಿಪಿ (ಮೆಡಿಕಲ್ ಟರ್ಮಿನೇಷನ್ ಆಫ್ ಪ್ರೆಗ್ನೆನ್ಸಿ) ಕಿಟ್, ಸಿರಿಂಜ್ ಮತ್ತಿತರ ವಸ್ತುಗಳನ್ನು ವಶಕ್ಕೆ ಪಡೆದರು.


'ಗರ್ಭಪಾತದ ಮಾತ್ರೆ ಸೇವಿಸಿದ್ದ ಮಹಿಳೆಯನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದು, ಆರೋಗ್ಯವಾಗಿ-ದ್ದಾರೆ' ಎಂದು ವೈದ್ಯರು ತಿಳಿಸಿದ್ದಾರೆ. ಸ್ಥಳಕ್ಕೆ ಜಿಲ್ಲಾಧಿಕಾರಿ ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್, ಜಿಲ್ಲಾ ಪಂಚಾಯಿತಿ ಸಿಇಒ ಶೇಖ್ ತನ್ವೀರ್ ಆಸಿಫ್ ಭೇಟಿ ನೀಡಿ ಪರಿಶೀಲಿಸಿದರು. ಆಸ್ಪತ್ರೆಗೂ ಭೇಟಿ ನೀಡಿ ಮಹಿಳೆಯ ಆರೋಗ್ಯ ವಿಚಾರಿಸಿದರು.

'ಬೇರೆ ಕಡೆ ಭ್ರೂಣಲಿಂಗ ಪತ್ತೆ ಮಾಡಿ ಮಹಿಳೆಯನ್ನು ವಸತಿ ಗೃಹಕ್ಕೆ ಕರೆತಂದು ಗರ್ಭಪಾತ ನಡೆಸಲಾಗುತ್ತಿತ್ತು. ಸಮಗ್ರ ತನಿಖೆ ನಡೆಸಲಾಗುವುದು' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ. ಮೋಹನ್ ಹೇಳಿದರು. 'ಪೊಲೀಸರು ಪ್ರಕರಣದ ವಿಚಾರಣೆ ನಡೆಸುತ್ತಿದ್ದಾರೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾಧಿಕಾರಿ ತಿಳಿಸಿದರು.

ನಿಧನ ವಾರ್ತೆ

ಮಾಜಿ ಶಾಸಕ ನಾಗರೆಡ್ಡಿ ಪಾಟೀಲ

ಸೇಡಂ (ಕಲಬುರಗಿ ಜಿಲ್ಲೆ): ಮಾಜಿ ಶಾಸಕ ನಾಗರೆಡ್ಡಿ ಪಾಟೀಲ (79) ಸೋಮವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು.



ಅವರಿಗೆ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. 1983–85ರ ಅವಧಿಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸೇಡಂ ಶಾಸಕರಾಗಿದ್ದರು. ಆಗ ರಾಮಕೃಷ್ಣ ಹೆಗಡೆ ಅವರು ಮುಖ್ಯ-ಮಂತ್ರಿಯಾಗಿದ್ದರು. ನಾಗರೆಡ್ಡಿ ಅವರು ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿಯ ಗೌರವ ಅಧ್ಯಕ್ಷರೂ ಆಗಿದ್ದರು. ಆಶ್ರಯ ಕಾಲೊನಿ ಪಕ್ಕದ ಸ್ವಂತ ಹೊಲದಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸಹನೆ, ಸಮಾಧಾನ, ಶಾಂತಿ ಇಲ್ಲದ ಮನುಷ್ಯ ಏನನ್ನೂ ಸಾಧಿಸಲಾರ.

-ರವೀಂದ್ರನಾಥ ಟ್ಯಾಗೋರ್

ಅತಿಶಾಖದ ಜೊತೆಗೆ ಕಾಳ್ಗಿಚ್ಚು ನಿಸರ್ಗ ಸಂಕಟಕ್ಕೆ ಯಾರು ದಿಕ್ಕು?

ಉತ್ತರಾಖಂಡದ ಸಮತಟ್ಟಾದ ಪ್ರದೇಶಗಳೆಲ್ಲ ಅತಿಶಾಖದಿಂದ ತತ್ತರಿಸುತ್ತಿರುವಾಗ ಶೀತಲ ಹಿಮಾಲಯದಲ್ಲಿ ಕಾಳ್ಗಿಚ್ಚಿನ ಪ್ರಕೋಪ ಹೆಚ್ಚುತ್ತಿದೆ. ಉತ್ತರಾಖಂಡದ ಹತ್ತಾರು ಅರಣ್ಯಗಳಲ್ಲಿ ಒಂದರ ಮೇಲೊಂದರಂತೆ ಬೆಂಕಿಯ ದುರಂತಗಳು ವರದಿಯಾಗುತ್ತಿವೆ. ಕಳೆದ ವಾರ ನೈನಿತಾಲ್ ಜಿಲ್ಲೆಯಲ್ಲಿ ಏಕಕಾಲಕ್ಕೆ 23 ತಾಣಗಳಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಕಡಿದಾದ ದುರ್ಗಮ ಪ್ರದೇಶಗಳಲ್ಲಿ ಅರಣ್ಯ ಸಿಬ್ಬಂದಿಯಾಗಲೀ ಅಗ್ನಿಶಾಮಕ ಸಾಧನಗಳಾಗಲೀ ಧಾವಿಸಲು ಸಾಧ್ಯವಾಗುವುದಿಲ್ಲ. ವಾಯುಸೇನೆಯ ಹೆಲಿಕಾಪ್ಟರ್‌ಗಳು ನೀರಿನ ಮೂಟೆಯನ್ನು ಅಲ್ಲಲ್ಲಿ ಬೀಳಿಸಿ ಬೆಂಕಿಯನ್ನು ನಂದಿಸಲು ಯತ್ನಿಸುತ್ತಿವೆ. ಆದರೆ ಅದೂ ಅಪಾಯಕಾರಿಯಾದ್ದರಿಂದ ನಿನ್ನೆಯಿಂದ ಹೆಲಿಕಾಪ್ಟರ್ ಹಾರಾಟವನ್ನೂ ನಿಲ್ಲಿಸಲಾಗಿದೆ. ಮಳೆಗಾಗಿ ಕಾಯುವುದನ್ನು ಬಿಟ್ಟರೆ ಬೇರೇನೂ ಮಾಡಲಾಗದ ಹತಾಶ ಪರಿಸ್ಥಿತಿ ಉದ್ಭವಿಸಿದೆ. ಭಾರತದಲ್ಲಿ ಕಾಳ್ಗಿಚ್ಚಿನ ಶೇಕಡ 95ರಷ್ಟು ಪ್ರಕರಣಗಳು ಮನುಷ್ಯ ಕೃತ್ಯವೆಂದೇ ಅರಣ್ಯ ಇಲಾಖೆಯ ದಾಖಲೆಗಳು ಹೇಳುತ್ತವೆ. ಹುಲ್ಲು ಚಿಗುರಿ ಬೆಳೆಯಲೆಂದು ದನಗಾಹಿಗಳು, ಸುಗ್ಗಿ ಮುಗಿದ ನಂತರ ಕೂಳೆ ಸುಡಲು ರೈತರು ಬೆಂಕಿ ಹಚ್ಚುವುದುಂಟು. ಹುಡುಗಾಟಕ್ಕೋ ಕಿಡಿಗೇಡಿತನಕ್ಕೋ ಬೆಂಕಿ ಹಚ್ಚುವುದೂ ಕಾರಣ ಆಗುವುದುಂಟು. ಆದರೆ ಏಕಕಾಲಕ್ಕೆ ಅಷ್ಟೊಂದು ದುರ್ಗಮ ತಾಣಗಳಲ್ಲಿ ಬೆಂಕಿ ಹೊತ್ತಿಕೊಳ್ಳುವುದಕ್ಕೆ ನೈಸರ್ಗಿಕ ಕಾರಣವೂ ಇದ್ದೀತು. ಜಾಗತಿಕ ತಾಪಮಾನ ಏರಿಕೆಯಿಂದಾಗಿ ಈ ವರ್ಷ ಹಿಮಪಾತದ ಪ್ರಮಾಣ ಕಡಿಮೆ ಇದ್ದುದರಿಂದ ನೆಲದಲ್ಲಿ ತೇವಾಂಶ ಏನೂ ಉಳಿದಿಲ್ಲ. ಪೊದೆಗಳು ಒಣಗಿ ನಿಂತಿವೆ. ಪೈನ್ (ಸೂಜಿಪರ್ಣ) ಮರಗಳ ತೊಗಟೆ ಮತ್ತು ನೆಲದ ಮೇಲೆ ಹಾಸಿ ಬಿದ್ದಿರುವ ಸೂಜಿಯಂಥ ಎಲೆಗಳಲ್ಲಿ ಎಣ್ಣೆಯ ಅಂಶ ಜಾಸ್ತಿ ಇರುತ್ತದೆ. ಬೆಂಕಿಯನ್ನು ಬಾಚಿಕೊಳ್ಳಲು ನಿಸರ್ಗವೇ ಸಜ್ಜಾಗಿ ನಿಂತಂತಿದೆ.



ಜನನಾಯಕರಿಂದ ಎಲ್ಲೆಲ್ಲೂ ಬೆಂಕಿಯುಗುಳುವ ಭಾಷಣಗಳು ಕೇಳಿಬರುತ್ತಿವೆಯೇ ವಿನಾ ನಿಸರ್ಗ ರಕ್ಷಣೆ, ಜನಸಾಮಾನ್ಯರ ಬದುಕಿಗೆ ಸಂಬಂಧಿಸಿದ ವಿಷಯಗಳು ಕತ್ತಲಲ್ಲೇ ಉಳಿದಂತಾಗಿವೆ

ಮೇಘಸ್ಫೋಟ, ದಿಢೀರ್ ಧಾರೆ, ಭೂಕುಸಿತ, ಕಾಳ್ಗಿಚ್ಚು, ಹಿಮಕುಸಿತ ಇವೆಲ್ಲವೂ ಹಿಮಾಲಯದಲ್ಲಿ ಹಿಂದೊಂದು ಕಾಲದಲ್ಲಿ ತನ್ನಷ್ಟಕ್ಕೆ ಜರುಗುವ ವಿದ್ಯಮಾನಗಳಾಗಿದ್ದವು. ಈಗೀಗ ಎಲ್ಲವೂ ಮಾನವನಿರ್ಮಿತ ದುರಂತಗಳ ಪಟ್ಟಿಗೇ ಸೇರಿಕೊಳ್ಳುತ್ತಿವೆ. ಅಭಿವೃದ್ಧಿ ಹೊಂದಿದ ದೇಶಗಳು ವಿಪರೀತ ಪ್ರಮಾಣದಲ್ಲಿ ಭೂಗತ ಇಂಧನಗಳನ್ನು ಉರಿಸುತ್ತಿದ್ದುದರಿಂದಲೇ ಜಾಗತಿಕ ತಾಪಮಾನ ಏರುತ್ತಿದೆ. ವಿಪರ್ಯಾಸದ ಸಂಗತಿ ಏನೆಂದರೆ, ಇಂಧನ ಬಳಕೆ ಎಲ್ಲೆಲ್ಲೂ ಜಾಸ್ತಿಯಾಗುತ್ತಿದ್ದರೂ ಅದರ ಪರಿಣಾಮಗಳನ್ನು ಎದುರಿಸಲು ಬೇಕಾದ ಸಿದ್ಧತೆಗಳು ನಡೆಯುತ್ತಿಲ್ಲ. ಈ ವಿಶ್ವವ್ಯಾಪಿ ಚಕ್ರೀಯ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಶ್ನೆ ಹೇಗೂ ಇರಲಿ, ಅದರ ಜೊತೆಗೆ ಇತ್ತ ಪ್ರವಾಸಿಗರ ಸಂಖ್ಯೆ, ಪುಣ್ಯಕ್ಷೇತ್ರಗಳ ದರ್ಶನಕ್ಕೆಂದೋ, ಸಾಹಸಯಾನಕ್ಕೆಂದೋ ಗುಡ್ಡಬೆಟ್ಟಗಳಿಗೆ ಧಾವಿಸುವವರ ಸಂಖ್ಯೆ ಹೆಚ್ಚುತ್ತ ಹೋಗುತ್ತಿದೆ. ಹಾಗೆ ಧಾವಿಸುವವರು ತಮ್ಮ ಮೇಲೆ ಸಂಕಷ್ಟಗಳನ್ನು ಎಳೆದುಕೊಳ್ಳುತ್ತಾರೆ, ಪ್ರಕೃತಿಯನ್ನೂ ಸಂಕಟಕ್ಕೆ ದೂಡುತ್ತಾರೆ.

ಮಳೆಗಾಲ ಆರಂಭವಾದರೆ ನಮ್ಮಲ್ಲಿನ ಅತಿಶಾಖದ ಅಲೆಗಳೂ ಹಿಮಾಲಯದ ಕಾಳ್ಗಿಚ್ಚಿನ ಪ್ರಕೋಪಗಳೂ ತಣ್ಣಗಾಗುತ್ತವೆ ನಿಜ. ಆದರೆ ಅದರ ಹಿಂದೆಯೇ ಮಹಾಪೂರ, ಜಲಪ್ರವಾಹ, ಭೂಕುಸಿತದ ಹೊಸ ಸರಣಿ ಆರಂಭವಾಗುವುದು ನಿಶ್ಚಿತ. ಅರಬ್ ದೇಶಗಳು, ಆಫ್ರಿಕಾದ ಕೀನ್ಯಾ, ದಕ್ಷಿಣ ಅಮೆರಿಕದ ಬ್ರೆಜಿಲ್‌ನಿಂದ ಪ್ರಳಯಾಂತಕ ಅತಿವೃಷ್ಟಿಯ ವರದಿಗಳು ಬರತೊಡಗಿವೆ. ಈ ವಿಶ್ವವ್ಯಾಪಿ ಚಕ್ರೀಯ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಶ್ನೆ ಹೇಗೂ ಇರಲಿ, ಬಂದೇ ಬರಲಿರುವ ಈ ಸಂಕಟಗಳಿಂದ ಬಚಾವಾಗಲು ರಾಷ್ಟ್ರ ಮಟ್ಟದಲ್ಲಿ ಯಾವ ಯಾವ ರಾಜಕೀಯ ಪಕ್ಷಗಳು ಏನೆಲ್ಲ ಕ್ರಮಗಳನ್ನು ಯೋಜಿಸಿವೆ ಎಂಬುದನ್ನು ಪ್ರಜೆಗಳಿಗೆ ತಿಳಿಸುವ ಯತ್ನ ನಡೆಯಬೇಕಿತ್ತು. ಆದರೆ ತಾಪಮಾನ ಏರಿಕೆಯ ಆತಂಕ ಮತ್ತು ಆರ್ಥಿಕ ಆಘಾತ ಈಗಲೂ ಚುನಾವಣೆಯ ವಿಷಯಗಳೇ ಆಗಿಲ್ಲ. ಲೋಕಸಭೆಗೆ ಹೊರಡಲು ಸಜ್ಜಾದ ಯಾವ ಅಭ್ಯರ್ಥಿಯೂ ಯಾವ ವೇದಿಕೆಯಲ್ಲೂ ಅದರ ಬಗ್ಗೆ ಹೇಳಿದಂತಿಲ್ಲ. ಮತಯಾಚನೆಗಾಗಿ ಸುಂಟರಗಾಳಿಯಂತೆ ಸುತ್ತುತ್ತ, ವಿವಾದಗಳ ದೂಳೆಬ್ಬಿಸುತ್ತ, ಮಾತಿನ ಮಹಾಧಾರೆಯನ್ನೇ ಹರಿಸುವ ಜನನಾಯಕರಿಂದ ಎಲ್ಲೆಲ್ಲೂ ಬೆಂಕಿಯುಗುಳುವ ಭಾಷಣಗಳು ಕೇಳಿಬರುತ್ತಿವೆಯೇ ವಿನಾ ನಿಸರ್ಗ ರಕ್ಷಣೆ, ಜನಸಾಮಾನ್ಯರ ಬದುಕು ಮತ್ತು ಆಸ್ತಿಪಾಸ್ತಿ ಭದ್ರತೆಯ ವಿಷಯಗಳು ಕತ್ತಲಲ್ಲೇ ಉಳಿದಂತಾಗಿವೆ.

ದಿನದ ಟ್ವೀಟ್

ಅವಕಾಶ ಕಳೆದುಕೊಳ್ಳದಿರಿ



ನನ್ನ ಕನಸುಗಳ ಬೆನ್ನೇರಿ ಹೋಗಲು ಪ್ರಜಾಪ್ರಭುತ್ವ ನನಗೆ ಅಧಿಕಾರ ಕೊಟ್ಟಿದೆ. ಅಂಚೆ ಮತಪತ್ರದಿಂದ ಮತ ಚಲಾಯಿಸುವ ಮೂಲಕ ಈ ಹಕ್ಕನ್ನು ನಾನಿಂದು ಗೌರವಿಸಿದೆ. ಪ್ರತಿ ಮತವೂ ನಮ್ಮ ಭವಿಷ್ಯವನ್ನು ರೂಪಿಸುತ್ತದೆ. ಅವಕಾಶ ಕಳೆದುಕೊಳ್ಳದಿರಿ, ನಿಮ್ಮ ದನಿ ಕೇಳುವಂತೆ ಮಾಡಿ! #Vote #GeneralElection2024 #DemocracyInAction

ಕಿಶೋರ್ ಕೊಮ್ಮಿ, ಹೈದರಾಬಾದ್

ಕಿಡಿನುಡಿ



ಬೀದಿನಾಯಿ ಹಾವಳಿ, ಸಾಕುಪ್ರಾಣಿಗಳನ್ನು ಬೇಜವಾಬ್ದಾರಿಯಿಂದ ನಿರ್ವಹಿಸುವ ಸಮಸ್ಯೆಯನ್ನು ಪರಿಹರಿಸಲು ಒಂದು ದೇಶವಾಗಿ ನಾವು ಒಗ್ಗೂಡದಿದ್ದರೆ, ನಮ್ಮ ಮಕ್ಕಳನ್ನು ನಾವು ಗಂಡಾಂತರಕ್ಕೆ ನೂಕಿದಂತೆಯೇ ಸರಿ. ಈ ಸಮಸ್ಯೆಯು ಅಮೆರಿಕದ ಬಂದೂಕು ನಿಯಂತ್ರಣಕ್ಕೆ ಸಂಬಂಧಿಸಿದ ಸಮಸ್ಯೆಯಂತೆಯೇ ಆಗುತ್ತಿದೆ. ಸಣ್ಣ ಮಕ್ಕಳು ಇದಕ್ಕೆ ಹೆಚ್ಚು ಗುರಿಯಾಗುತ್ತಿದ್ದಾರೆ ಮತ್ತು ನಮ್ಮ ನಿರ್ಲಕ್ಷ್ಯಕ್ಕೆ ಅವರು ಬೆಲೆ ತೆರುತ್ತಾರೆ.

ಲಕ್ಷ್ಮಿ ರಾಮಚಂದ್ರನ್, ಪ್ರಧಾನ ಕಾರ್ಯದರ್ಶಿ, ಕಾಂಗ್ರೆಸ್‌ನ ತಮಿಳುನಾಡು ಘಟಕ

25 ವರ್ಷಗಳ ಹಿಂದೆ

ಶುಕ್ರವಾರ, 7-5-1999

● **ಅಪಪ್ರಚಾರ: ಸೋನಿಯಾ ಖಂಡನೆ**

ನವದೆಹಲಿ, ಮೇ 6 (ಪಿಟಿಐ)– ತಮ್ಮ ವಿದೇಶಿ ಮೂಲದ ವಿಷಯದಲ್ಲಿ 'ಕೀಳುಮಟ್ಟದ ಪ್ರಚಾರ' ನಡೆಸಲಾಗುತ್ತಿದೆ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಇಂದು ಭಾರತೀಯ ಜನತಾ ಪಕ್ಷವನ್ನು ತರಾಟೆಗೆ ತೆಗೆದುಕೊಂಡು, ಇಂಥ ಪ್ರಚಾರ ಯಶಸ್ವಿಯಾಗದು ಎಂಬ ವಿಶ್ವಾಸ ವ್ಯಕ್ತಪಡಿಸಿದರು.

'ಬಿಜೆಪಿಯು ಅನುಕಂಪದ ಅಲೆಯನ್ನು ಕೃತಕವಾಗಿ ಉತ್ಪಾದಿಸಲು ಯತ್ನಿಸುತ್ತಿದೆ. ನಮ್ಮ ವಿರುದ್ಧ ಬಲು ಕೀಳುಮಟ್ಟದ ಪ್ರಚಾರವನ್ನು ಪ್ರಾರಂಭಿಸಿದೆ. ಇದು ಅವರ ಭಯ, ಅಭದ್ರತೆಯ ಭಾವನೆಯನ್ನೂ ಬಯಲುಗೊಳಿಸುತ್ತದೆ' ಎಂದು ಅವರು ವಿವಿಧ ರಾಜ್ಯಗಳ ಕಾಂಗ್ರೆಸ್ ಘಟಕಗಳ ಅಧ್ಯಕ್ಷರು, ಶಾಸಕಾಂಗ ಪಕ್ಷದ ನಾಯಕರ ಸಭೆಯಲ್ಲಿ ಹೇಳಿದರು.

● **ಬಾದಾಮಿ: ಭಾರಿ ಗಾಳಿ, ಮಳೆ**

ಬಾದಾಮಿ, ಮೇ 6– ಕಳೆದ ರಾತ್ರಿ ಬೀಸಿದ ಭಾರಿ ಗಾಳಿ ಹಾಗೂ ಸುರಿದ ಮಳೆಯಿಂದಾಗಿ ಓರ್ವ ಅಸುನೀಗಿದ್ದು, ಹಲವಾರು ಮರಗಳು ನೆಲಕ್ಕೆ ಉರುಳಿವೆ.

ಒಂದೇ ದಿನದಲ್ಲಿ ಸುಮಾರು 27 ಮಿ.ಮೀ. ಮಳೆಯಾಗಿದ್ದು, ಅಪಾರ ಮಾವಿನ ಫಸಲು ನೆಲಕಚ್ಚಿದೆ. ಸುಮಾರು ಮೂರು ತಾಸು ರಸ್ತೆಸಂಚಾರ ಸ್ಥಗಿತಗೊಂಡಿತ್ತು.

50 ವರ್ಷಗಳ ಹಿಂದೆ

ಮಂಗಳವಾರ, 7-5-1974

● **ತಾತನ ಗಂಟೇ?**

ಬೆಂಗಳೂರು, ಮೇ 6– ಯಾರ ತಾತನ ಮನೆಯ ಗಂಟು? ನಿಮ್ಮ ಮನೆಯಿಂದ ತಂದಿದ್ದೀರಾ?

–ಸೋಮವಾರ ವಿಧಾನಸಭೆಯಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಗುರುತರ ಭ್ರಷ್ಟಾಚಾರದ ಆಪಾದನೆ ಮಾಡಿದ ವಿರೋಧಿ ನಾಯಕ ಎಚ್.ಡಿ.ದೇವೇಗೌಡ ಭಾವೋದ್ರಿಕ್ತರಾಗಿ ಕೇಳಿದ ಪ್ರಶ್ನೆಗಳಿವು.

ವಿರೋಧಿ ನಾಯಕರು ಮಾಡಿರುವ ಆಪಾದನೆಗಳಿಗೆ ಸೂಕ್ತ ವಿವರಣೆ ನೀಡಿ ಸರ್ಕಾರದ ಹಾಗೂ ಪಕ್ಷದ ಗೌರವವನ್ನು ಉಳಿಸಬೇಕು ಎಂದು ಕಾಂಗ್ರೆಸ್ ಸದಸ್ಯ ಆರ್. ದಯಾನಂದ ಸಾಗರ ಅವರೂ ಕೂಗಿ ಹೇಳಿದುದು ಚರ್ಚೆಯ ತೀವ್ರತೆಯನ್ನು ಹೆಚ್ಚಿಸಿತ್ತು. ಇವರ ಭಾಷಣವು ಬೇರೊಂದು ದೃಷ್ಟಿಯಿಂದ ಅಷ್ಟೇ ಬಿಸಿಯಾಗಿತ್ತು, ಖಾರವಾಗಿತ್ತು.

● **ಜಯದೇವಿ ತಾಯಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ**

ಬೆಂಗಳೂರು, ಮೇ 6– ಮಂಡ್ಯದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಜಯದೇವಿ ತಾಯಿ ಲಿಗಾಡೆ ಅವರನ್ನು ಆಯ್ಕೆ ಮಾಡಲಾಗಿದೆಯೆಂದು ತಿಳಿದುಬಂದಿದೆ.

48ನೇ ಸಾಹಿತ್ಯ ಸಮ್ಮೇಳನವಾದ ಅದು, ಮೇ 31ರಿಂದ ಜೂನ್ ಎರಡರವರೆಗೆ ನಡೆಯಲಿದೆ.

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಮಹಿಳೆಯೊಬ್ಬರು ಆಯ್ಕೆ ಆಗುತ್ತಿರುವುದು ಇದೇ ಪ್ರಥಮ.

ಪೆನ್‌ಡ್ರೈವ್ ಕಂಡಕಂಡವರಿಗೆ ತಲುಪಲು ಕಾರಣರಾದವರಲ್ಲಿ ಸಂವೇದನಾಶೀಲತೆಯ ಕೊರತೆ ಎದ್ದು ಕಾಣುತ್ತದೆ

ಸಂತ್ರಸ್ತೆಯರ ಸ್ಥಿತಿ ಮತ್ತು ವಿಕೃತ ಮನಃಸ್ಥಿತಿ



ವಿಶ್ಲೇಷಣೆ

ಸಿ.ಎಚ್. ಹನುಮಂತರಾಯ

ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಲೈಂಗಿಕ ದೃಶ್ಯಗಳನ್ನುಳ್ಳ ವಿಡಿಯೊ ಪ್ರಕರಣವು ರಾಜಕೀಯ ಹಾಗೂ ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ. ನಾಡಿನ ಜನ ಬೆಚ್ಚಿಬೀಳುವಂತೆ ಮಾಡಿದೆ. ಅಂತೆಯೇ ಕಾನೂನಾತ್ಮಕವಾಗಿ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಇಂತಹ ವಿಚಾರಗಳು ಸಾರ್ವಜನಿಕರಲ್ಲಿ ಆಕ್ರೋಶ ಉಕ್ಕಿಸುವುದು ಸಹಜ. ಆದರೆ, ಅದರಲ್ಲಿ ಮಹಿಳೆಯರ ಘನತೆ ಹಾಗೂ ಖಾಸಗಿತನದ ಹಕ್ಕು ಕೊಚ್ಚಿಹೋಗಬಾರದಲ್ಲವೇ?

ಈ ಪ್ರಕರಣದಲ್ಲಿ ಕೆಲವರು ನಡೆದುಕೊಂಡಿರುವ ಹಾಗೂ ನಡೆದುಕೊಳ್ಳುತ್ತಿರುವ ರೀತಿ, ಈ ನೆಲದ ಕಾನೂನು ಬರೀ ಹೊಗೆಯ ನೆರಳಿನ ರೀತಿಯಲ್ಲಿ ಭಾಸವಾಗುವಂತೆ ಮಾಡಿರುವುದು ಕಣ್ಣಿಗೆ ರಾಚುತ್ತಿದೆ. ಸರ್ಕಾರವು ಪ್ರಕರಣದ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವಹಿಸಿರುವುದು ಸಕಾಲಿಕ ನಿರ್ಧಾರ. ವಿಸ್ತೃತ ತನಿಖೆ ಆಗಿ ಸತ್ಯಾಂಶ ಹೊರಬೀಳುವವರೆಗೂ ಸಂಯಮ ಕಾಯ್ದುಕೊಳ್ಳಬೇಕಾದುದು ಸಾಮಾಜಿಕವಾಗಿ ಪ್ರತಿಯೊಬ್ಬರ ಕರ್ತವ್ಯ. ನಮ್ಮ ಸಂವಿಧಾನದ 21ನೇ ವಿಧಿಯು ಜೀವಿಸುವ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ರಕ್ಷಣೆಯನ್ನು ಖಾತರಿಪಡಿಸುತ್ತದೆ. ಅದರ ಅನ್ವಯ, ಐಪಿಸಿಯ ಸೆಕ್ಷನ್ 228ಎ ಅನ್ನು 1983ರಲ್ಲಿ ಅಳವಡಿಸಿಕೊಳ್ಳಲಾಯಿತು. ಈ ಸೆಕ್ಷನ್ ಪ್ರಕಾರ, ಒಬ್ಬ ಮಹಿಳೆಯ ವಿರುದ್ಧ ಗುಪ್ತವಾಗಿ ಅಪರಾಧ ಎಸಗುವವನು ಅಥವಾ ಆ ಅಪರಾಧಿಯ ಮಾತು ಕೇಳುವವನು, ಸಾಮಾನ್ಯವಾಗಿ ಆ ಕೃತ್ಯವನ್ನು ಯಾರೂ ನೋಡುತ್ತಿಲ್ಲವೆಂದು ಭಾವಿಸಿರುವ ಆ ಮಹಿಳೆಯನ್ನು ಗಮನಿಸುತ್ತಿರುವವನು, ಕೃತ್ಯದ ಛಾಯಾಚಿತ್ರ ತೆಗೆಯುವವನು, ಅದನ್ನು ಪ್ರಸಾರ ಮಾಡುವವನು ಎಲ್ಲರೂ ಅಪರಾಧ ಎಸಗಿದಂತೆಯೇ ಆಗುತ್ತದೆ.

ಅಷ್ಟೇಅಲ್ಲದೆ, ಸಂತ್ರಸ್ತೆಯು ತನ್ನ ಛಾಯಾಚಿತ್ರ ತೆಗೆಯಲು ಅಥವಾ ತನಗೆ ಸಂಬಂಧಿಸಿದ ಯಾವುದೇ ಕೃತ್ಯವನ್ನು ಸೆರೆಹಿಡಿಯಲು ಸಮ್ಮತಿಸಿದ್ದರೂ ಅವುಗಳನ್ನು ಪ್ರಸರಣ ಮಾಡಲು ಒಪ್ಪಿಗೆ ಕೊಟ್ಟಿರದೇ ಇರಬಹುದು. ಆಗ ಅದನ್ನು ಪ್ರಸರಣ ಮಾಡಿದಾಗಲೂ ಅದು ಶಿಕ್ಷಾರ್ಹ ಅಪರಾಧವೇ ಆಗುತ್ತದೆ. ಮಹಿಳೆಯೊಬ್ಬಳು ಗುಪ್ತ ಲೈಂಗಿಕ ಕ್ರಿಯೆಯಲ್ಲಿ ಪ್ರಜ್ಞಾಪೂರ್ವಕ ಸಮ್ಮತಿಯಿಂದ ಭಾಗವಹಿಸಿದ್ದರೂ ಆಕೆಯ ಭಾವಚಿತ್ರವನ್ನಾಗಲೀ ವಿಡಿಯೊವನ್ನಾಗಲೀ ಪ್ರಸರಣ ಮಾಡುವಂತಿಲ್ಲ.


ಈ ಕುರಿತಂತೆ ಆರ್.ರಾಜಗೋಪಾಲ್ ವರ್ಸಸ್ ಸ್ಟೇಟ್ ಆಫ್ ತಮಿಳುನಾಡು ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಪತ್ರಿಕಾ ಸ್ವಾತಂತ್ರ್ಯದ ವಿರುದ್ಧ ಗೋಪ್ಯತೆಯ ಹಕ್ಕುಗಳ ಬಗ್ಗೆ ನಿರ್ಧರಿಸುತ್ತಾ, 'ಸಂವಿಧಾನದ 21ನೇ ವಿಧಿಯು ಈ ದೇಶದ ನಾಗರಿಕರಿಗೆ ಗೋಪ್ಯತೆಯ ಹಕ್ಕನ್ನು ಖಾತರಿಪಡಿಸುತ್ತದೆ. ಜೀವನ ಮತ್ತು ಸ್ವಾತಂತ್ರ್ಯದ ಹಕ್ಕಿನಲ್ಲಿ ಅದು ಅಡಗಿದೆ' ಎಂದು ವಿವರಿಸಿದೆ.

ಒಬ್ಬ ನಾಗರಿಕ ತನ್ನ ಮತ್ತು ತನ್ನ ಕುಟುಂಬದ ಬಗ್ಗೆ, ಮದುವೆ, ಸಂತಾನ, ತಾಯ್ತನ, ಮಗುವನ್ನು ಹಡೆಯುವುದು, ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳ ಜೊತೆಗೆ ಇತರ ವಿಷಯಗಳ ಬಗ್ಗೆ ಗೋಪ್ಯತೆಯನ್ನು ಕಾಯ್ದುಕೊಳ್ಳುವ ಹಕ್ಕನ್ನು ಉಳ್ಳವನಾಗಿರುತ್ತಾನೆ. ಈ ವಿಷಯಗಳ ಬಗ್ಗೆ ಆತನ ಒಪ್ಪಿಗೆಯಿಲ್ಲದೆ ಯಾರೂ ಏನನ್ನೂ ಪ್ರಕಟಿಸಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ಅದು ಆ ವ್ಯಕ್ತಿಯ ಗೋಪ್ಯತೆಯ ಹಕ್ಕಿನ ಉಲ್ಲಂಘನೆಯಾಗುತ್ತದೆ ಹಾಗೂ ಅದರಿಂದ ಉಂಟಾಗುವ ಹಾನಿಗಳಿಗೆ ಅದನ್ನು ಪ್ರಕಟಿಸಿದಾತನೇ ಜವಾಬ್ದಾರನಾಗುತ್ತಾನೆ.

'ಒಂದು ವೇಳೆ ಯಾವುದೇ ಪ್ರಕಟಿತ ವಿಷಯವು ಸಾರ್ವಜನಿಕ ದಾಖಲೆ ಅಥವಾ ನ್ಯಾಯಾಲಯದ ದಾಖಲೆಗಳಿಗೆ ಸಂಬಂಧಪಟ್ಟಿದ್ದರೆ ಗೋಪ್ಯತೆಯ ಉಲ್ಲಂಘನೆಯಾಗುವುದಿಲ್ಲ ಹಾಗೂ ಪತ್ರಿಕೋದ್ಯಮ ಅಥವಾ ಇತರ ಯಾವುದೇ ಮಾಧ್ಯಮದವರು ಗೋಪ್ಯತೆಯ ಹಕ್ಕನ್ನು ಉಲ್ಲಂಘಿಸಿದಂತೆ ಆಗುವುದಿಲ್ಲ' ಎಂಬ ವಿನಾಯಿತಿ ನೀಡಲಾಗಿದೆ. ಆದಾಗ್ಯೂ, ಸಭ್ಯತೆಯ ಹಿತಾಸಕ್ತಿಗೆ ಸಂಬಂಧಿಸಿದಂತೆ 19(2)ನೇ ವಿಧಿಯಲ್ಲಿ ಕೆಲವು ನಿರ್ಬಂಧಗಳನ್ನು ವಿಧಿಸಲಾಗಿದೆ; 'ಲೈಂಗಿಕ ದೌರ್ಜನ್ಯ, ಅಪಹರಣ ಅಥವಾ ಅಂತಹ ಅಪರಾಧಕ್ಕೆ ಗುರಿಯಾದ ಮಹಿಳೆಯ ಹೆಸರನ್ನಾಗಲೀ ಪ್ರಕರಣವನ್ನಾಗಲೀ ಯಾವುದೇ ಮಾಧ್ಯಮದಲ್ಲಿ ಪ್ರಚಾರ ಅಥವಾ ಪ್ರಸಾರ ಮಾಡಬಾರದು' ಎಂಬ ಅಂಶವನ್ನು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಎತ್ತಿ ಹಿಡಿದಿದೆ.

ದುರಂತವೆಂದರೆ, ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿನ ವಿಡಿಯೊಗಳು ಈವರೆಗೂ ಯಾರ ಸುಪರ್ದಿಯಲ್ಲಿ ಇದ್ದವೋ ಆ ವ್ಯಕ್ತಿ ತನ್ನ ಬಳಿ ಇದ್ದ ವಿಡಿಯೊವನ್ನು ಪೊಲೀಸರಿಗೆ ನೀಡದೆ ಬೇರೆಯವರಿಗೆ ದೊರಕುವಂತೆ ಮಾಡಿದ್ದು ಮತ್ತು ಈ ವಿಡಿಯೊ ದೃಶ್ಯಗಳ ಸರಣಿಯನ್ನು ಒಳಗೊಂಡ ಪೆನ್‌ಡ್ರೈವ್‌ಗಳು ರಾಜಾರೋಷವಾಗಿ ಎಲ್ಲೆಂದರಲ್ಲಿ ಜನರ ಕೈಗೆ ಸಿಕ್ಕಿರುವುದರ ಪರಿಣಾಮ ಅನೂಹ್ಯವಾಗಿದೆ. ಈ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಡುವಂತಾಗಿದ್ದು, ಇದು ವಿಡಿಯೊದಲ್ಲಿ ಇರಬಹುದಾದ ಮಹಿಳೆಯರ ಖಾಸಗಿತನಕ್ಕೆ ಧಕ್ಕೆಯುಂಟಾಗಲು ಕಾರಣವಾಗಿದೆ. ಗೋಪ್ಯವಾಗಿ ಇರಬೇಕಾದ ಸಂತ್ರಸ್ತೆಯರ ವಿಷಯವನ್ನು ಹಾದಿಬೀದಿಯಲ್ಲಿ ಹರಾಜು ಹಾಕುತ್ತಾ, ಜೋರಾಗಿ ಚರ್ಚೆ ಮಾಡುತ್ತಾ, ಬಾಯಿಚಪಲ ತೀರಿಸಿಕೊಳ್ಳುತ್ತಿರುವ ಜನರ ವಿಕೃತ ಮನಃಸ್ಥಿತಿಯೂ ಈಗ ಅನಾವರಣಗೊಂಡಿದೆ.

ವಿಡಿಯೊದಲ್ಲಿರುವ ಮಹಿಳೆಯರ ಗುರುತು ಬಹಿರಂಗ ಆಗುವಂತೆ ಮಾಡಿರುವುದು ಮಹಿಳೆಯರ ಘನತೆ ಹಾಗೂ ಖಾಸಗಿತನದ ಹಕ್ಕಿನ ಸ್ಪಷ್ಟ ಉಲ್ಲಂಘನೆಯಾಗಿದೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದರೂ ಸಮಾಜಕ್ಕೆ ಹೆದರಿ ಸುಮ್ಮನಿದ್ದ ಮಹಿಳೆಯರ ಗುರುತು ಈಗ ಬಹಿರಂಗವಾಗಿರುವುದರಿಂದ, ಆ ನೊಂದ ಮಹಿಳೆಯರು ತಮ್ಮ ಯಾತನೆ ಅಥವಾ ಮಾನಸಿಕ ತುಮುಲದ ತೀವ್ರತೆಯನ್ನು ಮತ್ತೊಮ್ಮೆ ಅನುಭವಿಸುವಂತೆ ಆಗಿದೆ. ತಮ್ಮ ತಪ್ಪಿಲ್ಲದಿದ್ದರೂ ಎಲ್ಲರ ಮುಂದೆ ತಲೆತಗ್ಗಿಸಿ ನಿಲ್ಲುವಂತಹ ಪರಿಸ್ಥಿತಿಗೆ ಅವರು ದೂಡಲ್ಪಟ್ಟಿದ್ದಾರೆ. ಇಂತಹ ಪ್ರಕರಣಗಳಲ್ಲಿ ಸಂತ್ರಸ್ತೆ ಮಾತ್ರ ಅವಮಾನಕ್ಕೆ ಗುರಿಯಾಗುವುದಿಲ್ಲ, ಆಕೆಯ ಕುಟುಂಬದವರೂ ಅದೇ ಪ್ರಮಾಣದಲ್ಲಿ ನೋವನ್ನು ಅನುಭವಿಸುತ್ತಾರೆ. ಪುರುಷನೊಬ್ಬನ ಆಕರ್ಷಣೆಗೆ ಒಳಗಾಗುವುದು, ಬಲವಂತ, ಅಧಿಕಾರದ ದರ್ಪ, ಆಮಿಷಕ್ಕೆ ಬಲಿಯಾದ ಸಂತ್ರಸ್ತೆಯಾಗಿ ಅನುಭವಿಸುವ ಯಾತನೆ ಅವಳಿಗೆ, ಅವಳ ಕುಟುಂಬಕ್ಕೆ ಮಾತ್ರ ತಿಳಿದಿರುತ್ತದೆ. ವಿಡಿಯೊ ಸಂಸದನಿಗೆ ಸಂಬಂಧಿಸಿದ್ದು ಎನ್ನಲಾಗಿದ್ದು, ಆತನನ್ನು ಗುರಿಯಾಗಿಸಿಕೊಂಡು ಅದನ್ನು ಹರಿಯಬಿಟ್ಟಿದ್ದರೂ ಅದರಿಂದ ಅಪಾರ ಅವಮಾನ, ತೀವ್ರ ಯಾತನೆ ಅನುಭವಿಸುವವರು ಅದರಲ್ಲಿ ಕಂಡುಬರುವ ಮಹಿಳೆಯರು. ಪೆನ್‌ಡ್ರೈವ್‌ಗಳು ಕಂಡಕಂಡವರಿಗೆ ತಲುಪಲು ಕಾರಣರಾದವರಲ್ಲಿ ಇದರ ಕನಿಷ್ಠ ಅರಿವೂ ಇಲ್ಲವಾಗಿದೆ.



ಇಂತಹ ಪ್ರಕರಣಗಳಲ್ಲಿ, ಮಹಿಳೆಯರು ತಾವು ಎದುರಿಸಿದ ದೌರ್ಜನ್ಯದಿಂದ ಆಘಾತಕ್ಕೆ ಒಳಗಾಗುತ್ತಾರೆ, ಅವರ ಮಾನಸಿಕ ಸ್ಥೈರ್ಯ ಕುಂದುತ್ತದೆ. ಸಮಾಜವನ್ನು ಎದುರಿಸಲಾಗದೆ, ತಮ್ಮನ್ನು ತಾವೇ ಎಲ್ಲಕ್ಕೂ ಹೊಣೆಗಾರರನ್ನಾಗಿ ಮಾಡಿಕೊಂಡು ದುಃಖಿಸುತ್ತಾರೆ. ಲೈಂಗಿಕ ದೌರ್ಜನ್ಯಕ್ಕೆ ಬಲಿಯಾದ ಮಹಿಳೆಯರ ಹೆಸರು, ಚಹರೆ ಅಥವಾ ವಿವರಗಳು ಬಹಿರಂಗಗೊಂಡರೆ, ಇನ್ನಿಲ್ಲದಂತೆ ಕುಗ್ಗಿಹೋಗಿ ಬಲಹೀನರಾಗುತ್ತಾರೆ. ಇದನ್ನು ತಡೆಯುವುದೇ ನಮ್ಮ ಕಾನೂನು ರಚನೆಕಾರರ ಮುಖ್ಯ ಉದ್ದೇಶ ಹಾಗೂ ಎಲ್ಲ ನಾಗರಿಕರ ಜವಾಬ್ದಾರಿ.

ಹಾಲಿ ಪ್ರಕರಣದಲ್ಲಿ ಸಾಮಾಜಿಕ ಹೊಣೆಗಾರಿಕೆಯ ಕಡೆಗೆ ಗಮನಕೊಡದೆ, ವಿಡಿಯೊಗಳಲ್ಲಿರುವ ಮಹಿಳೆಯರು ಹಾಗೂ ಅವರ ಕುಟುಂಬದವರ ಮೇಲೆ ಆಗಬಹುದಾದ ದುಷ್ಪರಿಣಾಮದ ಬಗ್ಗೆ ಆಲೋಚಿಸದೆ ಬೇಜವಾಬ್ದಾರಿತನ ಮೆರೆದಿರುವವರು ಐಪಿಸಿಯ ಸೆಕ್ಷನ್ 354ಸಿ ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66ಇ, 67, 67ಎ ಅಡಿಯಲ್ಲಿ ಶಿಕ್ಷಾರ್ಹರಾಗುತ್ತಾರೆ. ಸಂತ್ರಸ್ತೆಯ ನೋವಿಗೆ ದನಿಯಾಗಬೇಕಿದ್ದ ನಮ್ಮ ಸಮಾಜ ಇಂತಹುದೊಂದು ಪ್ರಕರಣವನ್ನು ಚರ್ಚೆಯ ವಿಷಯವಾಗಿಸಿರುವುದು, ರಾಜಕೀಯ ಪಕ್ಷಗಳು ಇದನ್ನೇ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿರುವುದು, ರಾಜಕಾರಣವೂ ಸಮಾಜದ ಸೃಷ್ಟಿ ಎಂಬ ಮಾತನ್ನು ಧ್ವನಿಸುವಂತಾಗಿದೆ.

ಖಾಸಗಿತನದ ಹಕ್ಕಿಗೆ ಸಂಬಂಧಿಸಿದಂತೆ ಕೆ.ಎಸ್. ಪುಟ್ಟಸ್ವಾಮಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಲ್ಲಿ, 'ಒಬ್ಬ ವ್ಯಕ್ತಿಯ ಮಾನಕ್ಕೆ ಧಕ್ಕೆಯಾಗುವಂತಹ ವಿಷಯಗಳು ಗಾಳಿಗಿಂತ ವೇಗವಾಗಿ ಹರಡುತ್ತವೆ. ಜನರು ಈ ವಿಷಯದ ಬಗ್ಗೆ ಕೆಲವು ದಿನಗಳ ಕಾಲ ಚರ್ಚಿಸಿ, ಮತ್ತೊಂದು ಸುದ್ದಿ ಸಿಕ್ಕಾಗ ಚರ್ಚೆಯನ್ನು ನಿಲ್ಲಿಸಲೂಬಹುದು. ಆದರೆ, ಅಷ್ಟರಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ವಿಡಿಯೊ, ಅದರಲ್ಲಿನ ಸಂತ್ರಸ್ತರಿಗೆ ಆ ಕರಾಳ ದಿನದ ನೆನಪು ಪದೇಪದೇ ಕಾಡುವಂತೆ ಮಾಡುತ್ತದೆ' ಎಂಬ ಅಂಶವನ್ನು ಒತ್ತಿ ಹೇಳಿದೆ.

ಇಷ್ಟೆಲ್ಲಾ ಗಂಭೀರ ಪರಿಣಾಮಗಳನ್ನು ಉಂಟುಮಾಡುವ ಸೂಕ್ಷ್ಮ ವಿಷಯದ ಕುರಿತು ಕಿಂಚಿತ್ತೂ ಯೋಚಿಸದೆ ವಿಡಿಯೊಗಳನ್ನು ತೇಲಿಬಿಟ್ಟಿರುವುದು ಅನಾಗರಿಕ ನಡೆ ಮತ್ತು ಬೇಜವಾಬ್ದಾರಿತನದ ಪರಮಾವಧಿ.

ಲೇಖಕ: ಹಿರಿಯ ವಕೀಲ

ಚುರುಮುರಿ



ಸತ್ಯಮಾರ್ಗ

• ಡಿ.ಎಸ್.ಲಿಂಗರಾಜು

ಸತ್ಯಮ್ಮ, ಸುಳ್ಳವ್ವ ಮಾತಾಡಿಕ್ಯತಿದ್ರು. ಸತ್ಯಾನೇ ಹೇಳಬಕು ಅಂತ ಸತ್ಯವ್ವ ಅಂದ್ರೆ ಸುಳ್ಳೇಳದಿದ್ರೆ ಬದುಕು ನಡೆದದಾ ಅಂತಿದ್ಲು ಸುಳ್ಳವ್ವ.

'ನೋಡೇ ನನ್ನವ್ವ, ಅದೇನೋ ದೌರ್ಜನ್ಯ ಮಾಡ್ಯವರೆ ಅಂತ ತೆನೆಯೋರನ್ನ ಅರೆಸ್ಟ್ ಮಾಡ್ಯವುರಂತೆ. ಯಾರದು ಡೌ-ರ್ಜನ್ಯವೋ ಯಾರು ಇಕಮದ್ದಾಕ್ಯವರೋ ಏನೋ ನಾನು ಕಾಣೆ' ಅಂದಳು ಸತ್ಯಮ್ಮ.

'ಅಕ್ಕೋ ಒಂದು ತಿಳಕಾ, ಪಕ್ಷ ಕಟ್ಟತಾ ಕಟ್ಟತಾ ಸಂಬಂಧಿಗಳು ಅವಕಾಶ ಸಿಕ್ತಾಸಿಕ್ತಾ ದಾಯಾದಿಗಳಾಯ್ತರೆ ಕನೆ' ಅಂತ ಮೂತಿ ತಿವಿದಳು ಸುಳ್ಳವ್ವ.

'ಅಯ್ಯೋ ನನತಾಯಿ, ಕೋವಿಡ್ ಚುಚ್ಚುಮದ್ದು ತಕ್ಕಂಡೋರು ಯಾಕ್ಯಾಕೋ ಸಾಯ್ತಾವ್ರಂತೆ. ಇಕ್ಕಡೆ ವೋಟು ಖರೀದಿ ಮಾಡಕ್ಕೆ ಕಾಸು ಸಾಗಿಸ್ತಲೇ ಅವ್ರೆ. ಯಾವುದು ಸತ್ಯವೋ ಯಾವುದು ಬದ್ದೋ ಒಂದೂ ತಿಳೀತಿಲ್ಲ' ಸತ್ಯಮ್ಮ ಕೊರಗಿದಳು.

'ಅಲ್ಲ ಕವ್ವ, ಪಕ್ಷಗಳು ಚುನಾವಣೆ ಟೇಮಿಗೆ ಅಂತ್ಲೇ ಸುಳ್ಳು-ಜೊಳ್ಳೆಲ್ಲ ಸೇರಿಸಿ ಬೇಕಾದ ಅಳತೆಗೆ ಕತ್ತರಿಸಿಗ್ಯಂದು ತಲೆಗಂಡು ಹಾಕಿ ಮಡಿಕಂದಿರತರೆ, ನಿನಗೆ ತಿಳೀದಾ?' ಸುಳ್ಳವ್ವ ಗುನ್ನಂಪಟ್ಟೆ ತೋರಿಸಿದಳು.

'ಇಡೀ ದೇಸಕ್ಕೆ ಒಂದೇ ಪಕ್ಷ, ಒಂದೇ ಸರ್ಕಾರ, ಒಂದೇ ಎಲೆಕ್ಷನ್ ಇರಬಕು ಅಂತಿರದು ಸತ್ಯವೇನೆ?' ಅಂತ ಯೋಚನೆಗೆ ಬಿದ್ದ ಸತ್ಯಮ್ಮ ಸತ್ಯ-ಸುಳ್ಳಿನ ಮಧ್ಯೆ ಕಳೆದೋದಳು.

'ಯಕ್ಕೋ ನಿನಗೂ ವಯಸ್ಸಾಯ್ತಾ ಬುದ್ಧಿ ವೀಕಾಯ್ತಾ ಅದೆ. ಇವೆಲ್ಲಾ ಸಮೇವೈ ಒಂದು ಮಾತು ಅಷ್ಟೀಯೆ. ರಾಜಕೀಯದವು ವೈಟ್ ಲೈ ಅಂದ್ರೆ ಬಿಳಿಸುಳ್ಳಿನ ಗಮಲದೆಣ್ಣೆ ತಕ್ಕಂದು ಜನದ ತಲೆಗೆ ತಿಕ್ಕಿ ಕಮಂಗಿ ಮಾಡ್ತರೆ ಆಟೇಯ' ಸುಳ್ಳವ್ವ ಸತ್ಯ ನುಡಿದಿದ್ದಳು!

'ಸರಿ ಕಾ ಬುಡು ಸುಳ್ಳವ್ವ, ನಿಂದೇ ಕಾರುಬಾರು ನಡೀತಾ ಅದೆ. ಜನ ಮಳ್ಳಿಲ್ಲ ಬೆಳ್ಳಿಲ್ಲ ಅಂತ ಕೊರಗತಿದ್ರೆ ರಾಜಕೀಯದವು ಕ್ಯಾಮೆ ಬುಟ್ಟು ಸುಳ್ಳಿನ ಓಕಳಿ ಇಟ್ಟಾಡಿಸಿಕ್ಯಂದು ಅಕ್ಸಲ ಆಡ್ತಾವೆ. ನನ್ನ ಕಾಲ ಮುಗೀತು ಕವ್ವಾ, ನಾನು ಹೋಯ್ತಿನಿ' ಅಂದ ಸತ್ಯಮ್ಮ ಕಡೆದು ಹೊಂಟೋದಳು.

ಸಂಗತ

ನಾಗರಿಕತೆಯ ಹುಣ್ಣು: ಬೇಕು ಒಳಗಣ್ಣು

ನಾಳೆಗಾಗಿ ಕೂಡಿಡುವ ಸಾಂಸ್ಕೃತಿಕ ಶಿಥಿಲ ಸ್ಥಿತಿಯು ಶಿಲಾಯುಗದಿಂದ ಆರಂಭವಾಗಿ ಇಂದಿಗೂ ಹಿಮ್ಮುಖ ಚಲನೆಯಲ್ಲೇ ಸಾಗುತ್ತಿರುವುದು ವಿಪರ್ಯಾಸ

• ಡಾ. ಲಕ್ಷ್ಮಣ ವಿ.ಎ.

ಮಾರ್ಗರೆಟ್ ಮೀಡ್ ಅಮೆರಿಕದ ಒಬ್ಬ ಸಾಂಸ್ಕೃತಿಕ ಮಾನವಶಾಸ್ತ್ರಜ್ಞೆ. ಮಾನವಶಾಸ್ತ್ರ ಬೆಳೆದುಬಂದ ಬಗೆಯನ್ನು ತಮ್ಮ ವಿಶಿಷ್ಟ ವಾದಗಳು, ಭಿನ್ನವಾದ ಸಿದ್ಧಾಂತಗಳು, ತೀಕ್ಷ್ಣ ಒಳನೋಟಗಳಿಂದ ಕೂಡಿದ ಭಾಷಣಗಳು ಹಾಗೂ ಬರಹಗಳ ಮೂಲಕ ಪ್ರತಿಪಾದಿಸುತ್ತಾ ಪ್ರಸಿದ್ಧರಾದವರು.


ಒಂದು ದಿನ ತಮ್ಮ ವಿದ್ಯಾರ್ಥಿಯೊಬ್ಬ ಭೂಮಿಯ ಮೇಲೆ 'ಸಾಂಸ್ಕೃತಿಕ ನಾಗರಿಕತೆ' ಯಾವ ಕ್ಷಣದಿಂದ ಶುರುವಾಯಿತು ಎಂಬ ಪ್ರಶ್ನೆಯನ್ನು ಕೇಳುತ್ತಾನೆ. ತುಂಬಾ ಸರಳವಾದ ಈ ಪ್ರಶ್ನೆಗೆ ಉತ್ತರ ಬಹುಶಃ 'ಮೀನು ಬಲೆಯ ಕೊಕ್ಕೆ', 'ಮಣ್ಣಿನ ಪಾತ್ರೆ'ಯಂತಹ ವಸ್ತುಗಳ ಅನ್ವೇಷಣೆಯ ದಿನಗಳಿಂದ ಶುರುವಾಯಿತು ಎಂದಾಗಿದ್ದಿರಬಹುದು ಎಂಬುದು ಆ ವಿದ್ಯಾರ್ಥಿಯ ನಿರೀಕ್ಷೆಯಾಗಿತ್ತೇನೊ. ಆದರೆ ನಾಗರಿಕತೆ ಬೆಳೆದು ಬಂದ ಆ ದಿನಗಳ ಬಗೆಗಿನ ಮೀಡ್ ಅವರ ಒಳನೋಟ ತುಂಬಾ ಆಳವಾಗಿ, ಅಷ್ಟೇ ಮನನೀಯವಾಗಿ ಹಾಗೂ ಬಹಳ ಭಿನ್ನವಾಗಿ ಇತ್ತು.

ಮನುಷ್ಯನ ದೇಹದಲ್ಲಿನ ತೊಡೆಯ ಮೂಳೆಯನ್ನು ವೈದ್ಯಕೀಯ ಭಾಷೆಯಲ್ಲಿ 'ಫೀಮರ್ ಬೋನ್' ಎನ್ನಲಾಗುತ್ತದೆ. ಇದು ಬಹಳ ಮುಖ್ಯವಾದ ಒಂದು ಮೂಳೆ. ಪ್ರಾಣಿ ಜಗತ್ತಿನಲ್ಲಿ, ತೊಡೆಯ ಮೂಳೆ ಮುರಿದರೆ ಆ ಪ್ರಾಣಿಯ ಅವಸಾನವೆಂದೇ ಅರ್ಥ. ಗಾಯಗೊಂಡ ಇಂತಹ ಮನುಷ್ಯಪ್ರಾಣಿ ತನ್ನ ಆಹಾರವನ್ನು ಸಂಪಾದಿಸಲಾರ, ನಡೆಯಲಾರ, ನೆಗೆಯಲಾರ, ಬೇಟೆ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲಾರ. ಇಂತಹ ಬಲವಾದ 'ಫೀಮರ್' ಮೂಳೆಗಾದ ಗಾಯವು ಮಾನವನ ವಿಕಾಸವಾದದ ಒಂದು ಹಂತದಲ್ಲಿ ವಾಸಿಯಾಗಿದೆ ಎಂದಾದರೆ, ಬಹುಕಾಲದವರೆಗೆ ಆ ಮನುಷ್ಯನ ಜೊತೆಗೆ ಯಾರೋ ಇದ್ದು ಅವನನ್ನು ರೋಗಿಯಂತೆ ಆರೈಸಿ, ಲಾಲಿಸಿ, ಪೋಷಿಸಿದ ಆ ಕಾಲವು 'ಸಾಂಸ್ಕೃತಿಕ ನಾಗರಿಕತೆ'ಯ ಮೊದಲ ಕುರುಹು ಎಂಬ ಸೂಕ್ಷ್ಮ ಒಳನೋಟದ ವಾದವನ್ನು ಮಾರ್ಗರೆಟ್ ಮಂಡಿಸುತ್ತಾರೆ.

ಅಕ್ಷರ ಜ್ಞಾನ, ಆಧ್ಯಾತ್ಮಿಕ ಅರಿವು, ಪರಸ್ಪರ ವಿಶ್ವಾಸ, ಅನ್ಯರ ಬಗೆಗೆ ಅನುಕಂಪದಂತಹ ಯಾವ ದೊಡ್ಡ ದೊಡ್ಡ ಪದಪುಂಜಗಳ ಪ್ರಯೋಗಗಳೂ ಚಾಲ್ತಿಯಲ್ಲಿರದ ಆ ಕಾಲಕ್ಕೆ ಮನುಷ್ಯನ ಸಹಜ ಅಂತಃಪ್ರಜ್ಞೆ ಮತ್ತು ತಾಯ್ತನದ ಫಲವಾದ ಶುದ್ಧ ನಾಗರಿಕತೆ ಅದು. ಕಾಡಿನಲ್ಲಿ ಅಲೆದಲೆದು ಬೇಟೆಯಾಡಿ ಗೆಡ್ಡೆ, ಗೆಣಸು, ಮಾಂಸವನ್ನು ಬೇಯಿಸಿ ತಿನ್ನುವಾಗ ಕೂಡ ತೊಡೆಯ ಮೂಳೆ ಮುರಿದ ಮನುಷ್ಯನ ಹಸಿವಿಗೂ ಒಂದು ಪಾಲಿತ್ತು ಎನ್ನಲಾಗುತ್ತದೆ. ಹೀಗಿರುವಾಗ, ನಾಗರಿಕತೆ ಬೆಳೆದುಬಂದ ಮೊದಲ ಹೆಜ್ಜೆ ಗುರುತಾಗಿ ಇದನ್ನು ಪರಿಗಣಿಸಬಹುದು ಎಂಬುದು ಮೀಡ್ ಅವರ ಸ್ಪಷ್ಟವಾದ ಅಭಿಪ್ರಾಯ.

ಆದರೆ ವಿಕಾಸವಾದದ ದಾರಿಯಲ್ಲಿದ್ದ ಇದೇ ಮನುಷ್ಯನಲ್ಲಿ ತನ್ನ ಆಹಾರವನ್ನು ಯಾವಾಗ ನಾಳೆಗೆ ಕೂಡಿಡುವ ಯೋಚನೆ ಹೊಳೆಯಿತೋ ಆಗ ಈ ಕಾಡು ಮತ್ತು ನಾಡಿನ ಸಹಜ ಸಂಪತ್ತು ಕೂಡ ಬಲಶಾಲಿಯ ಆಸ್ತಿಗೆ ಜಮೆಯಾಗುತ್ತಾ ಬಂದಿತು. ಆ ದಿನವೇ ನಾಗರಿಕತೆಯ ಚಕ್ರವು ಉಲ್ಟಾ ತಿರುಗಿ, ವಿಕಾಸವಾದದ ವಿಕಾರ ರೂಪಗಳು ನಾಗರಿಕತೆಯನ್ನು ಅಸ್ವಸ್ಥಗೊಳಿಸುತ್ತಾ ಬಂದವು. ಶಿಲಾಯುಗದಿಂದಲೇ ಶುರುವಾದ ಈ ಸಾಂಸ್ಕೃತಿಕ ಶಿಥಿಲ ಸ್ಥಿತಿ ಇಂದಿಗೂ ಹಿಮ್ಮುಖ ಚಲನೆಯಲ್ಲೇ ಸಾಗಿದೆಯೆಂದರೆ ತಪ್ಪಾಗಲಾರದು.

ಜಗತ್ತಿನ ತತ್ವಜ್ಞಾನಿಗಳು, ಋಷಿಮುನಿಗಳು, ದಾರ್ಶನಿಕರು, ಯೋಗಿಗಳು, ಸಂತರು, ಸಿದ್ಧರು, ಸಮ ಸಮಾಜದ ಆಶಯ ಹೊತ್ತ ಗಣ್ಯಮಾನ್ಯರಿಗೆ ಸಂಪತ್ತಿನ ಕ್ರೋಡೀಕರಣವೆಂಬ ಈ ಅಪಾಯದ ಅರಿವಿತ್ತು. ಇಂತಹ ಭೋಗ ವಿಲಾಸದ ಲೋಲುಪತೆಯೊಂದು ಸಮಾಜದ ನಡುವೆ ದೇಹದ ಹುಣ್ಣಿನಂತೆ ಹಬ್ಬುವ ಅಪಾಯವನ್ನು ಮನಗಂಡಿದ್ದರು. ಹೀಗಾಗಿ, ಧಾರ್ಮಿಕ ನೆಲೆಯಲ್ಲಿ ಜನರಿಗೆ ತಮ್ಮ ಕೈಲಾದ ಅರಿವನ್ನು ಮೂಡಿಸುವ ಯತ್ನವನ್ನು ಜಾರಿಯಲ್ಲಿ ಇಟ್ಟುಕೊಂಡು, ದಾನ ಮತ್ತು ಧರ್ಮವು ಮೋಕ್ಷದ ದಾರಿಗಳೆಂದು ಒಪ್ಪಿಕೊಂಡು, ಮನುಷ್ಯತ್ವವನ್ನು ಮೇಲೆತ್ತುವ ಕಾರ್ಯಸೂಚಿಗೆ ಬಹುತೇಕ ಎಲ್ಲ ಧರ್ಮಗಳೂ ಒತ್ತು ನೀಡುತ್ತಾ ಬಂದಿವೆ.



ಅನುಭವ ಮಂಟಪದಲ್ಲಿ ಒಮ್ಮೆ, ಬಸವಣ್ಣನವರ ಪತ್ನಿ ಗಂಗಾಂಬಿಕೆಯ ಕಿವಿಯಲ್ಲಿದ್ದ ಮುತ್ತಿನೋಲೆಯ ಮೇಲೆ ಲೆಂಕರಸನೆಂಬ ಭಕ್ತನ ಕಣ್ಣು ಬೀಳುತ್ತದೆ. ಆ ಭಕ್ತ ಅವಸರದಲ್ಲಿ ಅವರ ಕಿವಿಗೆ ಕೈ ಹಾಕಿ ಆ ಮುತ್ತಿನೋಲೆಗಳನ್ನು ಕಸಿಯಲು ಮುಂದಾಗುತ್ತಾನೆ. ಸುತ್ತಮುತ್ತಲಿನ ಜನ ಅವನನ್ನು ತಡೆಯುತ್ತಾರೆ. ಆ ಗದ್ದಲವನ್ನು ಕೇಳಿ ಓಡಿಬಂದ ಬಸವಣ್ಣನವರು 'ನನ್ನ ದೇವರಾದ ಸಂಗಮನಾಥನ ಕೈ ನೊಂದುದು, ಕೇಳುವುದಕ್ಕೆ ಮೊದಲೇ ಕೊಡದಿರಬಹುದೇ?' ಎಂದು ಸತಿಯನ್ನೇ ಆಕ್ಷೇಪಿಸುತ್ತಾರೆ ಮತ್ತು ಕೈಯಾರೆ ಆ ಮುತ್ತಿನೋಲೆಗಳನ್ನು ಬಿಚ್ಚಿ ಶಿವಭಕ್ತನಿಗೆ ಅರ್ಪಿಸುತ್ತಾರೆ. ಇಲ್ಲಿ ಶಿವಭಕ್ತನ ಮೇಲೆ ಬಸವಣ್ಣನವರಿಗೆ ಇರುವ ಪ್ರೀತಿಗಿಂತ, ಏನೂ ಇಲ್ಲದ ದೀನನ ಮುಂದೆ ತಮ್ಮ ಪತ್ನಿಯ ಮುತ್ತಿನೋಲೆಯ ಸಿರಿತನದ ಆಡಂಬರದ ಪ್ರದರ್ಶನವು ಎದ್ದುಕಂಡಿದೆ.

ಅಕ್ಷರ ಕಲಿತ ನಾಗರಿಕನಾಗಿ ಅಕ್ರಮ ಸಂಪತ್ತನ್ನು ಕೂಡಿಟ್ಟುಕೊಂಡವನ ಎದೆ ಇಂದು ಕಲ್ಲಾಗಿ, ಕಣ್ಣು ಕುರುಡಾಗಿ, ಮೆದುಳಿಗೆ ತುಕ್ಕು ಹಿಡಿದು ಇಡೀ ಇಂದ್ರಿಯಗಳೇ ಭ್ರಷ್ಟವಾದ ಈ ವಿಷಮಗಳಿಗೆಯಲ್ಲಿ, ತೊಡೆಯ ಮೂಳೆ ಮುರಿದುಕೊಂಡು ತೆವಳುತ್ತಿರುವ ದೀನನಿಗೆ ಈ ಜಗತ್ತು ತನ್ನ ಸಂಪತ್ತಿನ ಒಂದಂಶವನ್ನಾದರೂ ಕೊಡುವುದಕ್ಕೆ ಕಾನೂನೇ ಬೇಕಿಲ್ಲ. ತೀರಾ ಒಳಗಣ್ಣಿನಿಂದ ನೋಡಿದರೆ, ನಾಗರಿಕತೆಯ ಈ ಹುಣ್ಣುಗಳನ್ನು ಜಗತ್ತು ಸುಲಭವಾಗಿ ಗುರುತಿಸಬಹುದು.

ವಾಚಕರ ವಾಣಿ

ಅತಿ ದೊಡ್ಡ ಜಾತ್ರೆಗೆ ಬೇಕು ಸೋಗಿಲ್ಲದವರು

ಪ್ರಜಾಪ್ರಭುತ್ವದಲ್ಲಿ ನಡೆಯುವ ಅತಿ ದೊಡ್ಡ ಜಾತ್ರೆ ಎಂದರೆ ಅದು ಚುನಾವಣೆ. ಪ್ರಜೆಗಳು ಸೌಖ್ಯವಾಗಿ ಇರಬೇಕೆಂದರೆ ಮತ ಚಲಾವಣೆಯ ಹಕ್ಕನ್ನು ಪ್ರತಿಯೊಬ್ಬರೂ ಮನಗಾಣಬೇಕು. ಉತ್ತಮ ನಾಯಕರನ್ನು ಚುನಾಯಿಸುವುದು ನಮ್ಮ ಮುಖ್ಯ ಕರ್ತವ್ಯ. ಸರ್ಕಾರದ ಪರವಾಗಿ ಮೂಲಸೌಕರ್ಯಗಳನ್ನು ಪ್ರತಿ ಪ್ರದೇಶಕ್ಕೆ ಪಾರದರ್ಶಕವಾಗಿ ಮುಟ್ಟಿಸುವ ಯೋಗ್ಯ ಜನಪ್ರತಿನಿಧಿಗಳ ಅವಶ್ಯಕತೆ ಇದೆ. ಈ ದಿಸೆಯಲ್ಲಿ ಮತದಾರರು ತಪ್ಪದೇ ಮತ ಚಲಾವಣೆ ಮಾಡಬೇಕು.

ಆಕಾಶವನ್ನೇ ಧರೆಗಿಳಿಸುವವರಂತೆ ಸೋಗು ಹಾಕಿಕೊಂಡು ಚುನಾವಣೆಯ ಸಂದರ್ಭದಲ್ಲಿ ಮಾತ್ರ ಕಾಣಿಸಿಕೊಳ್ಳುವ ಮುಖಂಡರನ್ನು ದೂರ ಸರಿಸಿ, ಜನನಿಷ್ಠ ನಾಯಕರನ್ನು ಆಯ್ಕೆ ಮಾಡಬೇಕು. ಸ್ವಾತಂತ್ರ್ಯ ದೊರೆತು 75 ವರ್ಷ ಗತಿಸಿದರೂ ಮೂಲ ಸೌಕರ್ಯಕ್ಕಾಗಿ ಅಲೆದಾಡುವ ಪರಿಸ್ಥಿತಿ ಇದೆ. ಇದನ್ನೆಲ್ಲಾ ಸರಿಪಡಿಸುವಂತಹ ದೂರದೃಷ್ಟಿಯುಳ್ಳವರು ನಮಗೆ ಬೇಕಾಗಿದ್ದಾರೆ. ಹೀಗಾಗಿ, ಯಾವುದೇ ಆಸೆ- ಆಮಿಷಕ್ಕೆ ಮಾರುಹೋಗದೆ ಎಚ್ಚರವಹಿಸಿ ಜನಸೇವಕರನ್ನು ಆರಿಸೋಣ.

ಮಹಾಂತೇಶ ರಾಜಗೋಳಿ, ಬೈಲಹೊಂಗಲ, ಬೆಳಗಾವಿ

ಅನಧಿಕೃತ ಶಾಲೆ: ಪಟ್ಟಿ ಹೊರಬೀಳಲಿ

ರಾಜ್ಯದಲ್ಲಿ 2024- 25ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭವಾಗಿ, ಖಾಸಗಿ ಶಾಲೆಗಳಲ್ಲಿ ಪ್ರವೇಶ ಪ್ರಕ್ರಿಯೆ ಬಿರುಸು ಪಡೆದಿದೆ. ಆದರೆ ಅನಧಿಕೃತ ಶಾಲೆಗಳ ಬಗೆಗಿನ ಮಾಹಿತಿಯ ಕೊರತೆಯಿಂದಾಗಿ ಪೋಷಕರು ತಮ್ಮ ಮಕ್ಕಳನ್ನು ಅಂತಹ ಶಾಲೆಗಳಿಗೆ ಕಳುಹಿಸುವ ಸಾಧ್ಯತೆ ಇದೆ. ಆದಕಾರಣ, ಸರ್ಕಾರ ಆದಷ್ಟು ಬೇಗ ಅನಧಿಕೃತ ಶಾಲೆಗಳ ಪಟ್ಟಿಯನ್ನು ಪ್ರಕಟಿಸಬೇಕು. ಅನಧಿಕೃತ ಶಾಲೆಗಳ ಹಾವಳಿಗೆ ಕಡಿವಾಣ ಹಾಕಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕಿದೆ.

ಕೆಲವು ಶಾಲೆಗಳು ಅನುಮತಿ ಇಲ್ಲದ ಮಾಧ್ಯಮದಲ್ಲಿ ಬೋಧನೆ ಮಾಡುತ್ತಿರುವುದು, ನೋಂದಣಿ ಇಲ್ಲದೇ ತರಗತಿಗಳನ್ನು ಉನ್ನತೀಕರಿಸುವುದು ಹಾಗೂ ಒಪ್ಪಿಗೆ ಪಡೆಯದೇ ಹೆಚ್ಚುವರಿ ವಿಭಾಗಗಳನ್ನು ಹೊಂದಿರುವುದು ಸೇರಿದಂತೆ ವಿವಿಧ ರೀತಿಯಲ್ಲಿ ನಿಯಮ ಉಲ್ಲಂಘನೆ ಮಾಡುತ್ತಿವೆ. ಇಂತಹ ಶಾಲೆಗಳ ಕುರಿತು ಪಾಲಕರಿಗೆ ಅಗತ್ಯ ಮಾಹಿತಿ ಇರಲೇಬೇಕಿದೆ. ತಮ್ಮ ಮಕ್ಕಳಿಗೆ ಪ್ರವೇಶ ಪಡೆಯಬಯಸುವ ಪೋಷಕರ ಅನುಕೂಲಕ್ಕಾಗಿ ಶಾಲೆಯ ಸ್ಥಿತಿಗತಿಯನ್ನು ತಿಳಿಸುವ ಸೂಚನೆಯನ್ನು ಪ್ರವೇಶದ್ವಾರದಲ್ಲಿ ಪ್ರದರ್ಶಿಸುವುದನ್ನು ಎಲ್ಲಾ ಖಾಸಗಿ ಶಾಲೆಗಳಲ್ಲಿ ಕಡ್ಡಾಯಗೊಳಿಸಬೇಕು. ಇದು ಪೋಷಕರನ್ನು ಎಚ್ಚರಗೊಳಿಸುವುದಲ್ಲದೆ ಅವರ ಹಣ ಮತ್ತು ಸಮಯವನ್ನು ಉಳಿಸುತ್ತದೆ. ಅಲ್ಲದೆ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಒಂದೆರಡು ತಿಂಗಳ ಮೊದಲೇ ಅನಧಿಕೃತ ಶಾಲೆಗಳ ಬಗ್ಗೆ ಮಾಹಿತಿ ನೀಡಬೇಕಾದುದು ಶಿಕ್ಷಣ ಇಲಾಖೆಯ ಜವಾಬ್ದಾರಿ. ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ ಅನಧಿಕೃತ ಶಾಲೆಗಳಿಗೆ ಕಡಿವಾಣ ಹಾಕಲು ಸರ್ಕಾರವು ಕಠಿಣ ನಿಯಮಗಳನ್ನು ಜಾರಿಗೆ ತರುವುದು ಅಗತ್ಯ.

ಪುಟ್ಟರಾಜು, ಮಂಡ್ಯ

ಹೆದ್ದಾರಿ: ಇರಿಸುಮುರಿಸಿಗೆ ರಹದಾರಿ?

ತುಮಕೂರಿನಿಂದ ಶಿರಾಕ್ಕೆ ಹೋಗಲು ನಾನು ಇತ್ತೀಚೆಗೆ ರಾಜ್ಯ ರಸ್ತೆ ಸಾರಿಗೆ ನಿಗಮವೊಂದರ ಬಸ್ಸನ್ನು ಹತ್ತಿದೆ. ಬಸ್ಸು ಹೆದ್ದಾರಿಯಲ್ಲಿ ಸುಮಾರು ಇಪ್ಪತ್ತು ಕಿಲೊಮೀಟರ್ ದೂರ ಕ್ರಮಿಸಿತ್ತು. ಆಗ ಸುಮಾರು 70 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರು ಬಸ್ಸನ್ನು ನಿಲ್ಲಿಸುವಂತೆ ಬೇಡಿಕೊಳ್ಳುತ್ತಿದ್ದರು. ಇದನ್ನು ಗಮನಿಸಿದ ಕೆಲವರು ಚಾಲಕನಿಗೆ ನಿಲ್ಲಿಸುವಂತೆ ಹೇಳಿದರು. ಬಸ್ ನಿಂತಾಗ ಆ ವ್ಯಕ್ತಿ ಶೌಚಕ್ಕೆ ಹೋಗಬಯಸಿದ್ದುದು ಎಲ್ಲರಿಗೂ ತಿಳಿಯಿತು. ಆದರೆ ಬಸ್ ನಿಂತ ಜಾಗ ಸಂಪೂರ್ಣ ಬರಡು ಭೂಮಿಯಾಗಿದ್ದು ಗಿಡ ಮರಗಳಿಲ್ಲ, ಮಧ್ಯಾಹ್ನದ ಬಿಸಿಲು, ನೀರಿನ ಸಮಸ್ಯೆ ಜೊತೆಗೆ ಬಸ್ಸಿನಲ್ಲಿ ಇದ್ದವರಿಗೆಲ್ಲ ಇರಿಸುಮುರಿಸು ಉಂಟಾಯಿತು. ಜನಸಾಮಾನ್ಯರಿಗೆ ಆಗುತ್ತಿರುವ ಇಂತಹ ತೊಂದರೆಯನ್ನು ಅರಿತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಪ್ರತಿ 10 ಕಿಲೊಮೀಟರಿಗೆ ಒಂದೊಂದು ಶೌಚಾಲಯ ನಿರ್ಮಾಣ ಮಾಡಬೇಕು.

ಸಣ್ಣಮಾರಪ್ಪ, ಚಂಗಾವರ, ಶಿರಾ

ಅಗಾಧ ನೋವಿನ ಉಪಶಮನ

'ಮರಣ: ಏಕಿಷ್ಟು ವೈಭವೀಕರಣ?' ಎಂಬ ಯೋಗಾನಂದ ಅವರ ಲೇಖನ (ಸಂಗತ, ಮಾರ್ಚ್ 29) ಬದುಕಿನ ಸ್ವಾಭಾವಿಕ ಕ್ರಿಯೆಯಾದ ಸಾವಿನ ಕುರಿತಾದ ಚಿಂತನಾರ್ಹ ಬರಹವಾಗಿದೆ. ನಮ್ಮವರನ್ನು ಕಳೆದುಕೊಂಡಾಗ ಅನುಭವಿಸುವ ಅಗಾಧವಾದ ನೋವನ್ನು ಉಪಶಮನ ಮಾಡಿಕೊಳ್ಳುವುದು ಹೇಗೆ ಎಂಬ ವಿವರಣಾತ್ಮಕ ಅಂಶಗಳು, ಗತಿಸಿದವರ ಕುರಿತು ಅತಿಯಾಗಿ ದುಃಖಪಡುವ ಬದಲು ಅವರ ಒಳ್ಳೆಯ ಗುಣಗಳನ್ನು ನಮ್ಮ ಬದುಕಿಗೆ ತಂದುಕೊಳ್ಳಬೇಕೆಂಬ ಸದಾಶಯವನ್ನು ಸೂಚಿಸುತ್ತವೆ. ದುಃಖಿತ ಮನಸ್ಸನ್ನು ಸಾಂತ್ವನಗೊಳಿಸುವ ವಿವರಣಾತ್ಮಕ ಅಂಶಗಳೊಂದಿಗೆ ಮನಮುಟ್ಟುವಂತಿವೆ.

ಒಂದು ವರ್ಷದ ಹಿಂದೆ ನಡೆದ ನನ್ನ ತಾಯಿಯ ಅನಿರೀಕ್ಷಿತ ಸಾವಿನ ನೋವಿನಿಂದ ಹೊರಬರಲಾರದೆ ಇಂದಿಗೂ ನಾನು ದಿನವೂ ಕಣ್ಣೀರಿಡುತ್ತಿದ್ದೇನೆ. ಈ ಲೇಖನ ಓದಿದ ಮೇಲೆ ನನ್ನ ತಾಯಿಯ ಸಾವನ್ನು ಅರಗಿಸಿಕೊಳ್ಳಲು ನನ್ನ ಮನಸ್ಸನ್ನು ಅಣಿಗೊಳಿಸುವ ಪ್ರಯತ್ನ ಮಾಡಲೇಬೇಕೆನಿಸಿತು.

ಕೆ.ಎಂ.ರುಕ್ಮಿಣಿ, ಬೆಂಗಳೂರು

ಪರೀಕ್ಷಾ ಕೇಂದ್ರ: ಪೋಷಕರಿಗೂ ಅನುಕೂಲವಿರಲಿ

ನನ್ನ ಮನೆಯ ಸಮೀಪವಿರುವ ಒಂದು ಶಾಲೆಯಲ್ಲಿ ಆಗಾಗ್ಗೆ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯುತ್ತವೆ. ಭಾನುವಾರದಂದು ಕೂಡ 'ನೀಟ್' ಆಯೋಜಿಸಲಾಗಿತ್ತು. ಆದರೆ, ಶಾಲೆಯಲ್ಲಿ ಪೋಷಕರು ವಿಶ್ರಾಂತಿ ಪಡೆಯಲು ಅನುಕೂಲ ಇರದ ಕಾರಣಕ್ಕೆ, ಶಾಲೆಯ ಪಕ್ಕದಲ್ಲಿಯೇ ಇದ್ದ ಆದರೆ ಮುಚ್ಚಿದ್ದ ಬಿಬಿಎಂಪಿ ಉದ್ಯಾನದ ಸುತ್ತಲೂ ಬಿಸಿಲ ಧಗೆಯಲ್ಲಿ ಪೋಷಕರು ಕುಳಿತಿದ್ದ ದೃಶ್ಯ ಅಯ್ಯೋ ಪಾಪ ಎನಿಸುವಂತೆ ಇತ್ತು. ಪೋಷಕರು ಆಹಾರ ಪದಾರ್ಥಗಳನ್ನು ತರುವುದರಿಂದ ಪ್ಲಾಸ್ಟಿಕ್‌ನಂತಹ ತ್ಯಾಜ್ಯಗಳ ಶೇಖರಣೆಯಾಗುತ್ತದೆ, ಅದನ್ನು ಸಂಗ್ರಹಿಸುವುದು ಕಷ್ಟದ ಕೆಲಸ ಎನ್ನುವ ಬಿಬಿಎಂಪಿ ಸಿಬ್ಬಂದಿಯ ಕಾರಣ ನ್ಯಾಯಯುತವಾದರೂ ಸಮಸ್ಯೆಯನ್ನು ಅರಿತು ಪರಿಹಾರಗಳನ್ನು ಕಂಡುಕೊಳ್ಳಬೇಕಲ್ಲವೇ?

ಕೊನೆಗೆ, ಸ್ಥಳೀಯನಾದ ನಾನು ಉದ್ಯಾನದ ಸಿಬ್ಬಂದಿಯ ಮನವೊಲಿಸಿದ ಬಳಿಕ ಪೋಷಕರನ್ನು ಒಳಗೆ ಬಿಡಲಾಯಿತು. ಆಗ ಬಿರು ಬೇಸಿಗೆಯಲ್ಲಿ ನಿಂತು ಸಾಕಾಗಿದ್ದವರು ನೆರಳಿನಲ್ಲಿ ನಿಟ್ಟುಸಿರುಬಿಟ್ಟರು. ಆದ್ದರಿಂದ, ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡುವಾಗ ಪರೀಕ್ಷಾ ಆಯೋಜಕರು ಪೋಷಕರ ಅನುಕೂಲಗಳನ್ನೂ ಗಮನದಲ್ಲಿ ಇರಿಸಿಕೊಳ್ಳುವಂತೆ ಆಗಲಿ.

ಜಿ.ಬೈರೇಗೌಡ, ಬೆಂಗಳೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

‘ಅತಿ ಅಪಾಯಕಾರಿ ಸ್ಥಿತಿಯಲ್ಲಿ ಭಾರತದ ಮಾಧ್ಯಮ ಸ್ವಾತಂತ್ರ್ಯ’




ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ಸಂಸ್ಥೆಯು ಪ್ರಕಟಿಸಿರುವ 2024ನೇ ಸಾಲಿನ ‘ಮಾಧ್ಯಮ ಸ್ವಾತಂತ್ರ್ಯ ಸೂಚ್ಯಂಕ’ದಲ್ಲಿ ಭಾರತವು 159ನೇ ರ‍್ಯಾಂಕ್‌ನಲ್ಲಿದೆ. ಈಚಿನ ವರ್ಷಗಳಲ್ಲಿ ಭಾರತದ ಸ್ಥಾನವು ಕುಸಿಯುತ್ತಲೇ ಸಾಗಿತ್ತು. 2023ರಲ್ಲಿ ಭಾರತವು ಈವರೆಗಿನ ಅತ್ಯಂತ ಕನಿಷ್ಠ–161ನೇ ರ‍್ಯಾಂಕ್‌ನಲ್ಲಿತ್ತು. 2024ರಲ್ಲಿ ಈ ಪರಿಸ್ಥಿತಿ ತುಸು ಸುಧಾರಿಸಿದ್ದು, 159ನೇ ರ‍್ಯಾಂಕ್‌ಗೆ ಏರಿದೆ. ಆದರೆ ಮಾಧ್ಯಮ ಸ್ವಾತಂತ್ರ್ಯದ ವಿಚಾರದಲ್ಲಿ ಭಾರತವು ಅತ್ಯಂತ ಅಪಾಯಕಾರಿ ಸ್ಥಿತಿಯಲ್ಲಿಯೇ ಇದೆ ಎನ್ನುತ್ತದೆ ‘ಜಾಗತಿಕ ಮಾಧ್ಯಮ ಸ್ವಾತಂತ್ರ್ಯ ಸೂಚ್ಯಂಕ’ ವರದಿ. ಈ ವಿಚಾರದಲ್ಲಿ ಭಾರತದ ಸ್ಥಾನವು ವರ್ಷಾನುವರ್ಷ ಕುಸಿಯುತ್ತಲೇ ಇರಲು ಕಾರಣವೇನು ಎಂಬುದನ್ನೂ ವರದಿಯಲ್ಲಿ ವಿಶ್ಲೇಷಿಸಲಾಗಿದೆ

ರ‍್ಯಾಂಕ್‌ನಲ್ಲಿ ಮೇಲೇಳದ ಭಾರತ



ಪ್ರಜಾವಾಣಿ ಗ್ರಾಫಿಕ್ಸ್ ಆಧಾರ: ‘ಜಾಗತಿಕ ಮಾಧ್ಯಮ ಸ್ವಾತಂತ್ರ್ಯ ಸೂಚ್ಯಂಕ’ ವರದಿ

ಹಲವು ದೇಶಗಳಲ್ಲಿ ನಿಯಂತ್ರಿತ ಮಾಧ್ಯಮ



ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕ ಪರಿಶೀಲನೆಗೆ ಒಳಪಡಿಸಿದ 180 ದೇಶಗಳ ಪೈಕಿ 135 ದೇಶಗಳಲ್ಲಿ ಮಾಧ್ಯಮಗಳನ್ನು ಸರ್ಕಾರಗಳು ಇಲ್ಲವೇ ಉದ್ಯಮ ಸಂಸ್ಥೆಗಳು ನಿಯಂತ್ರಿಸುತ್ತಿವೆ ಎಂದು ಈ ಸೂಚ್ಯಂಕ ವರದಿಯಲ್ಲಿ ವಿವರಿಸಲಾಗಿದೆ. ಇವುಗಳಲ್ಲಿ 36 ದೇಶಗಳಲ್ಲಿ ಪತ್ರಿಕಾ ಸ್ವಾತಂತ್ರ್ಯದ ಸ್ಥಿತಿ ಅಪಾಯಕಾರಿ ಮಟ್ಟದಲ್ಲಿದೆ ಮತ್ತು ಭಾರತವೂ ಅಂತಹ ದೇಶಗಳಲ್ಲಿ ಒಂದು. ನೆರೆಯ ಪಾಕಿಸ್ತಾನವೂ ಅದೇ ವರ್ಗದಲ್ಲಿರುವ ದೇಶವಾದರೂ, ಭಾರತಕ್ಕಿಂತ ಅಲ್ಲಿನ ಸ್ಥಿತಿ ತುಸು ಉತ್ತಮ ಎಂದು ವರದಿಯ ದತ್ತಾಂಶಗಳು ಹೇಳುತ್ತವೆ

ಜಾಹೀರಾತಿನ ಮೂಗುದಾರ

‘ಭಾರತೀಯ ಮಾಧ್ಯಮಗಳ ಆದಾಯದ ಪ್ರಧಾನ ಮೂಲ ಜಾಹೀರಾತು. ಇವುಗಳಲ್ಲಿ ಸರ್ಕಾರಿ ಜಾಹೀರಾತುಗಳ ಪ್ರಮಾಣವೇ ಅಧಿಕ. ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಲ್ಲಂತೂ ಇಂಥ ಜಾಹೀರಾತುಗಳಿಗಾಗಿಯೇ ಜನರ ತೆರಿಗೆ ಹಣದಲ್ಲಿ ಕೋಟ್ಯಂತರ ರೂಗಳನ್ನು ವಿನಿಯೋಗಿಸಲಾಗುತ್ತಿದೆ. ಸಣ್ಣ ಪತ್ರಿಕೆಗಳಂತೂ ಹೆಚ್ಚಿನ ಆದಾಯವನ್ನು ಸರ್ಕಾರಿ ಜಾಹೀರಾತುಗಳಿಂದಲೇ ಪಡೆಯುತ್ತವೆ. ಆದರೆ ಸರ್ಕಾರವು ಈ ಜಾಹೀರಾತುಗಳ ಮೂಲಕವೇ ಮಾಧ್ಯಮಗಳನ್ನು ನಿಯಂತ್ರಿಸುತ್ತಿದೆ’ ಎಂದು ವರದಿಯಲ್ಲಿ ವಿವರಿಸಲಾಗಿದೆ.

‘ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮಗೆ ಸಂಬಂಧಿಸಿದ ಸುದ್ದಿಗಳ ಮೇಲೆ ನಿಯಂತ್ರಣ ಹೊಂದಿವೆ. ತಮಗೆ ಅನುಕೂಲಕರ ವಲ್ಲದ ಸುದ್ದಿಗಳ ಪ್ರಸಾರಕ್ಕಾಗಿ ಸರ್ಕಾರಗಳು ತಮ್ಮ ಜಾಹೀರಾತುಗಳನ್ನೂ ನಿಲ್ಲಿಸಬಹುದು. ಈ ಮೂಲಕ ಸುದ್ದಿ ಸಂಸ್ಥೆಗಳ ಮೇಲೆ ಸರ್ಕಾರವು ಹಿಡಿತ ಸಾಧಿಸಿದೆ. ಇದು ಒಂದು ಸ್ಥಿತಿ. ಮತ್ತೊಂದೆಡೆ, ಕೇಂದ್ರ ಸರ್ಕಾರವು, ಸರ್ಕಾರಿ ಹಾಗೂ ಖಾಸಗಿ ಸುದ್ದಿ ಸಂಸ್ಥೆಗಳ ಮೇಲೆ ಬಿಗಿ ಹಿಡಿತ ಸಾಧಿಸಿದೆ. ಕೆಲವೇ ಉದ್ಯಮಿಗಳ ಕೈಯಲ್ಲಿ ಭಾರತೀಯ ಮಾಧ್ಯಮದ ಮಾಲೀಕತ್ವವಿದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಭಾರತವು ಪತ್ರಕರ್ತರಿಗೆ ಅಪಾಯಕಾರಿ ದೇಶ’

‘ವೃತ್ತಿಪರತೆಯ ಕಾರಣಕ್ಕಾಗಿಯೇ ಪ್ರತಿ ವರ್ಷವೂ ಅಂದಾಜು ಮೂರರಿಂದ ನಾಲ್ಕು ಪತ್ರಕರ್ತರನ್ನು ದೇಶದಲ್ಲಿ ಕೊಲೆ ಮಾಡಲಾಗುತ್ತಿದೆ. ಇದೇ ಕಾರಣಕ್ಕಾಗಿ ಪತ್ರಕರ್ತರಿಗೆ ವಿಶ್ವದಾದ್ಯಂತ ಅಪಾಯಕಾರಿಯಾಗಿರುವ ದೇಶಗಳ ಪೈಕಿ ಭಾರತವೂ ಒಂದು’ ಎನ್ನುತ್ತದೆ ವರದಿ.

‘ಸರ್ಕಾರದ ಕಟುಟೀಕೆ ನಡೆಸುವ ಪತ್ರಕರ್ತರನ್ನು ದಿನಂಪ್ರತಿ ಆನ್‌ಲೈನ್‌ನಲ್ಲಿ ಹಿಂಸಿಸಲಾಗುತ್ತದೆ, ಬೆದರಿಕೆ ಒಡ್ಡಲಾಗುತ್ತದೆ. ದೈಹಿಕವಾಗಿ ದಾಳಿ ನಡೆಸುವ ಬೆದರಿಕೆಯನ್ನೂ ನೀಡಲಾಗುತ್ತದೆ. ಇಲ್ಲವೇ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿ, ಸ್ವೇಚ್ಛೆಯಿಂದ ಬಂಧನವನ್ನೂ ಮಾಡಲಾಗುತ್ತದೆ. ಪೊಲೀಸರು, ರಾಜಕೀಯ ಪಕ್ಷಗಳ ಕಾರ್ಯಕರ್ತರು, ಕೆಲವೊಮ್ಮೆ ಅಪರಾಧಿಗಳ ಗುಂಪುಗಳು ಹಾಗೂ ಸ್ಥಳೀಯವಾಗಿರುವ ಭ್ರಷ್ಟ ಅಧಿಕಾರಿಗಳಿಂದಲೂ ಪತ್ರಕರ್ತರಿಗೆ ಹಿಂಸೆ ನೀಡಲಾಗುತ್ತದೆ’ ಎಂದು ವರದಿ ವಿವರಿಸುತ್ತದೆ.

‘ಸರ್ಕಾರದ ವಿರುದ್ಧ ಸುದ್ದಿ ಬರೆಯುವ, ಟೀಕೆ ಮಾಡುವ ಪತ್ರಕರ್ತರಿಗೆ ‘ಉಗ್ರ’ ಮತ್ತು ‘ದೇಶದ್ರೋಹಿ’ ಎನ್ನುವ ಪಟ್ಟವನ್ನು ಹಿಂದುತ್ವವಾದಿಗಳು ಕಟ್ಟುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಇಂಥ ಪತ್ರಕರ್ತರ ಹತ್ಯೆಗೆ ಕರೆ ನೀಡುವಂಥ ಅಭಿಯಾನವನ್ನು ಮಾಡಲಾಗುತ್ತದೆ. ಈ ಅಭಿಯಾನವು ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ನಡೆಯುತ್ತದೆ. ಇದು ಭಯಹುಟ್ಟಿಸುವ ರೀತಿಯಲ್ಲಿದೆ. ಇಂಥ ಅಭಿಯಾನಕ್ಕೆ ಮಹಿಳಾ ಪತ್ರಕರ್ತರೂ ಗುರಿಯಾಗುತ್ತಾರೆ. ಇದಂತೂ ಇನ್ನೂ ಅಪಾಯಕಾರಿ. ಮಹಿಳಾ ಪತ್ರಕರ್ತರ ಖಾಸಗಿ ವಿವರಗಳನ್ನೂ ಬಹಿರಂಗಪಡಿಸಲಾಗುತ್ತದೆ. ಕಾಶ್ಮೀರದಲ್ಲಂತೂ ಪತ್ರಕರ್ತರ ಪರಿಸ್ಥಿತಿ ಇನ್ನಷ್ಟು ಕಠಿಣವಾಗಿದೆ. ಪೊಲೀಸರು, ಅರೆಸೇನಾ ಪಡೆಗಳಿಂದ ಪತ್ರಕರ್ತರು ಹಿಂಸೆಗೆ ಒಳಗಾಗುತ್ತಾರೆ. ಪತ್ರಕರ್ತರನ್ನು ವಶಕ್ಕೆ ಪಡೆದು, ವಿಚಾರಣೆಯನ್ನೇ ನಡೆಸದೆ ಜೈಲಿನಲ್ಲಿ ವರ್ಷಗಟ್ಟಲೆ ಇಟ್ಟುಕೊಳ್ಳಲಾಗುತ್ತದೆ’ ಎಂಬುದನ್ನು ವರದಿಯಲ್ಲಿ ಒತ್ತಿ ಹೇಳಲಾಗಿದೆ.

10 ವರ್ಷದಲ್ಲಿ 29 ಪತ್ರಕರ್ತರ ಹತ್ಯೆ



‘ಅಂತ್ಯಕಂಡ ಬಹುತ್ವ ತತ್ವದ ಪತ್ರಿಕೋದ್ಯಮ’

‘ನರೇಂದ್ರ ಮೋದಿ ಅವರು 2014ರಲ್ಲಿ ಅಧಿಕಾರಕ್ಕೆ ಏರಿದಾಗಿನಿಂದಲೂ ಭಾರತೀಯ ಮಾಧ್ಯಮವು ‘ಅಘೋಷಿತ ತುರ್ತು ಪರಿಸ್ಥಿತಿ’ಯ ಮಟ್ಟವನ್ನು ತಲುಪಿದೆ. ದೇಶದ ಮಾಧ್ಯಮದ ಹೆಚ್ಚಿನ ಸಂಸ್ಥೆಗಳನ್ನು ನಡೆಸುವ ಉದ್ಯಮಿಗಳು ಹಾಗೂ ಬಿಜೆಪಿಯ ಮಧ್ಯೆಯ ಉತ್ತಮ ಸಂಬಂಧವು ಕಳೆದ 10 ವರ್ಷದಿಂದ ಈಚೆಗೆ ಗಟ್ಟಿಯಾಗುತ್ತಲೇ ಸಾಗಿದೆ’ ಎಂದು ವರದಿಯಲ್ಲಿ ವಿವರಿಸಲಾಗಿದೆ.


‘ರಿಲಯನ್ಸ್ ಇಂಡಸ್ಟ್ರೀಸ್ ಗ್ರೂಪ್‌ನ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು ಪ್ರಧಾನಿ ಮೋದಿ ಅವರ ಖಾಸಾ ಸ್ನೇಹಿತರು. ಅಂಬಾನಿ ಅವರು ಸುಮಾರು 70ಕ್ಕೂ ಅಧಿಕ ಮಾಧ್ಯಮ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಈ ಮಾಧ್ಯಮ ಸಂಸ್ಥೆಗಳ ಸುದ್ದಿಗಳು ಸುಮಾರು 80 ಕೋಟಿ ಜನರನ್ನು ತಲುಪುತ್ತವೆ. ಭಾರತದ ಮುಖ್ಯವಾಹಿನಿಯ ಮಾಧ್ಯಮಗಳಲ್ಲಿ ಎನ್‌ಡಿಟಿವಿಯು ಬಹುತ್ವ ತತ್ವವನ್ನು ಅನುಸರಿಸಿಕೊಂಡು ಪತ್ರಿಕೋದ್ಯಮವನ್ನು ನಡೆಸುತ್ತಿತ್ತು. ಆದರೆ, 2022ರ ಅಂತ್ಯದ ಹೊತ್ತಿಗೆ ಪ್ರಧಾನಿ ಮೋದಿ ಅವರ ಮತ್ತೊಬ್ಬ ಖಾಸಾ ಸ್ನೇಹಿತರಾದ ಶ್ರೀಮಂತ ಉದ್ಯಮಿ ಗೌತಮ್ ಅದಾನಿ ಅವರು ಎನ್‌ಡಿಟಿವಿಯನ್ನು ಸ್ವಾಧೀನಪಡಿಸಿಕೊಂಡರು. ಅಲ್ಲಿಗೆ ಬಹುತ್ವ ತತ್ವದಡಿ ಕೆಲಸ ಮಾಡುತ್ತಿದ್ದ ಪತ್ರಿಕೋದ್ಯಮವು ಅಂತ್ಯಕಂಡಿತು’ ಎಂದು ವರದಿಯಲ್ಲಿ ಹೇಳಲಾಗಿದೆ.

‘ಇತ್ತೀಚಿನ ವರ್ಷಗಳಲ್ಲಿ ‘ಗೋದಿ ಮೀಡಿಯಾ’ (ರಾಜಕಾರಣಿಯ (ನಿರ್ದಿಷ್ಟವಾಗಿ ಮೋದಿ ಅವರ) ತೊಡೆಯ ಮೇಲೆ ಕೂರುವ ನಾಯಿಯಂತೆ ಇರುವ ಮಾಧ್ಯಮಗಳು) ಸಂಖ್ಯೆಯು ಏರಿಕೆಯಾಯಿತು. ಇವುಗಳು ಬಿಜೆಪಿ ಪರವಾಗಿ ಪ್ರಚಾರವನ್ನು ಮಾಡಿದವು. ಒತ್ತಡ ಹೇರುವುದು ಹಾಗೂ ಪ್ರಭಾವ ಬೀರುವ ಮುಖಾಂತರವಾಗಿ ಭಾರತದಲ್ಲಿದ್ದ ಬಹುತ್ವ ತತ್ವದ ಪತ್ರಿಕೋದ್ಯಮವನ್ನು ಕಟಕಟೆಯಲ್ಲಿ ನಿಲ್ಲಿಸಲಾಗಿದೆ. ಕೇಂದ್ರ ಸರ್ಕಾರದ ಕುರಿತು ಕಟುವಾಗಿ, ನೇರವಾಗಿ ಟೀಕೆ–ಟಿಪ್ಪಣಿಗಳನ್ನು ಮಾಡುವ ಪತ್ರಕರ್ತರನ್ನು ಬಿಜೆಪಿ ಬೆಂಬಲಿತರು ಟ್ರೋಲ್‌ಗೆ ಗುರಿಪಡಿಸುತ್ತಾರೆ’ ಎಂದು ವರದಿಯಲ್ಲಿ ಆರೋಪಿಸಲಾಗಿದೆ.

ಸುದ್ದಿಮನೆ...

‘ಭಾರತವು ವೈವಿಧ್ಯಮಯ ದೇಶ. ಆದರೆ, ಈ ವೈವಿಧ್ಯವು ದೇಶದ ಮಾಧ್ಯಮಗಳಲ್ಲಿ ಪ್ರತಿಫಲನವಾಗುವುದಿಲ್ಲ. ಈ ಮಾತು ಸುದ್ದಿ ಪ್ರಸಾರಕ್ಕೂ ಮತ್ತು ಮಾಧ್ಯಮ ಸಂಸ್ಥೆಗಳ ವ್ಯವಸ್ಥಾಪನಾ ಸ್ಥಾನಮಾನಗಳಿಗೂ ಅನ್ವಯವಾಗುತ್ತದೆ. ಮಾಧ್ಯಮಗಳಲ್ಲಿ ದೇಶದ ಹಿಂದೂ ಧರ್ಮದ ಪ್ರಭಾವಿ ಜಾತಿಗಳ ಪುರುಷರದ್ದೇ ಪಾರುಪತ್ಯವಿದೆ. ಇದು ಆ ಸಂಸ್ಥೆಯ ಸುದ್ದಿಯ ದೃಷ್ಟಿಕೋನಗಳು ಹಾಗೂ ವರದಿಗಳು, ಲೇಖನಗಳ ವಿಷಯಗಳ ಆಯ್ಕೆಯಲ್ಲಿ ಪ್ರಭಾವ ಬೀರುತ್ತವೆ’ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

‘ಕೋಟಿ’ಯ ಖಳನಾಯಕ ‘ದೀನೂ ಸಾವ್ಕಾರ್’



ದಿನೂ ಸಾವ್ಕಾರ್ ಪಾತ್ರದಲ್ಲಿ ರಮೇಶ್ ಇಂದಿರಾ

‘ಡಾಲಿ’ ಧನಂಜಯ ನಟನೆಯ, ಪರಮ್ ನಿರ್ದೇಶನದ ‘ಕೋಟಿ’ ಸಿನಿಮಾ ಜೂನ್ 14ಕ್ಕೆ ಬಿಡುಗಡೆಯಾಗುತ್ತಿದ್ದು, ಚಿತ್ರದ ಖಳನಾಯಕನನ್ನು ಚಿತ್ರತಂಡ ಪರಿಚಯಿಸಿದೆ. ‘ಸಪ್ತ ಸಾಗರದಾಚೆ ಎಲ್ಲೋ’ ಸಿನಿಮಾದಲ್ಲಿ ಮಿಂಚಿದ್ದ ನಟ ರಮೇಶ್ ಇಂದಿರಾ ‘ಕೋಟಿ’ ಸಿನಿಮಾದಲ್ಲಿ ‘ದಿನೂ ಸಾವ್ಕಾರ್’ ಆಗಿ ಕಾಣಿಸಿಕೊಳ್ಳಲಿದ್ದಾರೆ.


ಟೀಸರ್‌ನಲ್ಲೇ ಖದರ್ ತೋರಿಸಿದ್ದ ಖಳನಾಯಕನನ್ನು ನಿರ್ದೇಶಕ ಪರಮ್ ಹೀಗೆ ವಿವರಿಸಿದ್ದಾರೆ. ‘ಸುಯೋಧನ ಇಲ್ಲದ ಮಹಾಭಾರತ ಇಲ್ಲ. ರಾವಣನಿಲ್ಲದ ರಾಮಾಯಣವಿಲ್ಲ. ಇಷ್ಟ ಇಲ್ಲ ಎಂದು ಎಷ್ಟೇ ಹೇಳಿದರೂ ಖಳನಾಯಕರ ಪಾತ್ರಕ್ಕೆ ಅದೇನೋ ಸೆಳೆತ ಇದೆ. ಇಲ್ಲದಿದ್ದರೆ ರಾವಣನ ಲಂಕೆ ಸುಭಿಕ್ಷವಾಗಿತ್ತು ಎಂದು ಓದಿದಾಗ ಯಾಕೆ ಖುಷಿಯಾಗಬೇಕು? ಸುಯೋಧನ ಮತ್ತು ಕರ್ಣನ ನಡುವಿನ ಗೆಳೆತನವನ್ನು ನೋಡಿ ಯಾಕೆ ನಾವು ಭಾವುಕರಾಗಬೇಕು? ಕಥೆಯನ್ನು ಮುಂದೆ ತೆಗೆದುಕೊಂಡು ಹೋಗುವವನು, ನಾಯಕನ ಮೌಲ್ಯಗಳನ್ನು ಪ್ರಶ್ನಿಸುವವನು, ಕಥೆಗೊಂದು ಎನರ್ಜಿ ಕೊಡುವವನು ಖಳನಾಯಕ! ‘ದಿನೂ ಸಾವ್ಕಾರ್’ನದು ರಣತಂತ್ರದಲ್ಲಿ ಎತ್ತಿದ ಕೈ. ಬುದ್ಧಿವಂತ. ಸ್ವಲ್ಪ ಅನ್‌ಸ್ಟೇಬಲ್. ತಾನು ಹೇಳಿದ್ದನ್ನು ಎಲ್ಲರೂ ಕೇಳಬೇಕು ಎಂದುಕೊಂಡಿರುವ ವ್ಯಕ್ತಿ. ಮಾತು ಕೇಳದವರನ್ನು ಕೇಳಿಸುತ್ತೇನೆ ಎನ್ನುವುದನ್ನು ನಂಬಿದವನು. ಸಿಕ್ಕಾಪಟ್ಟೆ ಮಜಾ ಕೊಡುವ ಪಾತ್ರವಿದು. ರಮೇಶ್ ಇಂದಿರಾ ಅವರು ಈ ಪಾತ್ರವನ್ನು ನಿಭಾಯಿಸಿದ ರೀತಿ ನೋಡಿ ನಾನೂ ಗಾಬರಿಗೊಂಡಿದ್ದೆ’ ಎಂದಿದ್ದಾರೆ ಪರಮ್.

ಮೇ 10ಕ್ಕೆ ‘ಅಧಿಪತ್ರ’ ಟೀಸರ್

ಬಿಗ್‌ಬಾಸ್ ಖ್ಯಾತಿಯ ರೂಪೇಶ್ ಶೆಟ್ಟಿ ನಟಿಸಿರುವ ‘ಅಧಿಪತ್ರ’ ಸಿನಿಮಾದ ಆಡಿಯೊ ಹಕ್ಕುಗಳನ್ನು ಲಹರಿ ಖರೀದಿ ಮಾಡಿದೆ. ಇದೇ ವರ್ಷ ಸಿನಿಮಾ ಬಿಡುಗಡೆಗೊಳ್ಳಲಿದ್ದು, ಚಿತ್ರದ ಟೀಸರ್ ಮೇ 10ಕ್ಕೆ ಬಿಡುಗಡೆಯಾಗಲಿದೆ.


ಸದ್ಯ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸ ಭರದಿಂದ ಸಾಗಿದೆ. ಚಿತ್ರಕ್ಕೆ ಚಯನ್ ಶೆಟ್ಟಿ ಆ್ಯಕ್ಷನ್ ಕಟ್ ಹೇಳಿದ್ದು, ಇದು ಇವರ ಚೊಚ್ಚಲ ಸಿನಿಮಾ. ರೂಪೇಶ್‌ಗೆ ಜೋಡಿಯಾಗಿ ಗಿಚ್ಚಿ ಗಿಲಿಗಿಲಿ ಖ್ಯಾತಿಯ ಜಾಹ್ನವಿ ನಟಿಸಿದ್ದಾರೆ. ಪ್ರಕಾಶ್ ತುಮಿನಾಡು, ರಘು ಪಾಂಡೇಶ್ವರ್, ಎಂಕೆ ಮಠ, ದೀಪಕ್ ರೈ, ಅನಿಲ್ ಉಪ್ಪಾಲ್, ಕಾರ್ತಿಕ್ ಭಟ್, ಪ್ರಶಾಂತ್ ತಾರಾಬಳಗದಲ್ಲಿದ್ದಾರೆ.

ಸಸ್ಪೆನ್ಸ್ ಥ್ರಿಲ್ಲರ್ ಶೈಲಿಯಲ್ಲಿನ ‘ಅಧಿಪತ್ರ’ ಸಿನಿಮಾವನ್ನು ಕೆ.ಆರ್. ಸಿನಿಕಂಬೈನ್ಸ್ ಬ್ಯಾನರ್‌ನಡಿ ದಿವ್ಯಾ ನಾರಾಯಣ್, ಕುಲದೀಪ್ ರಾಘವ್, ಲಕ್ಷ್ಮೀಗೌಡ ಬಂಡವಾಳ ಹೂಡಿ ನಿರ್ಮಾಣ ಮಾಡಿದ್ದಾರೆ.



ರೂಪೇಶ್ ಶೆಟ್ಟಿ

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಮೇ 7, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಚತುರ್ದಶಿ ಗಂ. 11-41 ನಕ್ಷತ್ರ: ಅಶ್ವಿನಿ ಗಂ. 15-32 ಯೋಗ: ಆಯುಷ್ಮಾನ್ ಗಂ. 20-59 ಕರಣ: ಶಕುನಿ ಗಂ. 11-41, ಮೇಷ ಮಾಸದ 25 ನೇ ದಿನ, ಮಳೆನಕ್ಷತ್ರ: ಭರಣಿ 3.

ರಾಹುಕಾಲ: ಮಧ್ಯಾಹ್ನ 03-00 - 04-30

ಸೂರ್ಯೋದಯ: 06-10 **ಸೂರ್ಯಾಸ್ತ:** 06-44

ಮುಸ್ಲಿಂ ದಿನಾಂಕ: 27 ಶವ್ವಾಲ್

ಅದೃಷ್ಟ ಸಂಖ್ಯೆ: 2, 3

ಮೇಷ: ವಾಹನ ಮಾರಾಟಗಾರರು ವಾಕ್ಪಟುತ್ವದಿಂದ ಉತ್ತಮ ಹೊಗಳಿಕೆಯನ್ನು ಕೇಳುವಿರಿ. ಧಾನ್ಯ ಖರೀದಿ ಮಾಡುವಾಗ ಮಧ್ಯವರ್ತಿಗಳ ಅತಿಯಾಸೆಗೆ ಬೇಸರ ಪಡುವಿರಿ.

ವೃಷಭ: ಅಭಿವೃದ್ಧಿಗೆ ಕಾರಣರಾದವರನ್ನು ಮರೆತು ಶುಭ ಕಾರ್ಯಗಳನ್ನು ಹಮ್ಮಿಕೊಂಡಿದ್ದರೆ ಯೋಚಿಸಿ; ಅದರಿಂದಾಗುವ ಮನಸ್ತಾಪವನ್ನು ತಪ್ಪಿಸಿ. ಮುಖ್ಯವಾದ ಕೆಲಸಕ್ಕಾಗಿ ಪ್ರಯಾಣ ಬೆಳೆಸುವಿರಿ.

ಮಿಥುನ: ಸ್ನೇಹಿತನೊಂದಿಗೆ ಮುನಿಸಿನ ತೆರೆಯನ್ನು ಬದಿ ಸರಿಸಿ, ಉತ್ತಮ ಸಮಯ ಅನುಭವಿಸುವಿರಿ. ಈಟಿಯಲ್ಲಿ ಇರಿಯುವಂಥ ಮಾತುಗಳ ಮೇಲೆ ಹಿಡಿತವಿರಲಿ. ಮಾರ್ಗ ಮತ್ತು ಪ್ರಯತ್ನದಲ್ಲಿ ನಂಬಿಕೆ ಇರಲಿ.

ಕರ್ಕಾಟಕ: ಯಾವುದೋ ಯೋಚನೆ ಮಾಡುತ್ತಾ ಇನ್ನಾವುದೋ ಕೆಲಸ ಮಾಡಿ ಅಪಘಾತಗಳನ್ನು ಮಾಡಿಕೊಳ್ಳಬೇಡಿ. ಜವಾಬ್ದಾರಿಯುತ ಯೋಜನೆಯ ಸ್ಪಷ್ಟ ವಿಷಯವೊಂದನ್ನು ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ.

ಸಿಂಹ: ತವರಿನಲ್ಲಿ ನಡೆದ ಘಟನೆಗಳಿಂದ ಅತ್ಯಂತ ಸಂತೋಷ ಹೊಂದುವಿರಿ. ತವರಿನ ಕಡೆಯವರು ಮನೆಗೆ ಬರುವ ಸಾಧ್ಯತೆಗಳಿವೆ. ಸುಗಂಧ ದ್ರವ್ಯ ತಯಾರಕರು ಹಾಗೂ ಮಾರಾಟಗಾರರಿಗೆ ಲಾಭದಾಯಕ ದಿನವಾಗಲಿದೆ.

ಕನ್ಯಾ: ಸಂಘ–ಸಂಸ್ಥೆಗಳ ವಿಚಾರವನ್ನು ಮುಕ್ತವಾಗಿ ಚರ್ಚಿಸಿ ನಂತರದಲ್ಲಿ ಕೆಲಸಗಳನ್ನು ಕಾರ್ಯರೂಪಕ್ಕೆ ತರುವುದು ಉತ್ತಮ. ಸಮಪಾಲು ಸಮ ಬಾಳು ಎಂಬ ಧ್ಯೇಯವನ್ನು ಪಾಲಿಸಿ.

ತುಲಾ: ವಂಶಾಭಿವೃದ್ಧಿಯಾಗಿರುವ ವಿಚಾರದಿಂದ ಸಂತೋಷ ಮುಗಿಲುಮುಟ್ಟುವುದು. ಮಾನಸಿಕ ಶಕ್ತಿಗಳು ಬಲಯುತವಾಗಿ ಯೋಚನೆಗಳನ್ನು ಶೀಘ್ರವೇ ಕಾರ್ಯರೂಪಕ್ಕೆ ಇಳಿಸುತ್ತೀರಿ.

ವೃಶ್ಚಿಕ: ಮನಸ್ಸಿಗೆ ಬಂದ ಮಾತುಗಳನ್ನು ಆಡದೆ ಯೋಚನೆ ಮಾಡಿ ತೂಕದ ಮಾತುಗಳನ್ನು ಆಡಿದಲ್ಲಿ ಗೌರವಗಳು ಹೆಚ್ಚಾಗುವುದು. ಆಕಸ್ಮಿಕವಾಗಿ ಬರುವಂಥ ಖರ್ಚು ವೆಚ್ಚಗಳ ಮೇಲೆ ನಿಗಾ ವಹಿಸುವಿರಿ.

ಧನು: ನೃತ್ಯ ಕಲಾವಿದರು ಹಾಗೂ ಪ್ರಹಸನಕಾರರಿಗೆ ಉತ್ತಮ ಅವಕಾಶಗಳು ಅರಸಿಕೊಂಡು ಬರಲಿವೆ. ವಾದ-ವಿವಾದಗಳಿಂದ, ರಾಜಿ–ಪಂಚಾಯ್ತಿಗಳಿಂದ ಇಂದು ದೂರವಿರಿ. ಸಾಧ್ಯವಾದಷ್ಟು ಶಾಂತಿಯಿಂದ ಕೆಲಸವನ್ನು ಸಾಧಿಸಿ.

ಮಕರ: ಮಾಡುತ್ತಿರುವ ಕೆಲಸದಲ್ಲಿ ಹಣದ ಕೊರತೆ ಕಂಡುಬಂದರೆ ಸಂಕೋಚ ಮಾಡಿಕೊಳ್ಳದೆ ಆತ್ಮೀಯರಲ್ಲಿ ಕೇಳಿ. ತೀರಿಸುವ ಸಾಮರ್ಥ್ಯ ಇದೆ. ಉತ್ತಮ ಬುದ್ಧಿಶಕ್ತಿಯಿಂದ ಜನ ಮನ್ನಣೆ ಗಳಿಸಬಹುದು.


ಕುಂಭ: ಬಹುದಿನಗಳ ನಿರೀಕ್ಷಿತ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನೀಡುವ ಪ್ರದರ್ಶನಕ್ಕೆ ಪ್ರಶಂಸೆಗಳ ಮಹಾಪೂರ ಹರಿದು ಬರಲಿದೆ. ಚುಟುಕಾದ ಹಾಗೂ ಸರಿಯಾದ ಮರುತ್ತರಗಳಿಗೆ ಪ್ರಶಂಸೆಗಳು ದೊರೆಯುತ್ತವೆ.

ಮೀನ: ಕೋರ್ಟ್ ಕೆಲಸಗಳಲ್ಲಿ ಜಯ ಉಂಟಾಗಿ ಸಮಸ್ಯೆಗಳು ಬಗೆಹರಿಯುತ್ತವೆ. ಆರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತದೆ. ಆದಾಯದ ಎರಡರಷ್ಟು ಖರ್ಚು ಸಂಭವಿಸಬಹುದು.

ದೇವರು ಸ್ವೀಕರಿಸಿದ ಹಜ್ ಯಾತ್ರೆ

ನುಡಿ ಬೆಳಗು





ಪಿ. ಚಂದ್ರಿಕಾ

ಮಹಾಪುರುಷರೊಬ್ಬರು ಹಜ್ ಯಾತ್ರೆ ಮುಗಿಸಿ ಬರುವ ದಾರಿಯಲ್ಲಿ ಮಲಗಿದ್ದಾಗ ಒಂದು ಸುಂದರ ಕನಸು ಕಂಡರು. ಕನಸಲ್ಲಿ ಇಬ್ಬರು ದೇವದೂತರು ಮಾತನಾಡಿಕೊಳ್ಳುತ್ತಿದ್ದರು, ‘ಇವತ್ತು ಒಂದು ಲಕ್ಷಕ್ಕೂ ಹೆಚ್ಚಿನ ಜನರು ಹಜ್‌ಯಾತ್ರೆ ಮಾಡಿದರು. ಅವರಲ್ಲಿ ಅಲ್ಲಾಹನು ಯಾರ ಮೂಲಕ ಹಜ್‌ಅನ್ನು ಸ್ವೀಕರಿಸಿದ್ದಾನೆ’ ಎಂದು ಒಬ್ಬ ಕೇಳಿದರೆ, ‘ನಿನಗೆ ಗೊತ್ತಾ... ಅಲ್ಲಾಹನು ಇಲ್ಲಿಗೆ ಬಾರದೆ ಇರುವ ಆದರೆ ಬರುವ ಸಂಕಲ್ಪ ಮಾಡಿದ್ದ ಒಬ್ಬ ಚಮ್ಮಾರನ ಮೂಲಕ ಇಲ್ಲಿನ ಎಲ್ಲರ ಹಜ್ ಅನ್ನು ಸ್ವೀಕರಿಸಿದ್ದಾನೆ’ ಎನ್ನುತ್ತಾನೆ ಇನ್ನೊಬ್ಬ. ನಿದ್ದೆಯಿಂದ ಎದ್ದ ಮಹಾತ್ಮನಿಗೆ ದೇವದೂತರ ಮಾತುಗಳು ಅಚ್ಚರಿ ಮತ್ತು ಕುತೂಹಲಕರವಾಗಿ ಕಂಡಿತು. ಅವರು ಹೇಳಿದ ವಿವರಗಳನ್ನು ಹಿಡಿದು ಚಮ್ಮಾರನನ್ನು ಹುಡುಕಹೊರಡುತ್ತಾರೆ. ಊರಿಂದ ಊರಿಗೆ ಚಮ್ಮಾರನನ್ನು ಹುಡುಕುತ್ತಾ ಹೊರಟ ಮಹಾತ್ಮನನ್ನು ರಾಜನೊಬ್ಬ ತನ್ನ ದೇಶಕ್ಕೆ ಆಹ್ವಾನಿಸಿ ಎಲ್ಲ ವಿವರಗಳನ್ನು ತಿಳಿದುಕೊಳ್ಳುತ್ತಾನೆ. ಹಜ್‌ಗೆ ಹೊರಟು ಹೋಗದೆ ನಿಂತ ಚಮ್ಮಾರನನ್ನು ಹುಡುಕಿಸುತ್ತಾನೆ. ಅವನನ್ನು ಇಲ್ಲಿಗೇ ಕರೆಸುವೆ ಎಂದರೂ ಕೇಳದೆ ಮಹಾಪುರುಷ ತಾನೆ ಅವನ ಜಾಗಕ್ಕೆ ಹೋಗುವುದಾಗಿ ಹೊರಡುತ್ತಾನೆ.

ತನ್ನ ಕೆಲಸದಲ್ಲಿ ತೊಡಗಿಕೊಂಡಿದ್ದ ಚಮ್ಮಾರ ಮಹಾಪುರುಷನನ್ನು ಕಂಡು ನಮಸ್ಕರಿಸುತ್ತಾನೆ. ಮಹಾಪುರುಷನು ಕಾತರದಿಂದ, ‘ಈ ಸಲ ನೀನೇಕೆ ಹಜ್‌ಗೆ ಹೋಗಲಿಲ್ಲ. ದಯಮಾಡಿ ತಿಳಿಸು’ ಎನ್ನುತ್ತಾನೆ.

‘ಬಹುಕಾಲದಿಂದ ನನ್ನ ಶ್ರಮದಿಂದ ಕೂಡಿಟ್ಟ ಹಣದಿಂದ ಈ ಸಲ ಹಜ್‌ಗೆ ಹೋಗುವ ತಯಾರಿಯಲ್ಲಿದ್ದೆ. ನನ್ನ ಮಡದಿಯು ಗರ್ಭಿಣಿಯಾಗಿದ್ದಳು. ಪಕ್ಕದ ಮನೆಯಿಂದ ಮಾಂಸ ಬೇಯಿಸುವ ವಾಸನೆ ಅವಳಲ್ಲಿ ತಿನ್ನುವ ಆಸೆಯನ್ನು ಹೆಚ್ಚಿಸಿತ್ತು. ಅದಕ್ಕಾಗಿ ಹಣ ಖರ್ಚು ಮಾಡಿದರೆ ಹಜ್‌ಗೆ ಹೋಗಲು ಕಡಿಮೆ ಬೀಳುತ್ತದೆ. ಅವರನ್ನೇ ಕೇಳಿದರೆ ಕೊಡಲಾರರೇ? ಎಂದು ಅವರ ಮನೆಯ ಬಾಗಿಲನ್ನು ತಟ್ಟಿದೆವು. ಪಕ್ಕದ ಮನೆಯಾಕೆ ಬಾಗಿಲನ್ನು ತೆಗೆದು ನಮ್ಮ ಮಾತುಗಳನ್ನು ಸಮಾಧಾನದಿಂದ ಕೇಳಿಸಿಕೊಂಡು, ‘ನಾನು ನಿಮಗೆ ಮಾಂಸವನ್ನು ಕೊಡಲಾರೆ. ಅದು ಹದ್ದುಗಳು ಕುಕ್ಕಿ ತಿಂದಿದ್ದ ಸತ್ತ ಕತ್ತೆಯ ಮಾಂಸ. ಬಡತನ, ಮಕ್ಕಳು, ಹಸಿವೆ ನಾನು ಇದನ್ನು ಮಾಡಬಹುದು. ಅಲ್ಲಾಹ್‌ಗೆ ಸಮರ್ಪಿತವಾಗದ ಅಪವಿತ್ರವಾದ ಅದನ್ನು ನಿಮಗೆ ಕೊಡಲು ಸಾಧ್ಯವಿಲ್ಲ’ ಎಂದಳು.

ಆಕೆಯ ಕಣ್ಣುಗಳಲ್ಲಿ ಸಂಕಟ ಮಡುಗಟ್ಟಿತ್ತು. ನನಗೆ ತಡೆಯಲಾಗಲಿಲ್ಲ. ಹಜ್‌ಯಾತ್ರೆಯ ಹಣವನ್ನು ತಂದು, ‘ನಿಮಗೆ ಇಷ್ಟು ಸಂಕಟ ಇರುವಾಗ ಈ ಹಣದಿಂದ ಹಜ್‌ಗೆ ಹೋಗುವ ಬದಲು ನಿಮ್ಮ ಸಂಕಟಕ್ಕೆ ಆದರೆ ಒಳಿತು’ ಎಂದು ಕೊಟ್ಟೆ. ಈ ಕಾರಣಕ್ಕೆ ನಾನು ಹಜ್‌ಗೆ ಹೋಗಲಾಗಲಿಲ್ಲ’ ಎನ್ನುತ್ತಾನೆ. ಈ ಮಾತುಗಳನ್ನು ಕೇಳಿ ಆ ಮಹಾಪುರುಷ ಚಮ್ಮಾರನನ್ನು ತಬ್ಬಿ, ‘ಅಲ್ಲಾಹನು ನೀನು ಬಾರದಿದ್ದರೂ ನಿನ್ನ ತ್ಯಾಗದ ಮೂಲಕವೇ ಈ ಸಲದ ಎಲ್ಲರ ಹಜ್ ಅನ್ನು ಸ್ವೀಕರಿಸಿದ್ದಾನೆ. ಅವನಿಗೆ ಗೊತ್ತು ಅಂತಃಕರಣ ಮತ್ತು ಪ್ರೀತಿಯೇ ದೊಡ್ಡದೆಂದು. ಮಿಡಿವ ನಿನ್ನ ಹೃದಯದಲ್ಲೇ ಹಜ್ ಇದೆ’ ಎನ್ನುತ್ತಾನೆ.

ಮನುಷ್ಯನ ಚರಿತ್ರೆಯಲ್ಲಿ ಎಲ್ಲ ಧರ್ಮಗಳೂ ಹೇಳಿದ್ದು ಇದೇ ಅಲ್ಲವೇ...

ಪದಬಂಧ 5673


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವೆ ಕಸವಿಟ್ಟರೂ ಅರಳುವಿಕೆ! (4)
3.ಉತ್ತ ನೆಲವನ್ನು ಮಟ್ಟ ಮಾಡುವ ಸಾಧನ (3)
5.ಗಣಪತಿ ಚಿಕ್ಕದಾಗಿ ಮೂಡಿದ್ದಾನೆ (3)
7.ಉರು ಹೊಡೆಯುತ್ತಿರುವವನ ಶ್ವಾಸ (3)
8.ಪ್ರೇಮಿಗಳ ಅಗಲಿಕೆಯ ಬೇಗೆ (5)
11.ನೆಲವನ್ನು ಗೋಮಯದಿಂದ ಸಾರಿಸುವಿಕೆ (3)
12.ಕಡೆದ ಮೊಸರಿದು (3)
15.ಗರದಲ್ಲಿರುವ ಬೆಟ್ಟದ ಗವಿ ಕಾಣುತ್ತಿದೆಯೇ? (3)
16.ಮಧ್ಯವಯಸ್ಸಿದು (4)

ಮೇಲಿಂದ ಕೆಳಕ್ಕೆ

1.ಯೋಗವಿದ್ದರೂ ಅಗಲುವಿಕೆ! (3)
2.ನಲ್ಲಿಯ ಬಳಿ ಕಾಣಿಸಿದ ಏಡಿ (2)
3.ಕೇಶದ ಬುಡದಲ್ಲಿನ ಚರ್ಮದ ಹೊಟ್ಟು (3)
4.ಶರೀರದ ಹಿಂಭಾಗವನ್ನು ಹೊಡೆದು ಪ್ರೋತ್ಸಾಹಿಸು (4)
6.ಹಾಡಿನ ಪುನರಾವರ್ತನೆಗೊಳ್ಳುವ ಭಾಗ (3)
7.ಕನ್ನಡಿಗ ನೀಡಿದ ಎಕ್ಸಾಂಪಲ್ (5)
9.ಇದು ತುಂಬಾ ಶ್ರೇಷ್ಠ (3)
10.ಉಪ್ಪು ತಯಾರಿಸುವವನು (4)
11.ಆಧಾರದಿಂದ ಕೂಡಿದುದು (3)
13.ಇಳೆಯಲ್ಲಿ ಭೇಟಿಯಾಗಿರುವ ಸ್ನೇಹಿತ (3)
14.ಅರಿವು ಹೀಗೆ ಬಂದಿದೆ (2)



5672ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬದ್ಧಕಂಕಣ 3.ಜೀವನ
5.ಖಾಸಾ 6.ಳನ
8.ಪ್ರಧಾನ 9.ಉಪಕರಣ
12.ಮಸಾಲೆ 13.ಣಗ
15.ಮೌನ 16.ಕಣ್ಣೀರು
17.ಭವಬಂಧನ

ಮೇಲಿಂದ ಕೆಳಕ್ಕೆ:
1.ಬರಖಾಸ್ತು 2.ಕವಳ
4.ನಸುನಗು 7.ನವೀಕರಣ
8.ಪ್ರಯಾಣ 9.ಉಯ್ಯಾಲೆ
10.ಆಮಲಕ 11.ಜನಮನ
14.ಗಡವ

ಸುಡೊಕು 6058

	3		4			2		7
7		4		3			5	
			1			8		3
				4				
3		2	9		1			
				6				2
1		8	3		4		2	
	2					9		8
6		9		2			3	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6057 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1





ಎರಡನೇ ಹಂತ: ಕಣದಲ್ಲಿ ತವಕ

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ ಎರಡನೆಯ ಮತ್ತು ಕೊನೆಯ ಹಂತದ ಮತದಾನ ಇಂದು ನಡೆಯಲಿದ್ದು, ಹಲವು ರಾಜಕೀಯ ನಾಯಕರ ಭವಿಷ್ಯ ನಿರ್ಧಾರವಾಗಲಿದೆ. ನೆತ್ತಿ ಸುಡುವ, ಧಗೆಯೇರಿಸಿದ ಬಿಸಿಲ ನಡುವೆಯೇ ಮತಭಿಕ್ಷುಗಳು, ತಮ್ಮ ಶಕ್ತಿಯನ್ನೆಲ್ಲ ಧಾರೆಯೆರೆದು ಪ್ರಚಾರ ನಡೆಸಿದ್ದಾರೆ. ರಾಜ್ಯದಲ್ಲಿ ಭಾರಿ ಗಮನ ಸೆಳೆವ ಕ್ಷೇತ್ರಗಳು, ಯಾವೆಲ್ಲ ನಾಯಕರಿಗೆ ಈ ಹಂತದ ಚುನಾವಣೆ ನಿರ್ಣಾಯಕ ಎಂಬ ಚಿತ್ರಣ ಇಲ್ಲಿದೆ

ಹೈ ವೋಲ್ಟೇಜ್ ಕ್ಷೇತ್ರಗಳು

ಶಿವಮೊಗ್ಗ



ಒಂದೂವರೆ ದಶಕದಿಂದ ನಡೆಯುತ್ತಿರುವ ಇಬ್ಬರು ಮಾಜಿ ಮುಖ್ಯಮಂತ್ರಿಗಳ ಕುಟುಂಬದ ಮಧ್ಯದ ಪೈಪೋಟಿ ಈ ಬಾರಿಯೂ ಮುಂದುವರಿದಿದೆ. ಎಸ್. ಬಂಗಾರಪ್ಪ ಪುತ್ರಿ ಗೀತಾ ಶಿವರಾಜ್‌ಕುಮಾರ್, ಬಿ.ಎಸ್. ಯಡಿಯೂರಪ್ಪ ಪುತ್ರ ಹಾಲಿ ಸಂಸದ ಬಿ.ವೈ. ರಾಘವೇಂದ್ರ ಮುಖಾಮುಖಿಯಾಗಿದ್ದಾರೆ. ಕೇಂದ್ರ ಸಂಸದೀಯ ಮಂಡಳಿ ಸದಸ್ಯರೂ ಆಗಿರುವ ಯಡಿಯೂರಪ್ಪ ಅವರ ಇನ್ನೊಬ್ಬ ಪುತ್ರ ಬಿ.ವೈ. ವಿಜಯೇಂದ್ರ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷರೂ ಆಗಿದ್ದಾರೆ. ತಮ್ಮ ತವರು ಕ್ಷೇತ್ರದ ಗೆಲುವು ಅವರಿಗೆ ಪ್ರತಿಷ್ಠೆ. ಜಿಲ್ಲಾ ಉಸ್ತುವಾರಿ ಸಚಿವರೂ ಆದ ಮಧು ಬಂಗಾರಪ್ಪ ಅವರಿಗೆ ಅಕ್ಕ ಗೀತಾ ಅವರ ಗೆಲುವು ಪ್ರತಿಷ್ಠೆಯಾಗಿದೆ, ನಟ ಶಿವರಾಜಕುಮಾರ್ ಪತ್ನಿಯ ಬೆನ್ನಿಗೆ ನಿಂತಿದ್ದಾರೆ. ಇಬ್ಬರ ಮಧ್ಯೆ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಪಕ್ಷೇತರರಾಗಿ ಕಣಕ್ಕೆ ಇಳಿದಿದ್ದಾರೆ.

ಹಾವೇರಿ



ಎರಡು ವರ್ಷ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಇದೇ ಮೊದಲ ಬಾರಿ ಲೋಕಸಭಾ ಚುನಾವಣೆಯಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. 2019ರಲ್ಲಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರವನ್ನು ಪತನಗೊಳಿಸಿ, ಅಧಿಕಾರ ಪಡೆದಿದ್ದ ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಇಳಿಸಿದ್ದ ಬಿಜೆಪಿ ವರಿಷ್ಠರು, ಬೊಮ್ಮಾಯಿಗೆ ಪಟ್ಟಕಟ್ಟಿದ್ದರು. ಈಗ ಅವರನ್ನು ಲೋಕಸಭಾ ಚುನಾವಣೆಗೆ ಇಳಿಸುವ ಮೂಲಕ ಬಿಜೆಪಿ ವರಿಷ್ಠರು ಹೊಸ ದಾಳ ಉರುಳಿಸಿದ್ದಾರೆ. ಯಡಿಯೂರಪ್ಪ ಅವರ ಬೆನ್ನಿಗೆ ನಿಂತಿದ್ದಾರೆ. ಕಾಂಗ್ರೆಸ್‌ನ ಆನಂದ ಗಡ್ಡದೇವರ ಮಠ ಅವರಿಗೆ ಎದುರಾಳಿ. ಅವರಿಗೆ ಕ್ಷೇತ್ರವನ್ನು ಗೆದ್ದುಕೊಳ್ಳುವ ಜತೆಗೆ, ಕೇಂದ್ರದ ನಾಯಕರು ಇಟ್ಟ ನಂಬಿಕೆಯನ್ನೂ ಉಳಿಸಿಕೊಳ್ಳುವ ಅನಿವಾರ್ಯ ಇದೆ.

ಕಲಬುರಗಿ



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಳಿಯ ರಾಧಾಕೃಷ್ಣ ದೊಡ್ಡಮನಿ ಕಣದಲ್ಲಿದ್ದಾರೆ. ತಾವೇ ಬೆಳೆಸಿದ ಶಿಷ್ಯ ಉಮೇಶ್ ಜಾಧವ್ 2019ರ ಲೋಕಸಭಾ ಚುನಾವಣೆ ವೇಳೆಗೆ ಕಾಂಗ್ರೆಸ್‌ಗೆ ಕೈಕೊಟ್ಟು ಬಿಜೆಪಿ ಸೇರಿ, ತಮ್ಮನ್ನೇ ಸೋಲಿಸಿದ ಸೇಡು ತೀರಿಸಿಕೊಳ್ಳಲು ಖರ್ಗೆ ಈ ಬಾರಿ ಅಳಿಯನನ್ನು ಕಣಕ್ಕೆ ಇಳಿಸಿದ್ದಾರೆ. ದೇಶದ ಎಲ್ಲೆಡೆ ಬಿಜೆಪಿ ಗೆಲುವಿನ ನಾಗಾಲೋಟಕ್ಕೆ ಕಡಿವಾಣ ಹಾಕಲು ಶ್ರಮಿಸುತ್ತಿರುವ, ಬಿಜೆಪಿಯನ್ನು ಕಟು ಮಾತುಗಳಲ್ಲಿ ಟೀಕಿಸುತ್ತಿರುವ ಖರ್ಗೆ ಅವರಿಗೆ ತಮ್ಮ ಸ್ವಕ್ಷೇತ್ರದಲ್ಲಿ ಅಳಿಯನನ್ನು ಗೆಲ್ಲಿಸಿಕೊಂಡು ಸಾಮರ್ಥ್ಯ ಸಾಬೀತುಪಡಿಸಬೇಕಿದೆ. ಹಾಗಾಗಿಯೇ ಈ ಬಾರಿ ಅವರು ಜನರನ್ನು ಭಾವನಾತ್ಮಕ ಮಾತುಗಳಿಂದ ಸೆಳೆಯುತ್ತಿದ್ದಾರೆ. ಹಾಲಿ ಸಂಸದ ಉಮೇಶ್ ಜಾಧವ್ ಅವರಿಗೆ ಈ ಬಾರಿಯೂ ಬಿಜೆಪಿ ಟಿಕೆಟ್ ನೀಡಿದೆ. ರಾಷ್ಟ್ರ ಮಟ್ಟದಲ್ಲಿ ಸದಾ ಪಕ್ಷವನ್ನು ಟೀಕಿಸುವ ಖರ್ಗೆ ಅವರ ಅಳಿಯನನ್ನು ಸೋಲಿಸುವ ಮೂಲಕ ತಿರುಗೇಟು ನೀಡುವುದು ಬಿಜೆಪಿ ನಾಯಕರ ಲೆಕ್ಕಾಚಾರ.

ಧಾರವಾಡ



ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಐದನೇ ಬಾರಿ ಸ್ಪರ್ಧೆಗೆ ಇಳಿದಿದ್ದಾರೆ. ಶಿರಹಟ್ಟಿ ಮಠದ ಫಕೀರ ದಿಂಗಾಲೇಶ್ವರ ಶ್ರೀ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯಲು ಮುಂದಾಗಿದ್ದರಿಂದ ಕ್ಷೇತ್ರ ಗಮನ ಸೆಳೆದಿತ್ತು. ಒತ್ತಡಕ್ಕೆ ಮಣಿದು ಅವರು ಹಿಂದೆ ಸರಿದರೂ, ಜೋಶಿ ವಿರುದ್ಧ ಧ್ವನಿ ಮೊಳಗಿಸುತ್ತಲೇ ಇದ್ದಾರೆ. ಇದುವರೆಗೂ ಬಿಜೆಪಿ ಜತೆಗೆ ಇದ್ದ ಲಿಂಗಾಯತ ವೋಟ್ ಬ್ಯಾಂಕ್ ಈ ಬಾರಿ ಏನು ನಿರ್ಧಾರ ತೆಗೆದುಕೊಳ್ಳುತ್ತದೆ ಎನ್ನುವ ಕುತೂಹಲವೂ ಇದೆ. ನಾಲ್ಕು ಚುನಾವಣೆಗಳಲ್ಲಿ ಕಾಂಗ್ರೆಸ್ ಏನೇ ತಂತ್ರಗಾರಿಕೆ ಮಾಡಿದರೂ ಜೋಶಿ ಅವರ ಗೆಲುವನ್ನು ತಡೆಯಲು ಸಾಧ್ಯವಾಗಿರಲಿಲ್ಲ. ಲಿಂಗಾಯತರಿಗೆ ಟಿಕೆಟ್ ನೀಡಿದರೂ ಪ್ರಯೋಜನಕ್ಕೆ ಬಂದಿರಲಿಲ್ಲ. ಹಾಗಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸಮುದಾಯದ ಯುವಕ ವಿನೋದ್ ಅಸೂಟಿ ಅವರನ್ನು ಕಣಕ್ಕೆ ಇಳಿಸಿದ್ದಾರೆ. ಇದು ಜೋಶಿಗೂ, ಸಿದ್ದರಾಮಯ್ಯ ಅವರಿಗೂ ಪ್ರತಿಷ್ಠೆಯಾಗಿದೆ. ಜತೆಗೆ, ದಿಂಗಾಲೇಶ್ವರ ವಿರೋಧ ಇಬ್ಬರಿಗಿಂತ ಹೆಚ್ಚು ಸದ್ದು ಮಾಡುತ್ತಿದೆ.

ಬೆಳಗಾವಿ




ವಿಧಾನಸಭಾ ಚುನಾವಣೆಯಲ್ಲಿ ಧಾರವಾಡ ಕೇಂದ್ರ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್ ನೀಡದ ಕಾರಣ ಮುನಿಸಿಕೊಂಡು ‘ಕೈ’ ಹಿಡಿದಿದ್ದ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರನ್ನು ಮರಳಿ ಕರೆ ತಂದ ಬಿಜೆಪಿ ಬೆಳಗಾವಿಯಿಂದ ಕಣಕ್ಕೆ ಇಳಿಸಿದೆ. ಅಲ್ಲಿ ಅವರ ಬೀಗತಿ ಮಂಗಲಾ ಅಂಗಡಿ ಹಾಲಿ ಸಂಸದೆ. ಬೀಗರಾದ ಸುರೇಶ ಅಂಗಡಿ ಇದೇ ಕ್ಷೇತ್ರದಿಂದ ಗೆದ್ದು ಕೇಂದ್ರ ಸಚಿವರೂ ಆಗಿದ್ದರು. ಅವರ ನಿಧನದ ನಂತರ ನಡೆದ ಉಪ ಚುನಾವಣೆಯಲ್ಲಿ ಪತ್ನಿ ಮಂಗಲಾ ಗೆಲುವು ಸಾಧಿಸಿದ್ದರು. ಲೋಕಸಭಾ ಚುನಾವಣೆಯಲ್ಲಿ ಈ ಬಾರಿ ಹಲವು ಸಚಿವರ ಮಕ್ಕಳಿಗೆ ಟಿಕಟ್ ನೀಡಿರುವ ಕಾಂಗ್ರೆಸ್ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪುತ್ರ ಮೃಣಾಲ್ ಅವರನ್ನು ಬೆಳಗಾವಿಯಲ್ಲಿ ಕಣಕ್ಕೆ ಇಳಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಇವರಿಬ್ಬರಿಗೆ ಕಾಂಗ್ರೆಸ್ ಶಾಸಕ ಲಕ್ಷ್ಮಣ ಸವದಿ ಜತೆಯಾಗಿದ್ದಾರೆ. ಜಾರಕಿಹೊಳಿ, ಕತ್ತಿ, ಕೋರೆ, ಹುಕ್ಕೇರಿ, ಜೊಲ್ಲೆ ಕುಟುಂಬಗಳ ರಾಜಕಾರಣದ ಜತೆಗೆ ಹೆಬ್ಬಾಳಕರ ಕುಟುಂಬವೂ ಮುನ್ನೆಲೆಗೆ ಬಂದಿದೆ. ಯಾರ ಕೈ ಮೇಲಾಗಲಿದೆ ಎಂಬ ಕಾರಣಕ್ಕೆ, ಕ್ಷೇತ್ರ ಕುತೂಹಲ ಕೆರಳಿಸಿದೆ.

ಚಿಕ್ಕೋಡಿ



ಬಿಜೆಪಿಯ ಭದ್ರ ಕೋಟೆಯಂತಿರುವ ಚಿಕ್ಕೋಡಿ ಕ್ಷೇತ್ರ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಮಗಳು ಪ್ರಿಯಾಂಕಾ ಜಾರಕಿಹೊಳಿ ಸ್ಪರ್ಧೆಯಿಂದಾಗಿ ತೀವ್ರ ಪೈಪೋಟಿಯ ಕಣವಾಗಿ ಮಾರ್ಪಟ್ಟಿದೆ. ಕಾಂಗ್ರೆಸ್‌ನ ಪ್ರಬಲ ನೆಲೆಯಾಗಿದ್ದ ಕ್ಷೇತ್ರವನ್ನು ಮತ್ತೆ ‘ಕೈ’ ವಶ ಮಾಡಿಕೊಳ್ಳಲು ಸತೀಶ ಜಾರಕಿಹೊಳಿ ಹಟಕ್ಕೆ ಬಿದ್ದಿದ್ದಾರೆ. ಬಿಜೆಪಿಯ ಅಣ್ಣಾಸಾಹೇಬ ಜೊಲ್ಲೆ ಎರಡನೇ ಬಾರಿ ಕಣದಲ್ಲಿದ್ದು, ಕ್ಷೇತ್ರ ಉಳಿಸಿಕೊಳ್ಳಲು ತರಹೇವಾರಿ ಕಸರತ್ತು ನಡೆಸುತ್ತಿದ್ದಾರೆ. ಜಾರಕಿಹೊಳಿ ಕುಟುಂಬದ ಮೂರನೇ ತಲೆಮಾರಿನ ರಾಜಕೀಯ ಪ್ರವೇಶಕ್ಕೆ ಮುನ್ನುಡಿ ಬರೆದಿರುವುದೂ ಈ ಕ್ಷೇತ್ರದ ವಿಶೇಷ. ಬಿಜೆಪಿಯಲ್ಲಿರುವ ಶಾಸಕರಾದ ರಮೇಶ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ಈ ಕ್ಷೇತ್ರದಲ್ಲಿ ಬಿಜೆಪಿ ಪರ ನಿಂತಿಲ್ಲ. ಇಡೀ ಕುಟುಂಬವೇ ಈ ಚುನಾವಣೆಯನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಸ್ವೀಕರಿಸಿದೆ. ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಹಾಲಿ ಸಂಸದರ ಕುಟುಂಬದ ಮಧ್ಯದ ಹಣಾಹಣಿಯಿಂದ ಈ ಕ್ಷೇತ್ರ ಗಮನ ಸೆಳೆದಿದೆ.

ಬೀದರ್



ಬೀದರ್ ಕ್ಷೇತ್ರ ಕೇಂದ್ರ ಸಚಿವ ಭಗವಂತ ಖೂಬಾ ಮತ್ತು ರಾಜ್ಯದ ಅರಣ್ಯ ಸಚಿವ ಈಶ್ವರ ಖಂಡ್ರೆ ಕುಟುಂಬದ ಮಧ್ಯೆ ನೇರ ಹಣಾಹಣಿಯ ಅಖಾಡವಾಗಿದೆ. ದೀರ್ಘಕಾಲ ಕಾಂಗ್ರೆಸ್ ತೆಕ್ಕೆಯಲ್ಲಿದ್ದು, ಈಗ ಬಿಜೆಪಿಯ ಹಿಡಿತಕ್ಕೆ ಜಾರಿರುವ ಕ್ಷೇತ್ರವನ್ನು ಮರಳಿ ಪಡೆಯುವ ಪ್ರಯತ್ನವನ್ನು ‘ಕೈ’ ಪಡೆ ಮಾಡುತ್ತಿದೆ. ಸತತ ಎರಡು ಬಾರಿ ಸಂಸದರಾಗಿ ಆಯ್ಕೆಯಾಗಿದ್ದು, ಕೇಂದ್ರ ಸಚಿವರೂ ಆಗಿರುವ ಖೂಬಾ ಕ್ಷೇತ್ರದಲ್ಲಿ ಮೂರನೇ ಗೆಲುವಿಗಾಗಿ ಬೆವರು ಹರಿಸುತ್ತಿದ್ದಾರೆ. ರಾಜ್ಯದ ಅತ್ಯಂತ ಕಿರಿಯ ಅಭ್ಯರ್ಥಿಯಾಗಿರುವ ಸಾಗರ್ ಖಂಡ್ರೆ ಇತಿಹಾಸ ನಿರ್ಮಿಸುವ ತವಕದಲ್ಲಿದ್ದಾರೆ. ಇಲ್ಲಿನ ಗೆಲುವು ಖಂಡ್ರೆ– ಖೂಬಾ ಇಬ್ಬರಿಗೂ ರಾಜಕೀಯ ಅಸ್ತಿತ್ವದ ಪ್ರಶ್ನೆಯನ್ನು ತಂದೊಡ್ಡಿದೆ.

ಬಾಗಲಕೋಟೆ



ಸತತ ಐದು ಬಾರಿ ಸಂಸದರಾಗಿರುವ ಪಿ.ಸಿ. ಗದ್ದಿಗೌಡರ್ ಮತ್ತು ಹೊಸ ಮುಖ ಸಂಯುಕ್ತಾ ಪಾಟೀಲ ಈ ಬಾರಿ ಬೀದರ್ ಕ್ಷೇತ್ರದಲ್ಲಿ ಮುಖಾಮುಖಿಯಾಗಿದ್ದಾರೆ. ಆರನೇ ಬಾರಿಗೆ ಗೆಲುವು ಸಾಧಿಸಿ ದೆಹಲಿಯತ್ತ ಹೆಜ್ಜೆ ಹಾಕಲು ಗದ್ದಿಗೌಡರ್ ಪ್ರಯತ್ನಿಸುತ್ತಿದ್ದರೆ, ಅವರನ್ನು ಕಟ್ಟಿಹಾಕಿ ವಿಜಯಪತಾಕೆಯನ್ನು ಕಿತ್ತುಕೊಳ್ಳುವ ಹಂಬಲದಲ್ಲಿದ್ದಾರೆ ಸಕ್ಕರೆ ಸಚಿವ ಶಿವಾನಂದ ಪಾಟೀಲರ ಮಗಳು ಸಂಯುಕ್ತಾ. ಚುನಾವಣೆಯಲ್ಲಿ ಗೆಲ್ಲುವುದು ಗದ್ದಿಗೌಡರ್ ಮತ್ತು ಶಿವಾನಂದ ಪಾಟೀಲ ಇಬ್ಬರಿಗೂ ಪ್ರತಿಷ್ಠೆ. ಆರನೇ ಬಾರಿ ಗೆದ್ದು, ಎನ್‌ಡಿಎ ಮೈತ್ರಿಕೂಟ ಮತ್ತೆ ಅಧಿಕಾರಕ್ಕೆ ಬಂದರೆ ಕೇಂದ್ರ ಸಂಪುಟ ಸೇರುವ ನಿರೀಕ್ಷೆ ಬಿಜೆಪಿ ಅಭ್ಯರ್ಥಿಯದ್ದು. ಮಗಳನ್ನು ಗೆಲ್ಲಿಸಿಕೊಳ್ಳುವ ಮೂಲಕ ರಾಜ್ಯ ಸರ್ಕಾರದಲ್ಲಿ ಸಚಿವ ಸ್ಥಾನಕ್ಕೆ ಧಕ್ಕೆ ಆಗದಂತೆ ರಕ್ಷಣೆ ಪಡೆಯುವುದು ಕಾಂಗ್ರೆಸ್ ಅಭ್ಯರ್ಥಿಯ ಅಪ್ಪನ ಮುಂದಿರುವ ಸವಾಲು.

ವಿಜಯಪುರ



ಸತತ ಮೂರು ಅವಧಿಗೆ ವಿಜಯಪುರ ಎಸ್‌ಸಿ ಮೀಸಲು ಕ್ಷೇತ್ರವನ್ನು ಪ್ರತಿನಿಧಿಸಿರುವ ರಮೇಶ ಜಿಗಜಿಣಗಿ ಅವರ ಬದಲಿಗೆ ಬೇರೊಬ್ಬರನ್ನು ಕಣಕ್ಕಿಳಿಸುವ ಪ್ರಸ್ತಾವ ಬಿಜೆಪಿ ಮುಂದಿತ್ತು. ವಯಸ್ಸಿನ ಕಾರಣದಿಂದ ಅವರಿಗೆ ಟಿಕೆಟ್ ನಿರಾಕರಿಸುವ ಕುರಿತು ಪಕ್ಷದಲ್ಲಿ ಚರ್ಚೆ ನಡೆದಿತ್ತು. ಕೊನೆ ಗಳಿಗೆಯಲ್ಲಿ ಅವರನ್ನೇ ನಾಲ್ಕನೇ ಬಾರಿ ಕಣಕ್ಕಿಳಿಸುವ ತೀರ್ಮಾನ ಮಾಡಲಾಯಿತು. ಎರಡು ಅವಧಿಗೆ ಶಾಸಕರಾಗಿದ್ದ ರಾಜು ಆಲಗೂರ ಕಾಂಗ್ರೆಸ್ ಹುರಿಯಾಳು. ಪಕ್ಷದ ಅಭ್ಯರ್ಥಿಗೆ ಗೆಲುವು ತಂದುಕೊಡಲೇಬೇಕಾದ ಹೊಣೆ ಸಚಿವ ಎಂ.ಬಿ. ಪಾಟೀಲ ಅವರ ಹೆಗಲೇರಿದೆ. ಬಿಜೆಪಿ ನಾಯಕರಿಗೂ ವಿಜಯಪುರ ಕ್ಷೇತ್ರ ಪ್ರತಿಷ್ಠೆಯ ಕಣ. ಬೀಗರಾದ ಜಿಗಜಿಣಗಿ ಅವರನ್ನು ಗೆಲ್ಲಿಸಿಕೊಳ್ಳಲು ಮಾಜಿ ಸಚಿವ ಗೋವಿಂದ ಕಾರಜೋಳ ಬೆವರು ಹರಿಸಿದ್ದಾರೆ.

ದಾವಣಗೆರೆ



ಹಾಲಿ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಪತ್ನಿ ಗಾಯತ್ರಿ ಮತ್ತು ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರ ಪತ್ನಿ ಡಾ. ಪ್ರಭಾ ಅವರ ಸ್ಪರ್ಧೆಯಿಂದ ದಾವಣಗೆರೆ ಕ್ಷೇತ್ರ ರಾಜ್ಯದಲ್ಲಿ ತೀವ್ರ ಕುತೂಹಲ ಕೆರಳಿಸಿರುವ ಕ್ಷೇತ್ರಗಳಲ್ಲಿ ಒಂದಾಗಿದೆ. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಜಿ.ಬಿ. ವಿನಯಕುಮಾರ್ ಪಕ್ಷೇತರರಾಗಿ ಕಣದಲ್ಲಿರುವುದು ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿದೆ. ಗಾಯತ್ರಿ ಅವರಿಗೆ ಟಿಕೆಟ್ ಕೊಟ್ಟಿರುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದ ಬಿಜೆಪಿಯ ಎಂ.ಪಿ. ರೇಣುಕಾಚಾರ್ಯ ಸೇರಿದಂತೆ ಹಲವರನ್ನು ಪಕ್ಷದ ವರಿಷ್ಠರು ಮನವೊಲಿಸಿದ್ದಾರೆ. ದಾವಣಗೆರೆ ದೀರ್ಘ ಕಾಲದಿಂದಲೂ ಶಾಮನೂರು ಮತ್ತು ಸಿದ್ದೇಶ್ವರ ಕುಟುಂಬಗಳ ರಾಜಕೀಯ ಜಿದ್ದಾಜಿದ್ದಿನ ಕಣ. ಈ ಬಾರಿ ಎರಡೂ ಕುಟುಂಬಗಳ ಮಹಿಳೆಯರು ಚುನಾವಣೆಯಲ್ಲಿ ಮುಖಾಮುಖಿ ಆಗಿದ್ದಾರೆ. ಇದರಿಂದಾಗಿ ಹಣಾಹಣಿಯ ತೀವ್ರತೆ ತುಸು ಜೋರಾಗಿಯೇ ಇದೆ. ವೀರಶೈವ–ಲಿಂಗಾಯತರ ನಾಯಕನೆಂದು ಗುರುತಿಸಿಕೊಳ್ಳುತ್ತಿರುವ ಶಾಮನೂರು ಶಿವಶಂಕರಪ್ಪ ಅವರಿಗೆ ವರ್ಚಸ್ಸು ಉಳಿಸಿಕೊಳ್ಳಲು ಸೊಸೆಯ ಗೆಲುವು ಮುಖ್ಯ.

‘ಕಾಂಗ್ರೆಸ್‌ನಿಂದ ಮತದಾರರ ಖರೀದಿ’

ಪ್ರಜಾವಾಣಿ ವಾರ್ತೆ



ವಿಶ್ವೇಶ್ವರ ಹೆಗಡೆ

ಶಿರಸಿ: ‘ಉತ್ತರ ಕನ್ನಡ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕಿತ್ತೂರಿನ ಕಾಂಗ್ರೆಸ್ ಶಾಸಕ ಬಾಬಾಸಾಹೇಬ್ ಪಾಟೀಲ ಅವರು ಗ್ಯಾರಂಟಿ ಕಾರ್ಡ್‌ಗಳ ಜತೆ ಮತಕ್ಕಾಗಿ ಹಣ ಹಂಚುತ್ತಿರುವ ಪ್ರಕರಣ ಬೆಳಕಿಗೆ ಬಂದಿದ್ದು, ಚುನಾವಣಾ ಆಯೋಗಕ್ಕೆ ದೂರು ನೀಡಲಾಗಿದೆ’ ಎಂದು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

‘ಕಾಂಗ್ರೆಸ್ ಸದಾಕಾಲ ಚುನಾವಣಾ ಬಾಹಿರ ಕೃತ್ಯದಲ್ಲಿ ತೊಡಗುತ್ತದೆ. ಇದಕ್ಕೆ ಸಾಕ್ಷ್ಯ ಎಂಬಂತೆ ಕಿತ್ತೂರಿನ ನೇಸರಗಿ ಭಾಗದಲ್ಲಿ ಮತದಾರರಿಗೆ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ಜೊತೆಗೆ ಹಣವನ್ನೂ ಹಂಚಲಾಗಿದೆ. ಈ ಕುರಿತ ವಿಡಿಯೊ ಕೂಡ ಲಭ್ಯವಿದೆ. ಸೋಲಿನ ಹತಾಶೆಯಿಂದ ಮತಗಳ ಖರೀದಿಗೆ ಕಾಂಗ್ರೆಸ್ ಮುಂದಾಗಿರುವುದು ಖಂಡನೀಯ’ ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಅಕ್ರಮ ತಡೆಯಲ್ಲಿ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಲೋಕಸಭಾ ಚುನಾವಣೆಯಲ್ಲಿ ನಗದು, ಮದ್ಯ, ಮಾದಕ ವಸ್ತು, ಚಿನ್ನಾಭರಣ, ಉಚಿತ ಉಡುಗೊರೆಗಳ ಮೂಲಕ ಮತದಾರರಿಗೆ ಆಮಿಷ ಒಡ್ಡುವುದನ್ನು ತಡೆಯಲು ನಡೆಸಿದ ಕಾರ್ಯಾಚರಣೆಯಲ್ಲಿ ₹452.98 ಕೋಟಿ ಮೌಲ್ಯದ ಸ್ವತ್ತುಗಳ ವಶದೊಂದಿಗೆ ದಾಖಲೆ ನಿರ್ಮಾಣವಾಗಿದೆ.


2019ರ ಲೋಕಸಭಾ ಚುನಾವಣೆಯಲ್ಲಿ ಒಟ್ಟು ₹88 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಬಾರಿ ಅದಕ್ಕಿಂತಲೂ ಹೆಚ್ಚು ಮೊತ್ತದ ನಗದನ್ನೇ ವಶಕ್ಕೆ ಪಡೆಯಲಾಗಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ವಶಪಡಿಸಿಕೊಂಡ ಸ್ವತ್ತುಗಳ ಮೊತ್ತ ₹384 ಕೋಟಿಯಷ್ಟಿತ್ತು.

ಮದ್ಯ ಮತ್ತು ಮಾದಕವಸ್ತುಗಳ ವಶದಲ್ಲಿ ಭಾರಿ ದಾಖಲೆ ನಿರ್ಮಾಣವಾಗಿದೆ. ಅಬಕಾರಿ ಕಾಯ್ದೆಯಡಿ 34,731 ಪ್ರಕರಣಗಳನ್ನು ದಾಖಲಿಸಲಾಗಿದೆ. ಘೋರ ಅಪರಾಧ ಕೃತ್ಯ ಎಸಗಿದ ಆರೋಪದ ಮೇಲೆ ಅಬಕಾರಿ ಕಾಯ್ದೆಯಡಿ 3,400 ಪ್ರಕರಣಗಳನ್ನು ದಾಖಲು ಮಾಡಲಾಗಿದೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಹೊರಗುಳಿದ ಸಂಸದರ ನಡೆ?

ಕಣದಲ್ಲಿರುವ ಅಭ್ಯರ್ಥಿಗಳ ಸಂಖ್ಯೆ

227 ಒಟ್ಟು ಅಭ್ಯರ್ಥಿಗಳು | **206** ಪುರುಷರು | **21** ಮಹಿಳೆಯರು



ಜಿ.ಎಂ. ಸಿದ್ದೇಶ್ವರ, ದಾವಣಗೆರೆ
ತಮಗೆ ಟಿಕೆಟ್ ನಿರಾಕರಿಸಿದ್ದರೂ, ಪತ್ನಿಯನ್ನೇ ಕ್ಷೇತ್ರದಲ್ಲಿ ಕಣಕ್ಕಿಳಿಸಿರುವುದರಿಂದ ಚುನಾವಣೆಯಲ್ಲಿ ಸಕ್ರಿಯ. ಪತ್ನಿಯನ್ನು ಗೆಲುವಿನ ದಡ ಮುಟ್ಟಿಸಬೇಕೆಂದು ಅವಿರತ ಶ್ರಮ ಹಾಕಿದ್ದಾರೆ



ಶಿವಕುಮಾರ್ ಉದಾಸಿ, ಹಾವೇರಿ
ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಣೆ. ಆರಂಭದಿಂದ ಕೊನೆಯ ದಿನದವರೆಗೆ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಪರ ಪ್ರಚಾರದಲ್ಲಿ ಸಕ್ರಿಯ



ಕರಡಿ ಸಂಗಣ್ಣ, ಕೊಪ್ಪಳ
ಬಿಜೆಪಿ ಟಿಕೆಟ್ ನಿರಾಕರಿಸಿದ್ದರಿಂದ ಬಂಡಾಯ ಎದ್ದು, ಪಕ್ಷ ತ್ಯಜಿಸಿ ಕಾಂಗ್ರೆಸ್ ಸೇರ್ಪಡೆ. ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರದಲ್ಲಿ ಪೂರ್ಣ ಸಕ್ರಿಯ



ಮಂಗಲಾ ಅಂಗಡಿ, ಬೆಳಗಾವಿ
ತಮಗೆ ಟಿಕೆಟ್ ನಿರಾಕರಿಸಿದ್ದರೂ ಬೀಗರಾದ ಜಗದೀಶ ಶೆಟ್ಟರ್ ಅವರನ್ನೇ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಸಿರುವುದರಿಂದ ಪ್ರಚಾರದಲ್ಲಿ ಸಕ್ರಿಯೆ



ಅನಂತಕುಮಾರ್ ಹೆಗಡೆ, ಉತ್ತರ ಕನ್ನಡ
ಟಿಕೆಟ್ ನಿರಾಕರಿಸಿದ ಬಳಿಕ ಬಿಜೆಪಿಯಿಂದ ಸಂಪೂರ್ಣ ದೂರ. ಚುನಾವಣಾ ಪ್ರಚಾರದ ಯಾವುದೇ ಕೆಲಸಗಳಲ್ಲಿ ಭಾಗಿಯಾಗಿಲ್ಲ



ವೈ.ದೇವೇಂದ್ರಪ್ಪ, ಬಳ್ಳಾರಿ
ಟಿಕೆಟ್ ನಿರಾಕರಣೆ ಬಳಿಕ ಪಕ್ಷದ ಪರ ಪ್ರಚಾರದಲ್ಲಿ ಭಾಗಿಯಾಗಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ಸಭೆಯಲ್ಲಷ್ಟೇ ಭಾಗಿ

ಮತ ಆಮಿಷ: ಆಯೋಗದ ವಶ

₹98.89 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹82.01 ಕೋಟಿ
ಮದ್ಯ	₹179.39 ಕೋಟಿ (1.47 ಕೋಟಿ ಲೀ)
ಮಾದಕವಸ್ತು	₹11.96 ಕೋಟಿ (658.82 ಕೆ.ಜಿ.)
ಚಿನ್ನ	₹78.33 ಕೋಟಿ (139.69 ಕೆ.ಜಿ.)
ಬೆಳ್ಳಿ	₹1.18 ಕೋಟಿ (302.37 ಕೆ.ಜಿ.)

ಗಣ್ಯರಿಗಿಲ್ಲಿ ಗೆಲುವು ಏಕೆ ಮುಖ್ಯ?


ಪ್ರಜಾವಾಣಿ ವಾರ್ತೆ

ಮಲ್ಲಿಕಾರ್ಜುನ ಖರ್ಗೆ



ಇಡೀ ದೇಶದಲ್ಲಿ ಕಾಂಗ್ರೆಸ್ ಮುನ್ನಡೆಸುತ್ತಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರಿಗೆ ತಾವು ಬಹುಕಾಲ ಪ್ರತಿನಿಧಿಸಿದ್ದ ತವರು ಕ್ಷೇತ್ರ ಕಲಬುರಗಿಯಲ್ಲಿ ತಮ್ಮ ಅಳಿಯ ರಾಧಾಕೃಷ್ಣ ದೊಡ್ಡಮನಿಯವರನ್ನು ಗೆಲ್ಲಿಸಿಕೊಂಡು, ತಮ್ಮ ಪ್ರಭಾವ ಇನ್ನೂ ಮಾಸಿಲ್ಲ ಎಂದು ತೋರಿಸಬೇಕಾದ ಜರೂರು ಇದೆ. ಜತೆಗೆ, 14 ಕ್ಷೇತ್ರಗಳೂ ಪ್ರಮುಖವಾದರೂ ಕಲ್ಯಾಣ ಕರ್ನಾಟಕದ ಕನಿಷ್ಠ ಐದು ಕ್ಷೇತ್ರಗಳನ್ನು ಕಾಂಗ್ರೆಸ್ ತೆಕ್ಕೆಗೆ ತಂದುಕೊಡುವುದು ಪ್ರತಿಷ್ಠೆಯಾಗಿದೆ. ಅವರ ಮಗ, ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ತಮ್ಮ ಪ್ರಭಾವ ಎಷ್ಟಿದೆ ಎಂದು ನಿರೂಪಿಸುವ ಅನಿವಾರ್ಯವೂ ಎದುರಾಗಿದೆ.

ಸಿದ್ದರಾಮಯ್ಯ



ವಿಧಾನಸಭೆ ಚುನಾವಣೆಯಲ್ಲಿ ಭಾರಿ ಬಹುಮತ ಪಡೆದು, ಮುಖ್ಯಮಂತ್ರಿ ಗಾದಿಗೇರಿರುವ ಸಿದ್ದರಾಮಯ್ಯನವರಿಗೆ ಹಳೆ ಮೈಸೂರು ಭಾಗ ಮಾತ್ರವಲ್ಲದೇ, ಉತ್ತರ ಕರ್ನಾಟಕ ಭಾಗದಲ್ಲೂ ತಮ್ಮ ಪ್ರಭಾವಳಿ ಬಲವಾಗಿಯೇ ಇದು ಎಂದು ತೋರಿಸಬೇಕಾಗಿದೆ. ‘ಅಹಿಂದ’ ಸಮುದಾಯದ ನಾಯಕ ಎಂದು ಕರೆಸಿಕೊಳ್ಳುವ ಅವರಿಗೆ, ಈ ಸಮುದಾಯದವರ ಮತಬಾಹುಳ್ಯ ಇರುವ ಬಹುತೇಕ ಕ್ಷೇತ್ರಗಳಲ್ಲಿ ಕಾಂಗ್ರೆಸ್, ಹುರಿಯಾಳುಗಳನ್ನು ಗೆಲ್ಲಿಸಿ ಲೋಕಸಭೆಗೆ ಕಳುಹಿಸುವ ಸವಾಲು ಇದೆ. ಅದರಲ್ಲೂ ದಾವಣಗೆರೆ, ಕೊಪ್ಪಳ, ಧಾರವಾಡ ಹಾಗೂ ಹಾವೇರಿ ಕ್ಷೇತ್ರಗಳಲ್ಲಿ ಕುರುಬ ಸಮುದಾಯದ ಮತಗಳು ನಿರ್ಣಾಯಕ ಸ್ವರೂಪದಲ್ಲಿದ್ದು, ಕೈ ಅರಳಿಸುವ–ಕಮಲ ಬಾಡಿಸುವ ಶಕ್ತಿಯನ್ನು ಅವರು ಪ್ರದರ್ಶಿಸಬೇಕಿದೆ.

ಡಿ.ಕೆ. ಶಿವಕುಮಾರ್



ಕೆಪಿಸಿಸಿ ಅಧ್ಯಕ್ಷರಾಗಿರುವ ಡಿ.ಕೆ. ಶಿವಕುಮಾರ್ ಅವರಿಗೆ ಎಲ್ಲ 14 ಕ್ಷೇತ್ರಗಳಲ್ಲಿಯೂ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವುದು, ಬಳಿಕ ತಮ್ಮ ಬಾಹುಬಲ ಉತ್ತರಕ್ಕೂ ವಿಸ್ತರಿಸಿದೆ ಎಂಬುದನ್ನು ಸಾಬೀತುಪಡಿಸಬೇಕಾದ ಅನಿವಾರ್ಯವಿದೆ. ಜಾತಿ ರಾಜಕಾರಣ ಲೆಕ್ಕದಲ್ಲಿ ಶಿವಮೊಗ್ಗ ಬಿಟ್ಟರೆ, ಶಿವಕುಮಾರ್ ಪ್ರಭಾವಿಸುವ ಕ್ಷೇತ್ರಗಳು ಎರಡನೇ ಹಂತದಲ್ಲಿ ಇಲ್ಲ. ಅಧ್ಯಕ್ಷರಾಗಿರುವ ಕಾರಣಕ್ಕೆ ಎಲ್ಲ ಕ್ಷೇತ್ರಗಳೂ ಪ್ರಮುಖ. ಅದರಲ್ಲೂ ಶಿವಮೊಗ್ಗ, ತಮ್ಮ ಆಪ್ತ ಬಣದಲ್ಲಿ ಗುರುತಿಸಿಕೊಂಡಿರುವ ಲಕ್ಷ್ಮೀ ಹೆಬ್ಬಾಳಕರ ಪುತ್ರ ಮೃಣಾಲ್ ಸ್ಪರ್ಧಿಸಿರುವ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಗೆಲುವು ಕೊಡಿಸುವುದು ಅವರಿಗೆ ಸವಾಲಾಗಿದೆ.

ಸತೀಶ ಜಾರಕಿಹೊಳಿ



ರಾಜಕಾರಣದಲ್ಲಿ ದೊಡ್ಡ ಆಕಾಂಕ್ಷೆ ಇಟ್ಟುಕೊಂಡಿರುವ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರಿಗೆ ಈ ಚುನಾವಣೆ ತಮ್ಮ ಸಾಮರ್ಥ್ಯ ಹಾಗೂ ರಾಜಕೀಯ ಚಾಣಾಕ್ಷತನವನ್ನು ದೃಢಪಡಿಸುವ ಅಗ್ನಿಪರೀಕ್ಷೆ. ಲೋಕಸಭೆ ಉಪಚುನಾವಣೆಯಲ್ಲಿ ಬೆಳಗಾವಿಯಲ್ಲಿ ಸ್ಪರ್ಧಿಸಿದ್ದ ಅವರು, ಅಂದು ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದರೂ ಕೇವಲ ಐದು ಸಾವಿರ ಮತಗಳಿಂದ ಸೋತಿದ್ದರು. ಈ ಬಾರಿ ಕಾಂಗ್ರೆಸ್ ಸರ್ಕಾರ ಇದ್ದು, ಶಾಸಕರ ಸಂಖ್ಯೆಯೂ ಹೆಚ್ಚಾಗಿಯೇ ಇದೆ. ತಮ್ಮ ಪ್ರಭಾವ ಇರುವ ಬೆಳಗಾವಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ, ಚಿಕ್ಕೋಡಿಯಲ್ಲಿ ತಮ್ಮ ಪುತ್ರಿ ಪ್ರಿಯಾಂಕಾ ಅವರನ್ನು ಗೆಲ್ಲಿಸುವುದು ಅವರ ಶಕ್ತಿಗೆ ಒಡ್ಡಿದ ಪರೀಕ್ಷೆ. ಅದರ ಜತೆಗೆ, ಎರಡನೇ ಹಂತದ ಬಹುತೇಕ ಕ್ಷೇತ್ರಗಳಲ್ಲಿ ವಾಲ್ಮೀಕಿ ಸಮುದಾಯದ ಮತಗಳು ಗೆಲುವಿನಲ್ಲಿ ನಿರ್ಣಾಯಕವಾಗಿವೆ. ಬಳ್ಳಾರಿ, ದಾವಣಗೆರೆ, ರಾಯಚೂರು, ಕೊಪ್ಪಳಗಳಲ್ಲಂತೂ ಪ್ರಭಾವಿಯಾಗಿಯೇ ಇವೆ. ಈ ಕ್ಷೇತ್ರಗಳಲ್ಲಿಯೂ ಅವರು ಪಕ್ಷವನ್ನು ಗೆಲ್ಲಿಸಬೇಕಾಗಿದೆ.

ಎಚ್.ಡಿ. ಕುಮಾರಸ್ವಾಮಿ



ಎರಡನೇ ಹಂತದಲ್ಲಿ ಮತದಾನ ನಡೆಯುತ್ತಿರುವ 14 ಲೋಕಸಭಾ ಕ್ಷೇತ್ರಗಳಲ್ಲಿ ಜೆಡಿಎಸ್ ಪ್ರಾಬಲ್ಯದ ಕ್ಷೇತ್ರಗಳು ಇಲ್ಲ. ಆದರೂ, ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ ಜೆಡಿಎಸ್ ಪ್ರಬಲ ನೆಲೆ ಹೊಂದಿತ್ತು. ಯಾವುದೇ ಕ್ಷೇತ್ರದಲ್ಲಿಯೂ ಜೆಡಿಎಸ್‌ನ ಅಭ್ಯರ್ಥಿಗಳಿಲ್ಲ. ಇಲ್ಲಿ ಜೆಡಿಎಸ್‌ನ ಮತಗಳನ್ನು ಸಂಪೂರ್ಣವಾಗಿ ಬಿಜೆಪಿ ಅಭ್ಯರ್ಥಿಗಳಿಗೆ ವರ್ಗಾವಣೆಯಾಗುವಂತೆ ಮಾಡಿ, ಮಿತ್ರಪಕ್ಷದ ಗೆಲುವನ್ನು ಖಾತರಿಪಡಿಸಬೇಕಿದೆ. ಆ ಮೂಲಕ ಬಿಜೆಪಿ–ಜೆಡಿಎಸ್ ಮೈತ್ರಿಗೆ ಧಕ್ಕೆಯಾಗದಂತೆ ರಕ್ಷಿಸಬೇಕಾದ ಜವಾಬ್ದಾರಿ ಕೂಡ ಕುಮಾರಸ್ವಾಮಿ ಅವರ ಮೇಲಿದೆ. ಎಚ್.ಡಿ. ದೇವೇಗೌಡರ ಕುಟುಂಬದ ರಾಜಕೀಯ ಪ್ರಭಾವ ಹಳೆ ಮೈಸೂರು ಭಾಗಕ್ಕೆ ಸೀಮಿತವಾಗಿಲ್ಲ ಎಂಬುದನ್ನು ಸಾಬೀಪಡಿಸುವ ಸವಾಲು ಕೂಡ ಕುಮಾರಸ್ವಾಮಿ ಮೇಲಿದೆ.

ಬಿ.ಎಸ್. ಯಡಿಯೂರಪ್ಪ ಮತ್ತು ವಿಜಯೇಂದ್ರ



14 ಕ್ಷೇತ್ರಗಳೂ ಲಿಂಗಾಯತ ಸಮುದಾಯದ ಪ್ರಭಾವ ಇರುವ ಕ್ಷೇತ್ರಗಳಾಗಿದ್ದು, ಲಿಂಗಾಯತರ ನಾಯಕ ಎನಿಸಿಕೊಂಡಿರುವ ಬಿ.ಎಸ್. ಯಡಿಯೂರಪ್ಪ ಅವರಿಗೆ ಪ್ರತಿಷ್ಠೆಯಾಗಿವೆ. ತಮ್ಮ ಮಗ ಬಿ.ವೈ. ರಾಘವೇಂದ್ರ ಕಣಕ್ಕೆ ಇಳಿದಿರುವ ಶಿವಮೊಗ್ಗ ಕ್ಷೇತ್ರದಲ್ಲಿ ಲೋಕಸಭೆಯ ಈ ಹಿಂದಿನ ಮೂರು ಚುನಾವಣೆಗಳಿಗೆ ಹೋಲಿಸಿದರೆ ಈ ಬಾರಿ ತೀವ್ರ ಪೈಪೋಟಿ ಇದೆ. ಮಗನನ್ನು ಗೆಲ್ಲಿಸಿಕೊಳ್ಳುವ ಸವಾಲು ಒಂದೆಡೆಯಾದರೆ, ಬಿಜೆಪಿ ತೆಕ್ಕೆಯಲ್ಲೇ ಇರುವ ಅಷ್ಟೂ ಕ್ಷೇತ್ರಗಳಲ್ಲಿ ಕಮಲ ಪತಾಕೆ ಹಾರುವಂತೆ ನೋಡಿಕೊಳ್ಳುವುದು ತಮ್ಮ ಎರಡನೇ ಮಗ ಬಿ.ವೈ. ವಿಜಯೇಂದ್ರ ಅವರ ಅಧ್ಯಕ್ಷ ಪಟ್ಟ ಉಳಿಯಲು ಅನಿವಾರ್ಯ. ಅನೇಕ ಕ್ಷೇತ್ರಗಳಲ್ಲಿ ಪಕ್ಷದೊಳಗೆ ಭಿನ್ನಮತ ಇದ್ದು, ಅವೆಲ್ಲವೂ ಮೇಲ್ನೋಟಕ್ಕೆ ಶಮನವಾದಂತೆ ಅನಿಸಿದರೂ ಒಳಪಟ್ಟುಗಳನ್ನು ನಿವಾರಿಸಿಕೊಳ್ಳುವುದು ಯಡಿಯೂರಪ್ಪ ಮುಂದಿರುವ ಹೊಣೆಯೂ ಆಗಿದೆ.

ಪ್ರಲ್ಹಾದ ಜೋಶಿ




ಚುನಾವಣೆಯಲ್ಲಿ ಮತ್ತೊಮ್ಮೆ ಗೆಲುವು ಬಯಸಿರುವ ಸಂಸದರ ಪೈಕಿ, ಕೇಂದ್ರ ಸಚಿವರಾಗಿ ಚುನಾವಣೆ ಎದುರಿಸುತ್ತಿರುವುದು ಧಾರವಾಡದ ಪ್ರಲ್ಹಾದ ಜೋಶಿ ಹಾಗೂ ಬೀದರ್‌ನ ಭಗವಂತ ಖೂಬಾ. ಸಚಿವರಾಗಿ ಎಷ್ಟು ಸಾಧನೆ ಮಾಡಿದ್ದಾರೆ ಎಂಬುದಕ್ಕಿಂತ, ಕ್ಷೇತ್ರಕ್ಕೆ ಎಷ್ಟು ಕೊಡುಗೆ ನೀಡಿದ್ದಾರೆ; ಮೋದಿ ನಾಮಬಲ ಎಷ್ಟು ಕೆಲಸ ಮಾಡಲಿದೆ ಎಂಬುದು ಇಬ್ಬರ ಭವಿಷ್ಯವನ್ನು ನಿರ್ಧರಿಸಲಿದೆ. ಲಿಂಗಾಯತರ ಮತಗಳನ್ನೇ ನೆಚ್ಚಿಕೊಂಡು ಗೆಲ್ಲುತ್ತಿದ್ದ ಜೋಶಿಯವರಿಗೆ ಈ ಬಾರಿ, ದಿಂಗಾಲೇಶ್ವರ ಸ್ವಾಮೀಜಿ ನೇತೃತ್ವದ ಸ್ವಾಮೀಜಿಗಳ ಗುಂಪೊಂದು ಸಡ್ಡುಹೊಡೆದಿದೆ. ಅಷ್ಟು ದೊಡ್ಡ ಮಟ್ಟದ ಪ್ರಭಾವ ಬೀರದೇ ಇದ್ದರೂ, ಲಿಂಗಾಯತರಿಗೆ ಅನ್ಯಾಯವಾಗಿದೆ ಎಂಬ ಸಂಕಥನವನ್ನು ಹೆಣೆದಿರುವುದು ಜೋಶಿಯವರ ಗೆಲುವಿನ ಹಾದಿಯಲ್ಲಿನ ಕಲ್ಲುಮುಳ್ಳುಗಳಾಗಿವೆ.

ಬಸವರಾಜ ಬೊಮ್ಮಾಯಿ



ಶಿಗ್ಗಾವಿ ಕ್ಷೇತ್ರದ ಶಾಸಕ ಬಸವರಾಜ ಬೊಮ್ಮಾಯಿ, ಕೇಂದ್ರದಲ್ಲಿ ಮತ್ತೆ ಬಿಜೆಪಿ ಸರ್ಕಾರ ಬಂದರೆ ಸಚಿವರಾಗುವ ಉಮೇದಿನಲ್ಲಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ್ದಾರೆ. ಪರಿಷತ್ ಹಾಗೂ ವಿಧಾನಸಭೆ ಕಂಡಿರುವ, ಸಚಿವರಾಗಿ ಹಲವು ಖಾತೆ ನಿಭಾಯಿಸಿ, ಮುಖ್ಯಮಂತ್ರಿಯಾಗಿಯೂ ಕಾರ್ಯನಿರ್ವಹಿಸಿದ ಬೊಮ್ಮಾಯಿ, ಕ್ಷೇತ್ರ ಗೆದ್ದು, ಮೋದಿಯವರನ್ನು ಗೆಲ್ಲಿಸಬೇಕಿದೆ. ಪರಿಷತ್ ಸದಸ್ಯರಾಗಿದ್ದಾಗಿನಿಂದಲೂ ಹಾವೇರಿ– ಗದಗ ಓಡಾಡಿ ಗೊತ್ತಿರುವ ಬೊಮ್ಮಾಯಿ, ನಾಲ್ಕನೇ ಬಾರಿ ಶಾಸಕರಾದವರು. ಮುಖ್ಯಮಂತ್ರಿಯಾಗಿ ಎದುರಿಸಿದ ಚುನಾವಣೆಯಲ್ಲಿ ತಮ್ಮ ಪಕ್ಷವನ್ನು ದಡ ಸೇರಿಸಲು ಆಗಿರಲಿಲ್ಲ. ಕಾಂಗ್ರೆಸ್‌ನ ಗ್ಯಾರಂಟಿ ಹಾಗೂ ಶಾಸಕರ ಬಲವನ್ನಷ್ಟೇ ಆಶ್ರಯಿಸಿರುವ ಎದುರಾಳಿ, ಆನಂದಸ್ವಾಮಿ ಗಡ್ಡದೇವರ ಮಠ ಅವರ ಮುಂದೆ, ತಮ್ಮ ಗ್ಯಾರಂಟಿಯನ್ನೇ ಬೊಮ್ಮಾಯಿ ಪಣಕ್ಕಿಟ್ಟಿದ್ದಾರೆ.

ಜಗದೀಶ ಶೆಟ್ಟರ್



ಕಳೆದ ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ಸಿಗಲಿಲ್ಲ ಎಂಬ ಕಾರಣಕ್ಕೆ ಜಗದೀಶ ಶೆಟ್ಟರ್ ಸಿಟ್ಟಿಗೆದ್ದು ಬಿಜೆಪಿಗೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಿದರು. ಧಾರವಾಡ ದಕ್ಷಿಣ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್‌ನಿಂದ ಸ್ಪರ್ಧಿಸಿ ಸೋತರು. ಇದೀಗ ಲೋಕಸಭೆ ಚುನಾವಣೆ ಘೋಷಣೆ ಆಗುತ್ತಿದ್ದಂತೆಯೇ ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿ ಬೆಳಗಾವಿ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. ಈ ಚುನಾವಣೆಯ ಗೆಲುವು ಅವರ ರಾಜಕೀಯ ಅಳಿವು ಉಳಿವಿನ ಪ್ರಶ್ನೆ. ಸಚಿವೆ ಲಕ್ಷ್ಮೀ ಹೆಬ್ಬಾಳಕರ ಪುತ್ರ ಮೃಣಾಲ್ ಅವರು ಶೆಟ್ಟರ್‌ಗೆ ಪೈಪೋಟಿ ನೀಡುತ್ತಿದ್ದಾರೆ. ಸದ್ಯದ ಮಟ್ಟಿಗೆ ಲಕ್ಷ್ಮೀ ಅತ್ಯಂತ ಪ್ರಭಾವಿ ರಾಜಕಾರಣಿ. ಡಿ.ಕೆ.ಶಿವಕುಮಾರ್ ಕೂಡಾ ಮೃಣಾಲ್ ಗೆಲುವಿಗೆ ಶ್ರಮಿಸುತ್ತಿದ್ದಾರೆ. ಬೆಳಗಾವಿಯಲ್ಲಿ ರಾಜಕೀಯವಾಗಿ ತಮ್ಮ ಶಕ್ತಿ ಸಾಮರ್ಥ್ಯ ಪ್ರದರ್ಶನಕ್ಕೆ ಹೆಬ್ಬಾಳಕರ ಅವರಿಗೆ ಈ ಚುನಾವಣೆ ಮುಖ್ಯವಾಗಿದೆ.

ಸ್ಟಾರ್ ಪ್ರಚಾರಕರ ಓಡಾಟ

ಬಿಜೆಪಿ



ಪ್ರಧಾನಿ ನರೇಂದ್ರ ಮೋದಿ
• ಶಿರಸಿ • ಬೆಳಗಾವಿ • ಬಳ್ಳಾರಿ • ಬಾಗಲಕೋಟೆ • ದಾವಣಗೆರೆ • ಕಲಬುರಗಿ



ಅಮಿತ್ ಶಾ, ಗೃಹ ಸಚಿವ
• ಹಾವೇರಿ • ಹುಬ್ಬಳ್ಳಿ–ಧಾರವಾಡ • ಚಿಕ್ಕೋಡಿ



ಜೆ.ಪಿ.ನಡ್ಡಾ, ಬಿಜೆಪಿ ಅಧ್ಯಕ್ಷ
• ಶಿವಮೊಗ್ಗ • ಹಾವೇರಿ • ಕಲಬುರಗಿ




ಅಣ್ಣಾಮಲೈ, ತಮಿಳುನಾಡು, ಬಿಜೆಪಿ ಅಧ್ಯಕ್ಷ
• ಹುಬ್ಬಳ್ಳಿ • ಬೆಳಗಾವಿ • ಕಲಬುರಗಿ • ಬಾಗಲಕೋಟೆ • ವಿಜಯಪುರ • ಹಾವೇರಿ



ಪ್ರಮೋದ್ ಸಾವಂತ್
ಗೋವಾ ಮುಖ್ಯಮಂತ್ರಿ
• ಶಿರಸಿ • ಕಾರವಾರ • ಬೈಂದೂರು


ಕಾಂಗ್ರೆಸ್



ರಾಹುಲ್ ಗಾಂಧಿ (ಎಐಸಿಸಿ ಮಾಜಿ ಅಧ್ಯಕ್ಷ)
• ಬಳ್ಳಾರಿ • ಶಿವಮೊಗ್ಗ • ರಾಯಚೂರು



ಪ್ರಿಯಾಂಕಾ ಗಾಂಧಿ (ಎಐಸಿಸಿ ಪ್ರಧಾನ ಕಾರ್ಯದರ್ಶಿ)
• ದಾವಣಗೆರೆ • ಹಾವೇರಿ • ಕಲಬುರಗಿ



ಮಲ್ಲಿಕಾರ್ಜುನ ಖರ್ಗೆ (ಎಐಸಿಸಿ ಅಧ್ಯಕ್ಷ)
• ಕಲಬುರಗಿ • ರಾಯಚೂರು



ಸಿದ್ದರಾಮಯ್ಯ (ಮುಖ್ಯಮಂತ್ರಿ)
• ಎಲ್ಲ 14 ಕ್ಷೇತ್ರ



ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿ)
• ಎಲ್ಲ 14 ಕ್ಷೇತ್ರ

ಜೆಡಿಎಸ್



ಎಚ್.ಡಿ. ಕುಮಾರಸ್ವಾಮಿ
• ಶಿವಮೊಗ್ಗ • ರಾಯಚೂರು • ಹುಬ್ಬಳ್ಳಿ • ಕಲಬುರಗಿ • ಕೊಪ್ಪಳ



1,300ಕ್ಕೂ ಅಧಿಕ ಅಭ್ಯರ್ಥಿಗಳು; ಅಹಮದಾಬಾದ್‌ನಲ್ಲಿ ಪ್ರಧಾನಿ ಮೋದಿ ಇಂದು ಮತದಾನ

ಮೂರನೇ ಹಂತ: ಕಣದಲ್ಲಿ ಶಾ, ಸಿಂಧಿಯಾ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಮೂರನೇ ಹಂತದ ಮತದಾನ ಮಂಗಳವಾರ ನಡೆಯಲಿದ್ದು, ದೇಶದ 11 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 93 ಕ್ಷೇತ್ರಗಳ ಜನರು ತಮ್ಮ ಹಕ್ಕು ಚಲಾಯಿಸಲಿದ್ದಾರೆ.

120 ಮಹಿಳೆಯರು ಸೇರಿದಂತೆ 1,300ಕ್ಕೂ ಅಧಿಕ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಗೃಹ ಸಚಿವ ಅಮಿತ್ ಶಾ (ಗಾಂಧಿನಗರ) ಮತ್ತು ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ (ಗುನಾ) ಸೇರಿದಂತೆ ಹಲವು ಪ್ರಮುಖರ ಭವಿಷ್ಯ ನಿರ್ಧಾರವಾಗಲಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರು ಗಾಂಧಿನಗರ ಲೋಕಸಭಾ ವ್ಯಾಪ್ತಿಯಲ್ಲಿ ಬರುವ ಅಹಮದಾಬಾದ್ ನಗರದ ಮತಗಟ್ಟೆಯಲ್ಲಿ ಮಂಗಳವಾರ ಮತದಾನ ಮಾಡಲಿದ್ದಾರೆ.

ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿಗಳಾದ ಶಿವರಾಜ್ ಸಿಂಗ್ ಚೌಹಾನ್ ಮತ್ತು ದಿಗ್ವಿಜಯ್ ಸಿಂಗ್ ಅವರು ಇದೇ ಮೊದಲ ಬಾರಿ ಲೋಕಸಭಾ ಚುನಾವಣೆಗೆ ಕಣಕ್ಕಿಳಿದಿದ್ದಾರೆ.


ಚುನಾವಣಾ ಆಯೋಗದ ವೇಳಾಪಟ್ಟಿಯಂತೆ ಮೂರನೇ ಹಂತದಲ್ಲಿ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 94 ಸ್ಥಾನಗಳಿಗೆ ಮತದಾನ ನಡೆಯಬೇಕಿತ್ತು. ಆದರೆ ಗುಜರಾತ್‌ನ ಸೂರತ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಿರುವುದರಿಂದ 93 ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ.

ಜಮ್ಮು ಮತ್ತು ಕಾಶ್ಮೀರದ ಅನಂತನಾಗ್– ರಜೌರಿ ಕ್ಷೇತ್ರದ ಮತದಾನವನ್ನು ಮೇ 7ರ ಬದಲು ಮೇ 25ಕ್ಕೆ ಮುಂದೂಡಲಾಗಿದೆ. ಏ.26 ರಂದು ನಡೆಯಬೇಕಿದ್ದ ಮಧ್ಯಪ್ರದೇಶದ ಬೇತುಲ್ ಕ್ಷೇತ್ರದ ಮತದಾನ ಮಂಗಳವಾರ ನಡೆಯಲಿದೆ.

ಗುಜರಾತ್‌ನ ಎಲ್ಲ ಕ್ಷೇತ್ರಗಳಿಗೂ ಒಂದೇ ಹಂತದಲ್ಲಿ ಮತದಾನ ನಡೆಯಲಿವೆ. ಮೂರನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಬಿಜೆಪಿಯು ಕಳೆದ ಬಾರಿ 70ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದುಕೊಂಡಿತ್ತು.

ಮಹಾರಾಷ್ಟ್ರದ ಬಾರಾಮತಿ ಕ್ಷೇತ್ರದಲ್ಲಿ ಪವಾರ್ ಕುಟುಂಬದ ಸದಸ್ಯರ ನಡುವೆ ಪೈಪೋಟಿ ಏರ್ಪಟ್ಟಿದೆ.

ಮೂರನೇ ಹಂತ



2019ರ ಫಲಿತಾಂಶ

ಎನ್‌ಡಿಎ | ಇಂಡಿಯಾ | ಇತರರು

ಎನ್‌ಡಿಎ 76
- ಬಿಜೆಪಿ 70
- ಮಿತ್ರ ಪಕ್ಷಗಳು 6

ಇಂಡಿಯಾ 9
- ಕಾಂಗ್ರೆಸ್ 3
- ಮಿತ್ರ ಪಕ್ಷಗಳು 6

ಇತರರು 4

ಅಸ್ಸಾಂ	4
ಬಿಹಾರ	5
ಛತ್ತೀಸಗಢ	7
ಗೋವಾ	2
ಗುಜರಾತ್	25
ಕರ್ನಾಟಕ	14
ಮಧ್ಯಪ್ರದೇಶ	9
ಮಹಾರಾಷ್ಟ್ರ	11
ಉತ್ತರ ಪ್ರದೇಶ	10
ಪಶ್ಚಿಮ ಬಂಗಾಳ	4
ದಾದ್ರಾ, ದಮನ್, ದಿಯು	2

ಅಸ್ಸಾಂನಲ್ಲಿ 2023 ರಲ್ಲಿ ಕ್ಷೇತ್ರಗಳ ಮರುವಿಂಗಡಣೆ ಪ್ರಕ್ರಿಯೆ ನಡೆದಿತ್ತು. ಮೂರನೇ ಹಂತದಲ್ಲಿ ಮತದಾನ ನಡೆಯಲಿರುವ ಅಸ್ಸಾಂನ ನಾಲ್ಕು ಕ್ಷೇತ್ರಗಳನ್ನು ಈ ಲೆಕ್ಕಾಚಾರದಲ್ಲಿ ಸೇರಿಸಿಕೊಂಡಿಲ್ಲ.

ಶರದ್ ಪವಾರ್ ಅವರ ಪುತ್ರಿ ಸುಪ್ರಿಯಾ ಸುಳೆ ಅವರು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ವಿರುದ್ಧ ಕಣಕ್ಕಿಳಿದಿದ್ದಾರೆ.

ಮೂರನೇ ಹಂತದ ಮತದಾನವು ಉತ್ತರ ಪ್ರದೇಶದಲ್ಲಿ ಮುಲಾಯಂ ಸಿಂಗ್ ಯಾದವ್ ಅವರ ಕುಟುಂಬಕ್ಕೆ ಮಹತ್ವದ್ದಾಗಿ ಪರಿಣಮಿಸಿದೆ. ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರ ಪತ್ನಿ ಡಿಂಪಲ್ ಯಾದವ್ ಅವರು ಮೈನ್‌ಪುರಿ ಕ್ಷೇತ್ರದಿಂದ ಅಖಾಡಕ್ಕಿಳಿದಿದ್ದಾರೆ.

ಎಸ್‌ಪಿ ಮುಖಂಡ ರಾಮ್‌ಗೋಪಾಲ್ ಯಾದವ್ ಅವರ ಪುತ್ರ ಅಕ್ಷಯ ಯಾದವ್ ಅವರು ಫಿರೋಜಾಬಾದ್ ಕ್ಷೇತ್ರದಿಂದ, ಎಸ್‌ಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶಿವಪಾಲ್ ಯಾದವ್ ಅವರ ಪುತ್ರ ಆದಿತ್ಯ ಯಾದವ್ ಅವರು ಬದಾಂಯೂ ಕ್ಷೇತ್ರದಿಂದ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

ಗುಜರಾತ್‌ನ ಸೂರತ್ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯ ಮುಕೇಶ್ ದಲಾಲ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇಲ್ಲಿನ ಕಾಂಗ್ರೆಸ್ ಅಭ್ಯರ್ಥಿ ನೀಲೇಶ್ ಕುಂಭಾನಿ ಅವರ ನಾಮಪತ್ರ ತಿರಸ್ಕೃತಗೊಂಡಿತ್ತು. ಅದರ ಬೆನ್ನಲ್ಲೇ ಕಣದಲ್ಲಿದ್ದ ಇತರರು ನಾಮಪತ್ರ ವಾಪಸ್ ಪಡೆದಿದ್ದರು.

ಮೂರನೇ ಹಂತ ಮುಕ್ತಾಯಗೊಂಡರೆ 543 ಲೋಕಸಭಾ ಕ್ಷೇತ್ರಗಳಲ್ಲಿ 283 ಕ್ಷೇತ್ರಗಳಲ್ಲಿ ಮತದಾನ ಪ್ರಕ್ರಿಯೆ ಪೂರ್ಣಗೊಂಡಂತೆ ಆಗಲಿದೆ. ಇನ್ನುಳಿದ ನಾಲ್ಕು ಹಂತಗಳು ಕ್ರಮವಾಗಿ ಮೇ 13, ಮೇ 20, ಮೇ 25 ಮತ್ತು ಜೂನ್ 1 ರಂದು ನಡೆಯಲಿವೆ.



ಮತಗಟ್ಟೆಯತ್ತ


ಅಸ್ಸಾಂನ ಕಾಮರೂಪ ಜಿಲ್ಲೆಯಲ್ಲಿ ಸೋಮವಾರ ಚುನಾವಣಾ ಸಿಬ್ಬಂದಿ ಮತದಾನ ಕೇಂದ್ರಗಳತ್ತ ಟ್ರ್ಯಾಕ್ಟರ್‌ನಲ್ಲಿ ತೆರಳಿದರು –ಪಿಟಿಐ ಚಿತ್ರ

ರಾಯ್‌ಬರೇಲಿ, ಅಮೇಠಿ: ಕಾಂಗ್ರೆಸ್ ವೀಕ್ಷಕರಾಗಿ ಬಘೇಲ್, ಗೆಹಲೋತ್

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಪ್ರತಿಷ್ಠಿತ ಕ್ಷೇತ್ರಗಳಾದ ರಾಯ್‌ಬರೇಲಿ ಮತ್ತು ಅಮೇಠಿಗೆ ಮಾಜಿ ಮುಖ್ಯಮಂತ್ರಿಗಳಾದ ಭೂಪೇಶ್ ಬಘೆಲ್ ಮತ್ತು ಅಶೋಕ್ ಗೆಹಲೋತ್ ಅವರನ್ನು ಎಐಸಿಸಿಯ ಹಿರಿಯ ವೀಕ್ಷಕರನ್ನಾಗಿ ನೇಮಕ ಮಾಡಲಾಗಿದೆ.

ವೀಕ್ಷಕರ ನೇಮಕವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಅನುಮೋದಿಸಿದ್ದಾರೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಎರಡೂ ಕ್ಷೇತ್ರಗಳಲ್ಲಿ ಪ್ರಚಾರದ ನೇತೃತ್ವ ವಹಿಸಲಿದ್ದು,



ಭೂಪೇಶ್ ಬಘೆಲ್



ಅಶೋಕ್ ಗೆಹಲೋತ್

ಸೋಮವಾರದಿಂದ ಚುನಾವಣೆ ಮುಗಿಯುವವರೆಗೆ ಕ್ಷೇತ್ರಗಳಲ್ಲಿಯೇ ವಾಸ್ತವ್ಯ ಹೂಡಲಿದ್ದಾರೆ. ಪ್ರಿಯಾಂಕಾ ಅವರು 250–300 ಹಳ್ಳಿಗಳಲ್ಲಿ ಪ್ರಚಾರ ನಡೆಸಲಿದ್ದು, ಎರಡೂ ಕ್ಷೇತ್ರಗಳಿಗೆ ಸಮಾನ ಪ್ರಾಧಾನ್ಯ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಮೇಠಿ ಕ್ಷೇತ್ರದಲ್ಲಿ ಮೊದಲ ಬಾರಿಗೆ ಗಾಂಧಿ ಕುಟುಂಬದ ಹೊರಗಿನವರು (ಕಿಶೋರಿ ಲಾಲ್ ಶರ್ಮಾ) ಸ್ಪರ್ಧಿಸಿದ್ದಾರೆ. ಅವರು ಬಿಜೆಪಿ ಅಭ್ಯರ್ಥಿಯಾಗಿರುವ ಸ್ಮೃತಿ ಇರಾನಿ ವಿರುದ್ಧ ಕಣಕ್ಕಿಳಿದಿದ್ದಾರೆ. ಸ್ಮೃತಿ ಅವರು 2019ರಲ್ಲಿ ಈ ಕ್ಷೇತ್ರದಲ್ಲಿ ರಾಹುಲ್ ಗಾಂಧಿ ಅವರನ್ನು ಮಣಿಸಿದ್ದರು.

ರಾಯ್‌ಬರೇಲಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ರಾಹುಲ್ ಗಾಂಧಿ ಸ್ಪರ್ಧಿಸಿದ್ದು, ದಿನೇಶ್ ಪ್ರತಾಪ್ ಸಿಂಗ್ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. 2019ರಲ್ಲಿ ಸೋನಿಯಾ ಗಾಂಧಿ ವಿರುದ್ಧ ದಿನೇಶ್ ಪ್ರತಾಪ್ ಸಿಂಗ್ ಸೋಲು ಅನುಭವಿಸಿದ್ದರು.

ಸಿಬ್ಬಂದಿಗೆ ಕಿರುಕುಳ: ಶ್ರೀನೆತ್

ನವದೆಹಲಿ (ಪಿಟಿಐ): ಪಕ್ಷದ ಸಾಮಾಜಿಕ ಜಾಲತಾಣ ವಿಭಾಗದಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಆಣತಿಯ ಮೇರೆಗೆ ಪೊಲೀಸರು ಕಿರುಕುಳ ನೀಡಿ ಬೆದರಿಕೆ ಒಡ್ಡಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.


ಅಮಿತ್ ಶಾ ಅವರ ತಿರುಚಿದ ವಿಡಿಯೊ ಅಪ್ಲೋಡ್ ಮಾಡಿದ ಮತ್ತು ಹರಡಿದ ಆರೋಪದ ಮೇಲೆ ದೆಹಲಿ ಪೊಲೀಸರ ವಿಶೇಷ ವಿಭಾಗವು ಕಾಂಗ್ರೆಸ್ ಮಾಧ್ಯಮ ತಂಡದ ರಾಷ್ಟ್ರೀಯ ಸಂಯೋಜಕರನ್ನು ಬಂಧಿಸಿತ್ತು. ಪಕ್ಷದ ರಾಷ್ಟ್ರೀಯ ವಕ್ತಾರರಾದ ಸುಪ್ರಿಯಾ ಶ್ರೀನೆತ್ ಎಐಸಿಸಿ ಕೇಂದ್ರ ಕಚೇರಿಯಲ್ಲಿ ಪತ್ರಿಕಾ ಗೋಷ್ಠಿ ನಡೆಸಿ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದರು.

‘ನರೇಂದ್ರ ಮೋದಿ ಮತ್ತು ಅಮಿತ್ ಶಾ ತಮ್ಮ ಕಣ್ಣಮುಂದೆ ಸೋಲನ್ನು ಕಾಣುತ್ತಿದ್ದಾರೆ. ಹೀಗಾಗಿ, ಅವರ ಸೂಚನೆಯ ಮೇರೆಗೆ ಪಕ್ಷದ ಸಾಮಾಜಿಕ ಜಾಲತಾಣದ ಸಿಬ್ಬಂದಿಗೆ ಕಿರುಕುಳ ನೀಡಲಾಗಿದ್ದು, ಅವರ ಪರಿಕರಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದು ಮೋದಿ ಮತ್ತು ಶಾ ಅವರ ಭಯ ಮತ್ತು ಹೇಡಿತನವನ್ನು ತೋರಿಸುತ್ತದೆ’ ಎಂದು ವಾಗ್ದಾಳಿ ನಡೆಸಿದರು.

ಪಶ್ಚಿಮ ಬಂಗಾಳ, ಬಿಹಾರದಲ್ಲಿ ಶಾ ರ‍್ಯಾಲಿ; ವಿಪಕ್ಷಗಳ ಮೇಲೆ ವಾಗ್ದಾಳಿ

‘ಮತಬ್ಯಾಂಕ್: ಉಗ್ರ ದಾಳಿಗಳ ಬಗ್ಗೆ ಮೌನ’

ದುರ್ಗಾಪುರ/ ಸಮಸ್ತಿಪುರ (ಪಿಟಿಐ): ಕೇಂದ್ರದಲ್ಲಿ ಯುಪಿಎ ಅಧಿಕಾರದ ವೇಳೆ ದೇಶದಲ್ಲಿ ಭಯೋತ್ಪಾದಕ ದಾಳಿಗಳು ನಡೆದಾಗ ತಮ್ಮ ಮತಬ್ಯಾಂಕ್‌ಗೆ ನೋವಾಗಬಹುದು ಎನ್ನುವ ಭಯದಿಂದ ಕಾಂಗ್ರೆಸ್ ಹಾಗೂ ಟಿಎಂಸಿ ಮೌನ ವಹಿಸಿದ್ದವು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದ್ದಾರೆ.



ಅಮಿತ್ ಶಾ

ಪಶ್ಚಿಮ ಬಂಗಾಳದ ಬರ್ಧಮನ್–ದುರ್ಗಾಪುರ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, ‘10 ವರ್ಷಗಳ ಆಡಳಿತದಲ್ಲಿ ಎನ್‌ಡಿಎ ಭಯೋತ್ಪಾದನೆ ಬಗ್ಗೆ ಕಠಿಣ ನಿಲುವು ತಳೆದಿತ್ತು ಮತ್ತು ರಾಷ್ಟ್ರೀಯ ಭದ್ರತೆಯ ವಿಚಾರದಲ್ಲಿ ರಾಜಿ ಮಾಡಿಕೊಂಡಿರಲಿಲ್ಲ. ಆದರೆ, ಟಿಎಂಸಿ ಕೂಡ ಭಾಗವಾಗಿದ್ದ ಯುಪಿಎ ಆಡಳಿತದ ಅವಧಿಯಲ್ಲಿ ಭಯೋತ್ಪಾದನೆ ಬಗ್ಗೆ ಮೃದು ಧೋರಣೆ ಅನುಸರಿಸಲಾಗಿತ್ತು’ ಎಂದು ಟೀಕಿಸಿದರು.

‘ತಮ್ಮ ಮತಬ್ಯಾಂಕ್ ಭದ್ರಪಡಿಸಿಕೊಳ್ಳಲು ಒಳನುಸುಳುವಿಕೆಗೆ ಅವಕಾಶ ನೀಡಿದ ಮಮತಾ ಬ್ಯಾನರ್ಜಿ ಮತ್ತು ಟಿಎಂಸಿಗೆ ನಾಚಿಕೆಯಾಗಬೇಕು’ ಎಂದು ಟೀಕಿಸಿದರು.

ನಂತರ ಬಿಹಾರದ ಸಮಸ್ತಿಪುರದಲ್ಲಿ ಕೇಂದ್ರ ಸಚಿವ ಹಾಗೂ ಬಿಜೆಪಿ ಅಭ್ಯರ್ಥಿ ನಿತ್ಯಾನಂದ ರಾಯ್ ಪರ ಪ್ರಚಾರ ನಡೆಸಿದ ಅವರು, ‘ಇಂಡಿಯಾ’ ಕೂಟದ ಕಾಂಗ್ರೆಸ್ ಮತ್ತು ಆರ್‌ಜೆಡಿ ಅಧಿಕಾರಕ್ಕೆ ಬಂದರೆ, ದೇಶದಲ್ಲಿ ‘ಜಂಗಲ್ ರಾಜ್’ ಉಂಟಾಗಲಿದೆ ಎಂದು ಹೇಳಿದರು.

‘ಇಂಡಿಯಾ’ ಕೂಟವು ಅಧಿಕಾರಕ್ಕೆ ಬಂದರೆ ಪ್ರಧಾನಿ ಯಾರಾಗಲಿದ್ದಾರೆ ಎಂದು ಪ್ರಶ್ನಿಸಿದ ಅವರು, ಮತಬ್ಯಾಂಕ್ ಕಾರಣಕ್ಕಾಗಿ ಕಾಂಗ್ರೆಸ್ ಮತ್ತು ಆರ್‌ಜೆಡಿ ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯಲ್ಲಿ ಭಾಗವಹಿಸಲಿಲ್ಲ ಎಂದು ಟೀಕಿಸಿದರು.

‘ಜೂನ್ 4 ಬಿಜೆಡಿ ಸರ್ಕಾರದ ಅಂತಿಮ ದಿನ’

ಬೆಹ್ರಾಂಪುರ/ನವರಂಗಪುರ (ಪಿಟಿಐ): ಪುರಿ ಜಗನ್ನಾಥನ ತವರು ನೆಲ ಒಡಿಶಾದಲ್ಲಿ ಚುನಾವಣಾ ಪ್ರಚಾರ ನಡೆಸುವ ವೇಳೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ತಮ್ಮನ್ನು ತಾವು ‘ಜಗನ್ನಾಥನ ಪುತ್ರ’ ಎಂದು ಕರೆದುಕೊಂಡರು. ಜೂನ್ 4 ಒಡಿಶಾದಲ್ಲಿ ಬಿಜೆಡಿ ಸರ್ಕಾರದ ಅಂತಿಮ ದಿನವಾಗಲಿದೆ ಎಂದು ಪ್ರತಿಪಾದಿಸಿದರು.

ರಾಜ್ಯದಲ್ಲಿ ಮೊದಲ ಚುನಾವಣಾ ರ‍್ಯಾಲಿ ನಡೆಸಿದ ಅವರು, ‘ಒಡಿಶಾದಲ್ಲಿ ಬಿಜೆಡಿ ಮುಳುಗುವ ಸೂರ್ಯನಾಗಿದೆ. ಕಾಂಗ್ರೆಸ್ ಜರ್ಜರಿತವಾಗಿದೆ. ಜನ ಬಿಜೆಪಿಯೇ ಖಚಿತ ಎಂದು ಭಾವಿಸಿದ್ದಾರೆ. ಜನರಿಗೆ ಬಿಜೆಪಿ ಭರವಸೆಯ ಏಕೈಕ ಕಿರಣವಾಗಿದೆ’ ಎಂದು ಹೇಳಿದರು.

‘ನೀವು ಕಾಂಗ್ರೆಸ್‌ಗೆ 50 ವರ್ಷ ನೀಡಿದ್ದೀರಿ. ಬಿಜೆಡಿಗೆ 25 ವರ್ಷ ನೀಡಿದ್ದೀರಿ. ಬಿಜೆಪಿಗೆ ಕೇವಲ 5 ವರ್ಷ ನೀಡಿ. ಒಡಿಶಾವನ್ನು ದೇಶದಲ್ಲಿ ‘ನಂಬರ್ ವನ್’ ರಾಜ್ಯವನ್ನಾಗಿ ಮಾಡುತ್ತೇವೆ’ ಎಂದರು.

ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರನ್ನು ಗುರಿಯಾಗಿಸಿಕೊಂಡು, ‘ಒಡಿಶಾಗೆ ಒಡಿಯಾ ಭಾಷೆ ಮತ್ತು ಸಂಸ್ಕೃತಿ ಅರ್ಥಮಾಡಿಕೊಳ್ಳುವ ಮುಖ್ಯಮಂತ್ರಿ ಬೇಕಾಗಿದ್ದಾರೆ’ ಎಂದು ಹೇಳಿದರು.

ಆಯುಷ್ಮಾನ್ ಭಾರತ್ ಸೇರಿದಂತೆ ಕೇಂದ್ರದ ಹಲವು ಯೋಜನೆಗಳನ್ನು ರಾಜ್ಯದಲ್ಲಿ ಜಾರಿಗೆ ತರದೇ ಇದ್ದುದನ್ನು ಟೀಕಿಸಿದ ಮೋದಿ, ‘ಜೂನ್ 10 ರಂದು ಬಿಜೆಪಿಯ ಮುಖ್ಯಮಂತ್ರಿ ಅಧಿಕಾರ ಸ್ವೀಕಾರ ಸಮಾರಂಭಕ್ಕೆ ನಿಮ್ಮನ್ನು ಸ್ವಾಗತಿಸಲು ನಾನು ಬಂದಿದ್ದೇನೆ. ನವೀನ್ ಪಟ್ನಾಯಕ್ ಸರ್ಕಾರ ತಡೆಯುತ್ತಿರುವ ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಆರೋಗ್ಯ ಯೋಜನೆಯನ್ನು ಜಾರಿ ಮಾಡುತ್ತೇವೆ. ಈ ಯೋಜನೆಯ ಅಡಿಯಲ್ಲಿ ಜಗನ್ನಾಥನ ಪುತ್ರ ಎಲ್ಲ ಹಿರಿಯ ನಾಗರಿಕರ ಬಗ್ಗೆ ಕಾಳಜಿ ವಹಿಸುತ್ತಾನೆ’ ಎಂದು ತಿಳಿಸಿದರು.

ಬಿಜೆಪಿ ಪ್ರಚಾರಕ್ಕೆ ಅಡ್ಡಿ: ದೂರು

ಛತ್ತೀಸಗಢ (ಪಿಟಿಐ): ಪಂಜಾಬ್‌ನಲ್ಲಿ ಬಿಜೆಪಿ ಅಭ್ಯರ್ಥಿಗಳು ಪ್ರಚಾರದ ವೇಳೆ ರೈತರಿಂದ ಪ್ರತಿಭಟನೆ ಎದುರಿಸುತ್ತಿರುವ ಬಗ್ಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸುನಿಲ್ ಜಾಖಡ್ ಚುನಾವಣಾಧಿಕಾರಿಗೆ ಸೋಮವಾರ ದೂರು ನೀಡಿದ್ದು, ಪಕ್ಷದ ಪ್ರತಿನಿಧಿಗಳು ಪ್ರಚಾರ ಕಣದಿಂದ ಒತ್ತಾಯಪೂರ್ವಕವಾಗಿ ಹಿಂದೆ ಸರಿಯುವಂತಾಗಿದೆ ಎಂದು ಹೇಳಿದರು.

ಬಿಜೆಪಿ ಅಭ್ಯರ್ಥಿಗಳ ಪ್ರಚಾರಕ್ಕೆ ಅಡ್ಡಿ ಆತಂಕ ಎದುರಾಗುತ್ತಿರುವುದರ ಹಿಂದೆ ಎಎಪಿ ಮತ್ತು ಇತರ ಪಕ್ಷಗಳ ಒಳಸಂಚು ಇರಬಹುದೆಂದು ಅನುಮಾನ ವ್ಯಕ್ತಪಡಿಸಿದರು. ಜಾಖಡ್ ನೇತೃತ್ವದ ಪಕ್ಷದ ಮುಖಂಡರ ನಿಯೋಗವು ಸೋಮವಾರ ಪಂಜಾಬ್ ಮುಖ್ಯ ಚುನಾವಣಾಧಿಕಾರಿಗೆ ಮನವಿ ಪತ್ರ ಸಲ್ಲಿಸಿತು. ‘ರಾಜ್ಯ ಸರ್ಕಾರವು ಚುನಾವಣಾ ಕಣದಲ್ಲಿ ಪಕ್ಷದ ಅಭ್ಯರ್ಥಿಗಳ ಪ್ರಚಾರದ ಹಕ್ಕನ್ನು ಕಾಪಾಡುವಲ್ಲಿ ಸೋತಿದೆ’ ಎಂದು ದೂರು ನೀಡಿದ್ದು, ಮಧ್ಯಪ್ರವೇಶಿಸಲು ಕೋರಿದೆ.

ಎಸ್‌ಪಿ ಅಧ್ಯಕ್ಷರಾಗಿ ಶ್ಯಾಮ್ ಲಾಲ್

ಲಖನೌ(ಪಿಟಿಐ): ಸಮಾಜವಾದಿ ಪಕ್ಷದ (ಎಸ್‌ಪಿ) ಉತ್ತರ ಪ್ರದೇಶದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಶ್ಯಾಮ್ ಲಾಲ್ ಪಾಲ್ ಅವರನ್ನು ನೇಮಕ ಮಾಡಲಾಗಿದೆ. ಈ ಹಿಂದೆ ಅಧ್ಯಕ್ಷರಾಗಿದ್ದ ನರೇಶ್ ಉತ್ತಮ್ ಅವರು ಫತೇಹ್‌ಪುರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಹೀಗಾಗಿ ಅವರ ಸ್ಥಾನಕ್ಕೆ ಶ್ಯಾಮ್ ಅವರನ್ನು ನೇಮಕ ಮಾಡಲಾಗಿದೆ.

ಈ ಬಗ್ಗೆ ಪಕ್ಷವು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ. ಉತ್ತಮ್ ಅವರು ಚುನಾವಣೆಯಲ್ಲಿ ನಿರತರಾಗಿರುವುದರಿಂದ ಈ ನೇಮಕ ಮಾಡಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ತಮ್ಮನ್ನು ಮುಕ್ತಗೊಳಿಸುವಂತೆ ಉತ್ತಮ್ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ಅವರಿಗೆ ಪತ್ರ ಬರೆದಿದ್ದರು ಎಂದು ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ರಾಜೇಂದ್ರ ಚೌಧರಿ ತಿಳಿಸಿದ್ದಾರೆ.

ಶ್ಯಾಮ್ ಈ ಹಿಂದೆ ಪ್ರಯಾಗರಾಜ್‌ನ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದರು.

ಜಾತಿ ಸಮೀಕ್ಷೆ ದೇಶದ ರಾಜಕಾರಣದ ದಿಕ್ಕು ಬದಲಿಸಲಿದೆ: ರಾಹುಲ್ ಗಾಂಧಿ

‘ಎನ್‌ಡಿಎ 150 ಸ್ಥಾನಗಳನ್ನೂ ಗೆಲ್ಲುವುದಿಲ್ಲ’

ಅಲೀರಾಜಪುರ (ಮಧ್ಯಪ್ರದೇಶ) (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಕೂಟವು ಕನಿಷ್ಠ 150 ಸ್ಥಾನಗಳನ್ನೂ ಗೆಲ್ಲುವುದಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೋಮವಾರ ಹೇಳಿದರು.

ಮಧ್ಯಪ್ರದೇಶದ ಅಲೀರಾಜಪುರ ಜಿಲ್ಲೆಯ ಜೋಬಟ್ ನಗರದಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ಮೀಸಲಾತಿಯ ಶೇ 50ರ ಮಿತಿಯನ್ನು ಕಾಂಗ್ರೆಸ್ ಸರ್ಕಾರವು ತೆಗೆದುಹಾಕಲಿದೆ ಎಂದು ತಿಳಿಸಿದರು.

ಜಾತಿ ಸಮೀಕ್ಷೆ ನಡೆಸಲಾಗುವುದು ಎಂದು ಪುನರುಚ್ಚರಿಸಿದ ಅವರು, ಅದು ದೇಶದ ರಾಜಕಾರಣದ ದಿಕ್ಕು ಬದಲಿಸಲಿದೆ ಎಂದು ಅಭಿಪ್ರಾಯ ಪಟ್ಟರು.

‘ಬಿಜೆಪಿ ನಾಯಕರು ಆದಿವಾಸಿಗಳು, ದಲಿತರು, ಒಬಿಸಿಗಳ ಹಕ್ಕುಗಳನ್ನು ಕಸಿದುಕೊಳ್ಳಲು ಹೊರಟಿದ್ದಾರೆ. ನಾವು ಅದನ್ನು ತಡೆಯಬೇಕಿದೆ’ ಎಂದು ಅವರು ಹೇಳಿದರು.

ಮೋದಿ ಅವರು 22 ಮಂದಿ ಶತಕೋಟ್ಯಧಿಪತಿಗಳತ್ತ ಮಾತ್ರವೇ ಗಮನ ಹರಿಸಿ ಅವರ ಲಕ್ಷಾಂತರ ಕೋಟಿ ರೂಪಾಯಿ ಸಾಲ ಮನ್ನಾ ಮಾಡಿದರು ಎಂದು ಆರೋಪಿಸಿದ ರಾಹುಲ್, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ ಮಾಡಲಿದೆ ಎಂದು ಭರವಸೆ ನೀಡಿದರು.

ನಂತರ ಖರಗೋನ್ ಲೋಕಸಭಾ ಕ್ಷೇತ್ರದಲ್ಲಿ ಪ್ರಚಾರ ನಡೆಸಿದ ಅವರು, ‘ಬಿಜೆಪಿ ಮೂರನೇ ಅವಧಿಗೆ ಅಧಿಕಾರಕ್ಕೆ ಬಂದರೆ ಭೂಮಿ, ನೀರು, ಅರಣ್ಯದ ಮೇಲಿನ ನಿಮ್ಮ ಹಕ್ಕು ಅಂತ್ಯವಾಗುತ್ತದೆ. ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು ನಾಶವಾಗಲಿವೆ ಮತ್ತು ಕೇವಲ 20ರಿಂದ 25 ಜನರ ಆಡಳಿತವು ಆರಂಭವಾಗುತ್ತದೆ. ಅದಾನಿಯಂತಹ ಕೋಟ್ಯಧಿಪತಿಗಳು ನಿಮ್ಮ ಭೂಮಿ, ನೀರು ಮತ್ತು ಅರಣ್ಯವನ್ನು ಬಯಸುತ್ತಾರೆ ಮತ್ತು ಅವನ್ನು ನಿಮ್ಮಿಂದ ಕಸಿದುಕೊಂಡು ಅವರಿಗೆ ಕೊಡಲಾಗುತ್ತದೆ’ ಎಂದು ರಾಹುಲ್ ಗಾಂಧಿ ಅವರು ಹೇಳಿದರು.

ರಾಹುಲ್ ಹೇಳಿದ್ದು..

- ಬಿಜೆಪಿ ‘ಅಬ್‌ಕಿ ಬಾರ್ 400 ಪಾರ್’ ಎನ್ನುವ ಘೋಷಣೆ ಹೊರಡಿಸಿದೆ. 400 ಪಕ್ಕಕ್ಕಿಡಿ, ಅವರು 150 ಸ್ಥಾನಗಳನ್ನೂ ಗೆಲ್ಲುವುದಿಲ್ಲ.
- ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ, ರೈತರ ಬೆಳೆಗಳಿಗೆ ನೀಡಲಾಗುವ ‘ಕನಿಷ್ಠ ಬೆಂಬಲ ಬೆಲೆ’ಗೆ (ಎಂಎಸ್‌ಪಿ) ಕಾನೂನು ಖಾತರಿ ನೀಡಲಾಗುವುದು.
- ನರೇಗಾ ಅಡಿ ನೀಡಲಾಗುವ ಕನಿಷ್ಠ ಕೂಲಿಯನ್ನು ನಮ್ಮ ಸರ್ಕಾರ ₹250ರಿಂದ ₹400ಕ್ಕೆ ಹೆಚ್ಚಿಸಲಿದೆ.
- ವಿಮಾನ ನಿಲ್ದಾಣಗಳು, ವಿದ್ಯುತ್ ಕೇಂದ್ರಗಳು ಮತ್ತು ಮೂಲಸೌಕರ್ಯವನ್ನು ಮೋದಿ ಈಗಾಗಲೇ 22–25 ಮಂದಿ ಕೋಟ್ಯಧಿಪತಿಗಳಿಗೆ ನೀಡಿದ್ದಾರೆ.
- ಮೋದಿ ಅವರು ಅದಾನಿಯಂತಹ ಜನರ ಸಾಲ ಮನ್ನಾ ಮಾಡಿದ್ದಾರೆ. ನರೇಗಾದ 24 ವರ್ಷಗಳ ಖರ್ಚಿನ ಮೊತ್ತವನ್ನು ಅವರು ಅಂಥವರಿಗೆ ನೀಡಿದ್ದಾರೆ. ಆದರೆ, ಬಡವರು ಮತ್ತು ರೈತರ ಸಾಲ ಮನ್ನಾ ಮಾಡಲಿಲ್ಲ.
- ಅದಾನಿ ಎಷ್ಟು ತೆರಿಗೆ ಕಟ್ಟುತ್ತಾರೋ ನೀವೂ ಅಷ್ಟೇ ತೆರಿಗೆ ಕಟ್ಟುತ್ತಿದ್ದೀರಿ. ಆದರೆ, ನೀವು ಕಟ್ಟಿದ ತೆರಿಗೆಯ ಫಲ ನಿಮಗೆ ಸಿಗುತ್ತಿಲ್ಲ.
- ಜಿಎಸ್‌ಟಿ ಮತ್ತು ನೋಟು ರದ್ದತಿಯಿಂದ ಸಣ್ಣ ಉದ್ದಿಮೆಗಳು ಬಾಗಿಲು ಮುಚ್ಚಿದರೆ, ಅದಾನಿಯಂಥ ದೊಡ್ಡ ಉದ್ಯಮಿಗಳಿಗೆ ಅನುಕೂಲವಾಯಿತು.



ಚುಟುಕು

‘ಕಂಗನಾಗೆ ಚಿಕಿತ್ಸೆ ಕೊಡಿಸಿ’

ಮಂಡಿ (ಪಿಟಿಐ): ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಂಗನಾ ರನೌತ್ ಅವರು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ರಾಕೇಶ್ ಕುಮಾರ್ ಸಿಂಗ್ ಸೋಮವಾರ ಟೀಕಿಸಿದ್ದಾರೆ.

‘ಕಂಗನಾ ಆಧಾರವಿಲ್ಲದ ಹೇಳಿಕೆ ನೀಡುತ್ತಿದ್ದು, ಒಬ್ಬ ಸಹಜ ವ್ಯಕ್ತಿ ಅಂಥ ಹೇಳಿಕೆ ನೀಡಲು ಸಾಧ್ಯವಿಲ್ಲ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕಂಗನಾ ಅವರಿಗೆ ಮನೋವೈದ್ಯರ ಬಳಿ ಚಿಕಿತ್ಸೆ ಕೊಡಿಸಬೇಕು’ ಎಂದು ಹೇಳಿದ್ದಾರೆ.

‘ಕಂಗನಾ ವಿವಾದಾತ್ಮಕ ಹೇಳಿಕೆಗಳನ್ನು ನೀಡುತ್ತಿದ್ದು, ಅವರಿಗೆ ಚರಿತ್ರೆ ಮತ್ತು ರಾಜಕಾರಣದ ಬಗ್ಗೆ ಅಲ್ಪಜ್ಞಾನವಿದೆ’ ಎಂದಿದ್ದಾರೆ.

ಭಾರತದ ಮೊದಲ ಪ್ರಧಾನಿ ಸುಭಾಷ್ ಚಂದ್ರ ಬೋಸ್ ಎಂದು ಕಂಗನಾ ಹೇಳಿರುವ ಹಳೆಯ ವಿಡಿಯೊ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಎರಡನೇ ತರಗತಿಯ ಮಕ್ಕಳಿಗೂ ಭಾರತದ ಮೊದಲ ಪ್ರಧಾನಿ ಜವಾಹರ್ ಲಾಲ್ ನೆಹರೂ ಎನ್ನುವುದು ಗೊತ್ತು’ ಎಂದು ಲೇವಡಿ ಮಾಡಿದರು.

‘ಕಾಂಗ್ರೆಸ್ ಮುಖಂಡರ ಮೇಲಿನ ಕಂಗನಾ ಅವರ ವೈಯಕ್ತಿಕ ದಾಳಿಗಳಿಂದ ಮತ್ತು ಮಾನಹಾನಿಕರ ಹೇಳಿಕೆಗಳಿಂದ ದೇವಭೂಮಿ ಹಿಮಾಚಲದ ಜನ ಮನನೊಂದಿದ್ದಾರೆ’ ಎಂದು ಹೇಳಿದರು.

‘ಹಿಂದೆ ಸರಿಯುವಂತೆ ಬಿಜೆಪಿ ಮನವಿ’

ಇಂದೋರ್ (ಪಿಟಿಐ): ಬಿಜೆಪಿಯ ಕೆಲವು ಮುಖಂಡರು ತಮ್ಮನ್ನು ಸಂಪರ್ಕಿಸಿ, ಲೋಕಸಭಾ ಕಣದಿಂದ ಹಿಂದೆ ಸರಿಯುವಂತೆ ಮನವಿ ಮಾಡಿದರು ಎಂದು ಇಂದೋರ್ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಹಾಗೂ ಆರ್‌ಎಸ್‌ಎಸ್‌ನ ಮಾಜಿ ‘ಪ್ರಚಾರಕ್’ ಅಭಯ್ ಜೈನ್ ಸೋಮವಾರ ಹೇಳಿದ್ದಾರೆ. ಆರೋಪವನ್ನು ಅಲ್ಲಗಳೆದಿರುವ ಬಿಜೆಪಿ, ಇದು ‘ಕಾಲ್ಪನಿಕ’ ಮತ್ತು ‘ಪ್ರಚಾರ ತಂತ್ರ’ ಎಂದು ಪ್ರತಿಕ್ರಿಯಿಸಿದೆ.

ಅಭಯ್ ಜೈನ್ 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಕೈಲಾಶ್ ವಿಜಯವರ್ಗೀಯ ವಿರುದ್ಧ ಸ್ಪರ್ಧಿಸಿ ಠೇವಣಿ ಕಳೆದುಕೊಂಡಿದ್ದರು. ನಂತರ ಆರ್‌ಎಸ್‌ಎಸ್‌ನ ಮಾಜಿ ‘ಪ್ರಚಾರ ಪ್ರಮುಖ್’ಗಳು ಸೇರಿ ‘ಜನಹಿತ ಪಕ್ಷ’ ಸ್ಥಾಪಿಸಿದ್ದರು. ಆದರೆ, ಅದಕ್ಕೆ ಚುನಾವಣಾ ಆಯೋಗ ಇನ್ನೂ ಮಾನ್ಯತೆ ನೀಡಿಲ್ಲ. ಹೀಗಾಗಿ ಜೈನ್ ಲೋಕಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಬಿಜೆಪಿಯ ಕೈಲಾಶ್ ವಿಜಯವರ್ಗೀಯ ಸೇರಿದಂತೆ ಹಲವರು ತಮ್ಮನ್ನು ಭೇಟಿ ಮಾಡಿ, ಕಣದಿಂದ ಹಿಂದೆ ಸರಿಯುವಂತೆ ಕೇಳಿಕೊಂಡರು ಎಂದು ಜೈನ್ ಹೇಳಿದ್ದಾರೆ.

ಎಂಥಾ ಮಾತು!



ಸುಳ್ಳು ಭರವಸೆಗಳನ್ನು ನೀಡಿ ಚುನಾವಣೆಯನ್ನು ಗೆಲ್ಲಬಹುದು ಎಂಬ ಕಾಂಗ್ರೆಸ್‌ನ ಕನಸು ನುಚ್ಚುನೂರಾಗಲಿದೆ. ಕಾಂಗ್ರೆಸ್‌ನ ಪ್ರಣಾಳಿಕೆಯ ಹಿಂದೆ ವಿದೇಶಿ ಶಕ್ತಿಗಳ ಕೈವಾಡವಿದೆ. ಮೊದಲು ಅಮೇಠಿಯಿಂದ ವಯನಾಡಿಗೆ ಓಡಿಹೋದ ರಾಹುಲ್ ಗಾಂಧಿ ಅವರು ಇದೀಗ ರಾಯ್‌ಬರೇಲಿಯಿಂದ ಸ್ಪರ್ಧಿಸುತ್ತಿದ್ದಾರೆ. ಕಾಂಗ್ರೆಸ್‌ಗೆ ರಾಯ್‌ಬರೇಲಿಯಲ್ಲೂ ಸೋಲು ಎದುರಾಗಲಿದೆ

ಅನುರಾಗ್ ಠಾಕೂರ್, ಕೇಂದ್ರ ಸಚಿವ



ಬಿಜೆಪಿಯು ಲೋಕಸಭಾ ಚುನಾವಣೆಯನ್ನು ಗೆಲ್ಲಲು ಸುಳ್ಳುಗಳ ನೀಲನಕ್ಷೆಯನ್ನು ರೂಪಿಸುತ್ತಿದೆ. ಬಂಗಾಳದಲ್ಲಿ ಗಲಭೆಗೆ ಸಂಚು ರೂಪಿಸಿರುವ ಪ್ರಧಾನಿಗೆ ನೀವು ಮತ ಹಾಕುವಿರಾ? ನೀವು (ಬಿಜೆಪಿ) ಹಣದ ಆಮಿಷವೊಡ್ಡಿ ನಮ್ಮ ನಾಯಕರ ವಿರುದ್ಧ ಆರೋಪ ಮಾಡುವಂತೆ (ಸಂದೇಶ್‌ಖಾಲಿ ಪ್ರಕರಣ) ಪಿತೂರಿ ಮಾಡಿದ್ದೀರಿ. ಆ ಮೂಲಕ ಬಂಗಾಳದ ಕೋಟ್ಯಂತರ ಸಹೋದರಿಯರಿಗೆ ಅಗೌರವ, ಅವಮಾನ ಉಂಟುಮಾಡಿದ್ದೀರಿ.

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಕ್ಷೇತ್ರ ಮಹಾತ್ಮೆ

ನವರಂಗಪುರ (ಒಡಿಶಾ)

ಬುಡಕಟ್ಟು ಸಮುದಾಯಗಳ ಪ್ರಾಬಲ್ಯವಿರುವ ದಕ್ಷಿಣ ಒಡಿಶಾದ ನವರಂಗಪುರ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಕಣ ರಂಗೇರಿದ್ದು, ಪ್ರಬಲ ಅಭ್ಯರ್ಥಿಗಳು ಹಣಾಹಣಿಗೆ ಸಿದ್ಧರಾಗಿದ್ದಾರೆ. ಆಡಳಿತಾರೂಢ ಬಿಜು ಜನತಾ ದಳವು (ಬಿಜೆಡಿ) ಪ್ರದೀಪ್ ಕುಮಾರ್ ಮಾಝಿ ಅವರನ್ನು ಕಣಕ್ಕಿಳಿಸಿದರೆ, ಬಿಜೆಪಿಯು ಬಾಲಭದ್ರ ಮಾಝಿ ಅವರನ್ನು ಅಖಾಡಕ್ಕಿಳಿಸಿದೆ. ಇವರಿಬ್ಬರಿಗೆ ಪೈಪೋಟಿ ನೀಡಲು ಕಾಂಗ್ರೆಸ್ ಪಕ್ಷವು ಭುಜಬಲ್ ಮಾಝಿ ಅವರನ್ನು ಸ್ಪರ್ಧಿಯಾಗಿಸಿದೆ. 2019ರ ಚುನಾವಣೆಯಲ್ಲಿ ಬಿಜೆಡಿಯ ರಮೇಶ್‌ಚಂದ್ರ ಮಾಝಿ ಅವರು, 41,634 ಮತಗಳ ಅಂತರದಿಂದ ಕಾಂಗ್ರೆಸ್‌ನ ಪ್ರದೀಪ್ ಕುಮಾರ್ ಮಾಝಿ ಅವರನ್ನು ಸೋಲಿಸಿದ್ದರು. ಬಾಲಭದ್ರ ಅವರು ಮಾಜಿ ಸಂಸದರಾಗಿದ್ದು, ಸ್ಥಳೀಯವಾಗಿಯೂ ಪ್ರಭಾವಿ ಮುಖಂಡರಾಗಿದ್ದಾರೆ. ಭುಜಬಲ್ ಅವರು ಬುಡಕಟ್ಟು ಮುಖಂಡರಾಗಿದ್ದಾರೆ. ಬಿಜೆಪಿ ಅಭ್ಯರ್ಥಿಯು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆಗಳನ್ನು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಮುಂದಿರಿಸಿ ಮತಯಾಚಿಸಿದರೆ, ಕೇಂದ್ರ ಸರ್ಕಾರದ ನ್ಯೂನತೆಗಳನ್ನೇ ಪ್ರಮುಖ ವಿಷಯವಾಗಿಸಿ ಕಾಂಗ್ರೆಸ್ ಅಭ್ಯರ್ಥಿ ಮತಯಾಚಿಸುತ್ತಿದ್ದಾರೆ. ಬಿಜೆಡಿ ಅಭ್ಯರ್ಥಿಯು ಮುಖ್ಯಮಂತ್ರಿ ನವೀನ್ ಪಟ್ನಾಯಕ್ ನೇತೃತ್ವದ ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಜನರ ಮುಂದಿರಿಸುತ್ತಿದ್ದಾರೆ. ಮೂವರು ಪ್ರಬಲ ಅಭ್ಯರ್ಥಿಗಳು ಕಣಕ್ಕಿಳಿದಿರುವ ಈ ಕ್ಷೇತ್ರದಲ್ಲಿ ಜನರು ಯಾರ ಕೈ ಹಿಡಿಯಲಿದ್ದಾರೆ ಎಂಬುದನ್ನು ಕಾದು ನೋಡಬೇಕಾಗಿದೆ.



ಮುಖಾಮುಖಿ


ರಾಯ್‌ಬರೇಲಿ (ಉತ್ತರಪ್ರದೇಶ)



ರಾಹುಲ್ ಗಾಂಧಿ (ಕಾಂಗ್ರೆಸ್)

ಉತ್ತರ ಪ್ರದೇಶದ ಪ್ರತಿಷ್ಠಿತ ಲೋಕಸಭಾ ಕ್ಷೇತ್ರಗಳಲ್ಲೊಂದಾದ ರಾಯ್‌ಬರೇಲಿಯಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕಣಕ್ಕಿಳಿದಿದ್ದಾರೆ. ರಾಹುಲ್ ಅವರು ಕೇರಳದ ವಯನಾಡ್ ಕ್ಷೇತ್ರದಲ್ಲೂ ಸ್ಪರ್ಧಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಈ ಕ್ಷೇತ್ರದಲ್ಲಿ ಗೆದ್ದಿದ್ದರು. ರಾಹುಲ್ ಅವರು ಈ ಬಾರಿಯೂ ಅಮೇಠಿ ಕ್ಷೇತ್ರದಿಂದ ಸ್ಪರ್ಧೆಗಿಳಿಯುತ್ತಾರೆಂದು ಹೇಳಲಾಗಿತ್ತು. ಆದರೆ ಅವರನ್ನು ರಾಯ್‌ಬರೇಲಿಯಿಂದ ಅಖಾಡಕ್ಕಿಳಿಸುವ ಮೂಲಕ ಕಾಂಗ್ರೆಸ್ ಅಚ್ಚರಿ ಮೂಡಿಸಿದೆ. ಕಳೆದ ಬಾರಿ ಅವರು ಅಮೇಠಿಯಲ್ಲಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ವಿರುದ್ಧ ಸ್ಪರ್ಧಿಸಿ ಸೋತಿದ್ದರು. ಇಲ್ಲಿಂದ , 5 ಬಾರಿ ಗೆದ್ದು, ಸಂಸತ್ ಪ್ರವೇಶಿಸಿದ್ದ ಸೋನಿಯಾ ಗಾಂಧಿ ಅವರು ಚುನಾವಣಾ ರಾಜಕೀಯದಿಂದ ದೂರ ಸರಿದಿದ್ದಾರೆ.

v/s




ದಿನೇಶ್ ಪ್ರತಾಪ್ ಸಿಂಗ್ (ಬಿಜೆಪಿ)

ರಾಯ್‌ಬರೇಲಿಯಲ್ಲಿ ರಾಹುಲ್ ಗಾಂಧಿ ಅವರ ಪ್ರತಿಸ್ಪರ್ಧಿಯಾಗಿ ಬಿಜೆಪಿಯಿಂದ ದಿನೇಶ್ ಪ್ರತಾಪ್ ಸಿಂಗ್ ಅವರು ಸ್ಪರ್ಧಿಸುತ್ತಿದ್ದಾರೆ. 2019ರ ಚುನಾವಣೆಯಲ್ಲಿ ಸೋನಿಯಾ ಗಾಂಧಿ ಅವರು, 1,67,178 ಮತಗಳ ಅಂತರದಿಂದ ದಿನೇಶ್ ಪ್ರತಾಪ್ ಅವರನ್ನು ಪರಾಭವಗೊಳಿಸಿದ್ದರು. ಕಾಂಗ್ರೆಸ್‌ನಿಂದ ರಾಜಕೀಯ ಕ್ಷೇತ್ರಕ್ಕೆ ಕಾಲಿರಿಸಿದ್ದ ದಿನೇಶ್ ಅವರು, 2018ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. 2010ರಲ್ಲಿ ಉತ್ತರ ಪ್ರದೇಶದ ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದರು. ಗಾಂಧಿ ಕುಟುಂಬದ ಪ್ರಾಬಲ್ಯವಿರುವ ಈ ಕ್ಷೇತ್ರವು ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದರೂ ಕಳೆದ ಚುನಾವಣೆಯಲ್ಲಿ ಅವರು 3,67,740 ಮತಗಳನ್ನು ಪಡೆಯುವಲ್ಲಿ ಯಶಸ್ವಿ ಆಗಿದ್ದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಸಾಧನೆಗಳನ್ನು ಮುಂದಿರಿಸಿ ಅವರು ಮತ ಯಾಚಿಸುತ್ತಿದ್ದಾರೆ.

ಷೇರುಪೇಟೆ ವಹಿವಾಟು

17



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,475
ಇಂದಿನ ಅಂತ್ಯ	22,442
▼	33
ದಿನದ ಕನಿಷ್ಠ	22,409

ವಿನಿಮಯ ದರ

$ ಡಾಲರ್	83.52
£ ಪೌಂಡ್	105.05
€ ಯುರೊ	82.94
¥ ಯೆನ್ (100ಕ್ಕೆ)	54

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹555
12 ಕ್ಕೆ	₹72
ಮೈಸೂರು	
100ಕ್ಕೆ	₹560

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1510 (1490)
ಸೋಯಾ (ರಿಫೈನ್ಡ್)	₹905 (910)
ಸೂರ್ಯಕಾಂತಿ (ರಿಫೈನ್ಡ್)	₹905 (905)
ಪಾಮೋಲಿನ್	₹890 (887)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7500-9000
ಮಳವಳ್ಳಿ	₹9000-9000
ತಿಪಟೂರು	₹8500-9100

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹176.50
ಆರ್‌ಎಸ್‌ಎಸ್-5	₹169.50
ಗುಡ್ ಲಾಟ್	₹159.50

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹275-496
ದ್ವಿತಳಿ (ಬಿ.ವಿ)	₹352-613

ಜೀ ಮೀಡಿಯಾ ಸಿಇಒ ವಜಾ

ನವದೆಹಲಿ (ಪಿಟಿಐ): ಜೀ ಮೀಡಿಯಾ ಕಾರ್ಪೊರೇಷನ್ ಲಿಮಿಟೆಡ್ ತನ್ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಭಯ್ ಓಜಾ ಅವರನ್ನು ಹುದ್ದೆಯಿಂದ ವಜಾಗೊಳಿಸಿದೆ.

ಸೋಮವಾರ ನಡೆದ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಓಜಾ ಅವರನ್ನು ಕೆಲಸದಿಂದ ವಜಾಗೊಳಿಸುವುದಕ್ಕೆ ಅನುಮೋದನೆ ನೀಡಿದ್ದು, ಮೇ 4ರಿಂದ ಇದು ಜಾರಿಯಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ. ಆದರೆ, ಓಜಾ ಅವರನ್ನು ಕೆಲಸದಿಂದ ವಜಾಗೊಳಿಸಿದ್ದಕ್ಕೆ ಕಂಪನಿ ಕಾರಣ ತಿಳಿಸಿಲ್ಲ. 2022ರಲ್ಲಿ ಜೀ ಮೀಡಿಯಾಗೆ ಸೇರಿದ್ದ ಓಜಾ, ಕಳೆದ ವರ್ಷ ಸಿಇಒ ಆಗಿ ಬಡ್ತಿ ಪಡೆದಿದ್ದರು.

ಜೀ ಮೀಡಿಯಾದ ಕಾನೂನು ವಿಭಾಗದ ಮುಖ್ಯ ವ್ಯವಸ್ಥಾಪಕರಾಗಿದ್ದ ಪೀಯೂಷ್ ಚೌಧರಿ ಏಪ್ರಿಲ್‌ನಲ್ಲಿ ರಾಜೀನಾಮೆ ನೀಡಿದ್ದರು.

2024–25ರಲ್ಲಿ 5 ಕೋಟಿ ಟನ್ ಸರಕು ನಿರ್ವಹಣೆ: ಪ್ರಾಧಿಕಾರದ ಅಧ್ಯಕ್ಷ ವಿಶ್ವಾಸ

ಎನ್‌ಎಂಪಿ: ಶೀಘ್ರ ಹೊಸ ಸೌಕರ್ಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 2023–24ನೇ ಸಾಲಿನಲ್ಲಿ 457.1 ಲಕ್ಷ ಟನ್ ಸರಕು ನಿರ್ವಹಣೆ
- ಎನ್‌ಎಂಪಿಎ ಸರಕು ನಿರ್ವಹಣೆಯಲ್ಲಿ ಶೇ 10.36ರಷ್ಟು ಪ್ರಗತಿ
- ಕಾರ್ಯಾಚರಣೆ ವರಮಾನ ₹833 ಕೋಟಿಗೆ ಹೆಚ್ಚಳ



ನವಮಂಗಳೂರು ಬಂದರು ಪ್ರಾಧಿಕಾರ

ಮಂಗಳೂರು: '2024-25ರಲ್ಲಿ ಸುವರ್ಣ ಮಹೋತ್ಸವ ವರ್ಷಾಚರಣೆಯ ಸಡಗರದಲ್ಲಿರುವ ನವ ಮಂಗಳೂರು ಬಂದರು ಪ್ರಾಧಿಕಾರವು ಆ ಪ್ರಯುಕ್ತ ಅನೇಕ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುತ್ತಿದೆ' ಎಂದು ಪ್ರಾಧಿಕಾರದ ಅಧ್ಯಕ್ಷ ಎ.ವಿ. ರಮಣ ತಿಳಿಸಿದರು.

ಜಲಸಾರಿಗೆ ಬಿಕ್ಕಟ್ಟುಗಳ ನಿರ್ವಹಣೆ ಕುರಿತು ಇಲ್ಲಿ ಸೋಮವಾರ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ಕೆ.ಕೆ. ಗೇಟ್‌ನ ನವೀಕರಣ, ಕೆ.ಕೆ.ಗೇಟ್- ರಾಷ್ಟ್ರೀಯ ಹೆದ್ದಾರಿ 66 ನಡುವೆ ಚತುಷ್ಪಥ ರಸ್ತೆ ನಿರ್ಮಾಣ, ವಾಹನಗಳನ್ನು ಸ್ಕ್ಯಾನ್ ಮಾಡಲು ಆರ್‌ಎಫ್‌ಐಡಿ ಸೌಕರ್ಯ ಅಳವಡಿಕೆ-ಯಂತಹ ಕಾಮಗಾರಿಗಳನ್ನು 2024ರ ಡಿಸೆಂಬರ್ ಒಳಗೆ ಪೂರ್ಣಗೊಳಿಸಿ, ಎನ್‌ಎಂಪಿಎಯ ಸುವರ್ಣ ಮಹೋತ್ಸವವನ್ನು ಅರ್ಥಪೂರ್ಣಗೊಳಿಸಲಾಗುತ್ತದೆ. ಈ ಯೋಜನೆಗಳಿಗೆ ದೇಶದ ಪ್ರಧಾನಿ ಅಥವಾ ರಾಷ್ಟ್ರಪತಿಯವರು 2025ರ ಜನವರಿಯಲ್ಲಿ ಚಾಲನೆ ನೀಡಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಎನ್‌ಎಂಪಿಎ 2023-24ನೇ ಸಾಲಿನಲ್ಲಿ 457.1 ಲಕ್ಷ ಟನ್ ಸರಕನ್ನು ನಿರ್ವಹಣೆ ಮಾಡುವ ಮೂಲಕ ಶೇ 10.36ರಷ್ಟು ಪ್ರಗತಿ ಸಾಧಿಸಿದೆ. 2022-23ರಲ್ಲಿ 414.1 ಲಕ್ಷ ಟನ್ ಸರಕನ್ನು ನಿರ್ವಹಣೆ ಮಾಡಲಾಗಿತ್ತು. 2023-24ರಲ್ಲಿ ಕಾರ್ಯಾಚರಣೆಯ ವರಮಾನವು ₹833 ಕೋಟಿಗೆ ಏರಿಕೆಯಾಗಿದೆ. ಹಿಂದಿನ ಸಾಲಿನಲ್ಲಿ ಇದು ₹743 ಕೋಟಿ ಇತ್ತು. 2023-24ರಲ್ಲಿ ನಿವ್ವಳ ಮಿಗತೆಯು ₹551 ಕೋಟಿಗೆ ಹೆಚ್ಚಿದೆ. ಕಳೆದ ವರ್ಷ ಇದು ₹374 ಕೋಟಿ ಇತ್ತು' ಎಂದು ಅಂಕಿ-ಅಂಶ ನೀಡಿದರು.

'ಪ್ರಸಕ್ತ ಆರ್ಥಿಕ ವರ್ಷ ಕಾರ್ಯಾಚರಣೆ ಅನುಪಾತದಲ್ಲಿ ಶೇ 34.55ರಷ್ಟು ಹೆಚ್ಚಳ ಸಾಧಿಸಿರುವ ಎನ್‌ಎಂಪಿಎ 2024-25ರಲ್ಲಿ 5 ಕೋಟಿ ಟನ್ ಸರಕು ನಿರ್ವಹಣೆ ಮಾಡುವ ವಿಶ್ವಾಸವಿದೆ. ಈ ವರ್ಷ ಪಶ್ಚಿಮ ಘಟ್ಟದ ರಸ್ತೆಗಳ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳಲಿದ್ದು, ರಾಜ್ಯದ ಬೇರೆ ಬೇರೆ ಪ್ರದೇಶಗಳಿಂದ ಬಂದರಿಗೆ ರಸ್ತೆ ಸಂಪರ್ಕ ಸುಧಾರ-ಣೆಯಾಗಲಿದೆ' ಎಂದು ಆಶಾವಾದ ವ್ಯಕ್ತಪಡಿಸಿದರು.

2023-24ರಲ್ಲಿ ಬಂದರು 1,476 ಹಡಗುಗಳನ್ನು ನಿರ್ವಹಣೆ ಮಾಡಿದ್ದು, ಕಳೆದ ವರ್ಷಕ್ಕೆ (1,293 ಹಡಗುಗಳನ್ನು ನಿರ್ವಹಣೆ ಮಾಡಲಾಗಿತ್ತು) ಹೋಲಿಸಿದರೆ ಗಣನೀಯ ಏರಿಕೆ ಸಾಧ್ಯವಾಗಿದೆ. 2023-24ರಲ್ಲಿ ಕಂಟೈನರ್ ರವಾನೆ ವಹಿವಾಟಿನಲ್ಲಿ ಗಣನೀಯ ಪ್ರಗತಿ ಸಾಧಿಸಲಾಗಿದ್ದು, ಈ ವರ್ಷ ಬಂದರು 1,96,424 ಟಿಇಯುಗಳಷ್ಟು (20 ಅಡಿಗೆ ಸಮನಾದ ಯೂನಿಟ್) ಕಂಟೈನರ್ ಸರಕನ್ನು ನಿರ್ವಹಿಸಿದೆ. ಕಳೆದ ವರ್ಷ 1,65,515 ಟಿಇಯುಗಳಷ್ಟು ಕಂಟೈನರ್ ಸರಕುಗಳನ್ನು ನಿರ್ವಹಣೆ ಮಾಡಲಾಗಿತ್ತು ಎಂದು ವಿವರಿಸಿದರು.

'ಸರ್ವ ಋತು ರಸ್ತೆ ಸಂಪರ್ಕ ಸಾಧ್ಯವಾದ ಬಳಿಕ ನವಮಂಗಳೂರು ಬಂದರು ವರ್ಷವೊಂದರಲ್ಲಿ 6 ಕೋಟಿ ಟನ್‌ಗಳಿಂದ 7 ಕೋಟಿ ಟನ್‌ಗಳಷ್ಟು ಸರಕು ನಿರ್ವಹಣೆ ಮಾಡಲಿದೆ.

ಈ ಆರ್ಥಿಕ ವರ್ಷದಲ್ಲಿ ಬಂದರು 277 ಕಂಟೈನರ್ ಹಡಗುಗಳನ್ನು ನಿರ್ವಹಣೆ ಮಾಡಿದೆ' ಎಂದು ಮಾಹಿತಿ ನೀಡಿದರು.

ಎನ್‌ಎಂಪಿಎ ಐಷಾರಾಮಿ ಹಡಗುಗಳನ್ನೂ ನಿರ್ವಹಣೆ ಮಾಡುತ್ತಿದ್ದು, ಪ್ರತಿ ವರ್ಷ 7 ಸಾವಿರದಿಂದ 8 ಸಾವಿರ ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ. ಇದರಿಂದ ಆಸುಪಾಸಿನ ಗ್ರಾಮಗಳಿಗೆ ಹಾಗೂ ಸಣ್ಣ ಕೈಗಾರಿಕೆಗಳಿಗೂ ಪ್ರಯೋಜನವಾಗುತ್ತಿದೆ ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

ಕೊರೊನಾ ಬಹುತಳಿ ವೈರಸ್‌ಗಳಿಗೆ ಒಂದೇ ಲಸಿಕೆ: ಸಂಶೋಧನೆ

ಲಂಡನ್ (ಪಿಟಿಐ): ವಿಶ್ವದ ಪ್ರಮುಖ ವಿಶ್ವವಿದ್ಯಾಲಯಗಳ ವಿಜ್ಞಾನಿಗಳ ತಂಡವು ಕೊರೊನಾ ವೈರಸ್‌ನ-ಮುಂದೆ ಬರಲಿರುವ ತಳಿಗಳೂ ಸೇರಿದಂತೆ- ಬಹುತಳಿಗಳ ವಿರುದ್ಧ ರೋಗನಿರೋಧಕ ಶಕ್ತಿ ರೂಢಿಸಬಲ್ಲ 'ಆಲ್ ಇನ್ ಒನ್' ಲಸಿಕೆಯನ್ನು ಸಿದ್ಧಪಡಿಸಿದೆ.

'ನೇಚರ್ ನ್ಯಾನೊಟೆಕ್ನಾಲಜಿ' ನಿಯತಕಾಲಿಕದಲ್ಲಿ ಸೋಮವಾರ ಈ ಕುರಿತು ಸಂಶೋಧನಾ ಪ್ರಬಂಧವು ಪ್ರಕಟವಾಗಿದ್ದು, 'ಪ್ರೊಆ್ಯಕ್ಟಿವ್ ವ್ಯಾಕ್ಸಿನಾಲಜಿ' ಎಂಬ ಹೊಸ ಸಂಶೋಧನಾ ಕ್ರಮವೊಂದರ ಮೇಲೆ ಬೆಳಕು ಚೆಲ್ಲಿದೆ.

ಇಲಿಗಳ ಮೇಲೆ ಹೊಸ ಲಸಿಕೆಯನ್ನು ಪ್ರಯೋಗಿಸಲಾಗಿದ್ದು, ವೈರಸ್‌ನ ತಳಿಯೊಂದು ರೂಪಾಂತರಗೊಳ್ಳುವ ಮೊದಲೇ ರೋಗ ನಿರೋಧಕ ಶಕ್ತಿಯನ್ನು ಇದು ಮೂಡಿಸುತ್ತದೆ ಎಂದು ತಿಳಿದುಬಂದಿದೆ.

ಯುನೈಟೆಡ್ ಕಿಂಗ್‌ಡಂನ ಆಕ್ಸ್‌ಫರ್ಡ್, ಕೇಂಬ್ರಿಜ್ ವಿಶ್ವವಿದ್ಯಾಲಯಗಳು ಮತ್ತು ಅಮೆರಿಕದ ಕಾಲ್‌ಟೆಕ್ ವಿಶ್ವವಿದ್ಯಾಲಯದ ಪ್ರಕಾರ, ಎಂಟು ವಿವಿಧ ತಳಿಗಳ ಕೊರೊನಾ ವೈರಸ್ ವಿರುದ್ಧ ಹೋರಾಡಲು ಪ್ರತಿರೋಧಕ ಶಕ್ತಿಯನ್ನು ಹೊಸ ಲಸಿಕೆಯು ಉತ್ಪಾದನೆ ಮಾಡಬಲ್ಲದು.

'ಕೊರೊನಾದ ಮುಂದಿನ ಕೆಲವು ತಳಿಗಳಲ್ಲಿ ಯಾವುದಾದರೊಂದು ದೊಡ್ಡ ಮಟ್ಟದಲ್ಲಿ ಸಾಂಕ್ರಾಮಿಕವಾಗುವ ಸಾಧ್ಯತೆ ಇದ್ದೇ ಇರುತ್ತದೆ. ಅಂತಹ ಪರಿಸ್ಥಿತಿ ಬಂದಾಗ ಲಸಿಕೆ ಅಭಿವೃದ್ಧಿಪಡಿಸುವ ಬದಲು ಈಗಿನಿಂದಲೇ ತಯಾರಾಗಿರುವುದು ಸರಿಯೆನ್ನಿಸಿತು. ಆ ಗುರಿಯನ್ನು ಇಟ್ಟುಕೊಂಡು ಹೊಸ ಲಸಿಕೆ ಸಿದ್ಧ-ಪಡಿಸಲಾಗಿದೆ' ಎಂದು ಕೇಬ್ರಿಜ್ ವಿಶ್ವವಿದ್ಯಾಲಯದ ಸಂಶೋಧಕ ರೋರಿ ಹಿಲ್ಸ್ ಹೇಳಿದ್ದಾರೆ.

'ರಫಾ' ನಗರಕ್ಕೂ ದಾಳಿ ಭೀತಿ



ಜೆರುಸಲೇಂ (ಎಪಿ): ಪ್ಯಾಲೆಸ್ಟೀನ್‌ನ ದಕ್ಷಿಣ ಗಾಜಾ ನಗರ ಭಾಗದಲ್ಲಿರುವ ರಫಾ ಪ್ರದೇಶ ತೊರೆಯುವಂತೆ ಸಾವಿರಾರು ಮಂದಿಗೆ ಇಸ್ರೇಲ್ ಸೇನೆ ಸೋಮವಾರ ಸೂಚಿಸಿದೆ. ಈ ಮೂಲಕ ಈ ಪ್ರದೇಶದಲ್ಲೂ ದಾಳಿ ನಡೆಸುವ ಮುನ್ಸೂಚನೆ ನೀಡಿದೆ. ಹಮಾಸ್ ಬಂಡುಕೋರರು ನಡೆಸಿದ ರಾಕೆಟ್ ದಾಳಿಯಲ್ಲಿ ಮೂವರು ಇಸ್ರೇಲ್ ಸೈನಿಕರು ಮೃತಪಟ್ಟಿರುವ ಬೆನ್ನಲ್ಲೇ, ಇಸ್ರೇಲ್ 'ರಫಾ' ಮೇಲೆ ದಾಳಿ ನಡೆಸಲು ಯೋಜಿಸಿದೆ.

ರಫಾ ಪ್ರದೇಶದಲ್ಲಿ ಸೇನಾ ಕಾರ್ಯಾಚರಣೆಗೆ ನಿರ್ಧರಿಸಲಾಗಿದೆ. ಇದು ಮುಂದೆ ದೊಡ್ಡ ಮಟ್ಟದ ಯುದ್ಧಕ್ಕೆ ಕಾರಣವಾಗಬಹುದು. ಹೀಗಾಗಿ, ರಫಾ ಪ್ರದೇಶದಲ್ಲಿರುವ ಸುಮಾರು ಒಂದು ಲಕ್ಷ ಮಂದಿಯನ್ನು ಇಸ್ರೇಲ್‌ನ ಮಾನವೀಯ ನೆಲೆ 'ಮುವಾಸಿ' ಎಂಬಲ್ಲಿಗೆ ತೆರಳುವಂತೆ ಸೂಚಿಸಲಾಗಿದೆ. ರಫಾದ ಯಾವೆಲ್ಲಾ ಪ್ರದೇಶಗಳ ಜನರು ಬೇರೆಡೆಗೆ ತೆರಳಬೇಕು ಎಂದು ನಕ್ಷೆಯನ್ನು ತಯಾರಿಸಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

6-5-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1500)
ಒಂದು ವಾರದ ಡೆಲಿವರಿ	1515 (1495)
ಸೋಯಾ ಕಚ್ಚಾ	857 (857)
ಪಾಮ್ ವಾರದ ಡೆಲಿವರಿ	888 (885)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹71,650 (71,000)

ಬೆಳ್ಳಿ ಕೆ.ಜಿ ₹81,400 (79,975)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

(ಅಡಿಕೆ)

ಬಂಟ್ವಾಳ	
ಕೋಕ	18000-28500
ಹೊಸತು	28500-37000
ಹಳತು	37000-46000
ಕಾರ್ಕಳ	
ಹೊಸತು	25000-37000
ಕುಮಟ	
ಚಿಪ್ಪು	25899-28899
ಕೋಕ	13099-26089
ಫ್ಯಾಕ್ಟರಿ	11019-20529
ಹಳೆಚಾಲಿ	37599-39999
ಹೊಸಚಾಲಿ	33569-36749
ಪುತ್ತೂರು	
ಹೊಸತು	26500-37000
ಸಾಗರ	
ಬಿಳಿಗೋಟು	17199-28672
ಚಾಲಿ	31899-34799
ಕೋಕ	10199-30199
ಕೆಂಪುಗೋಟು	26572-36199
ರಾಶಿ	35099-52639
ಸಿಪ್ಪೆಗೋಟು	6899-19969
ಶಿವಮೊಗ್ಗ	
ಬೆಟ್ಟೆ	50119-54119
ಗೊರಬಲು	20009-34699
ರಾಶಿ	32669-52712
ಸರಕು	72009-78100
ಸಿದ್ದಾಪುರ	
ಬಿಳಿಗೋಟು	27399-30699
ಚಾಲಿ	33299-36299
ಕೋಕ	25369-29699
ಹಳೆಚಾಲಿ	34899-37039
ಕೆಂಪುಗೋಟು	26800-29600
ರಾಶಿ	44099-48209
ತಟ್ಟಿಬೆಟ್ಟೆ	36800-44699
ಶಿರಸಿ	
ಬೆಟ್ಟೆ	34029-42399
ಬಿಳಿಗೋಟು	23700-31576
ಚಾಲಿ	33298-37599
ಕೆಂಪುಗೋಟು	21315-31699
ರಾಶಿ	44099-48909
ಯಲ್ಲಾಪುರ	
ಅಪಿ	55599-64169
ಬಿಳಿಗೋಟು	24109-32019
ಕೋಕ	11069-25929
ಹಳೆಚಾಲಿ	38101-39101
ಹೊಸಚಾಲಿ	32640-37199
ಕೆಂಪುಗೋಟು	25510-34969
ರಾಶಿ	44399-51399
ತಟ್ಟಿಬೆಟ್ಟೆ	36000-44219

ಸೇವಾ ವಲಯ: 14 ವರ್ಷದಲ್ಲೇ ವೇಗದ ಪ್ರಗತಿ



ನವದೆಹಲಿ (ಪಿಟಿಐ): ಉತ್ತಮ ಆರ್ಥಿಕ ಪರಿಸ್ಥಿತಿಗಳು ಮತ್ತು ದೃಢವಾದ ಬೇಡಿಕೆಯಿಂದ ಸೇವಾ ವಲಯದ ಬೆಳವಣಿಗೆ 14 ವರ್ಷಗಳಲ್ಲಿ ಅತ್ಯಂತ ವೇಗವಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆಯ ಮಾಸಿಕ ಸಮೀಕ್ಷೆ ವರದಿ ತಿಳಿಸಿದೆ. ಆದರೆ, ಕ್ಷೇತ್ರದ ಬೆಳವಣಿಗೆಯು ಮಾರ್ಚ್ ತಿಂಗಳಿಗೆ ಹೋಲಿಸಿದರೆ ಏಪ್ರಿಲ್‌ನಲ್ಲಿ ಅಲ್ಪ ಇಳಿಕೆಯಾಗಿದೆ.

ಸೇವಾ ವಲಯದ ಚಟುವಟಿಕೆಯನ್ನು ಸೂಚಿಸುವ ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಬ್ಯುಸಿನೆಸ್ ಸೂಚ್ಯಂಕವು ಮಾರ್ಚ್‌ನಲ್ಲಿ 61.2 ಇತ್ತು. ಏಪ್ರಿಲ್‌ನಲ್ಲಿ 60.8ಕ್ಕೆ ಇಳಿಕೆಯಾಗಿದೆ.

ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು (ಪಿಎಂಐ) 50ರ ಮೇಲಿದ್ದರೆ ಬೆಳವಣಿಗೆಯು ಸದೃಢವಾಗಿದೆ ಎಂದರ್ಥ. 50ಕ್ಕಿಂತ ಕಡಿಮೆ ಇದ್ದರೆ ಬೆಳವಣಿಗೆಯು ಕುಂಠಿತವಾಗಿರುವ ಸೂಚನೆಯಾಗಿದೆ.

ಹೆಚ್ಚಿನ ಬೇಡಿಕೆಗಳ ಕಾರಣಕ್ಕೆ ಏಪ್ರಿಲ್‌ನಲ್ಲಿ ದೇಶದ ಸೇವಾ ಕ್ಷೇತ್ರವು ಹೆಚ್ಚಿನ ಬೆಳವಣಿಗೆ ದಾಖಲಿಸಿತು ಎಂದು ಎಚ್‌ಎಸ್‌ಬಿಸಿಯ ಭಾರತದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದರು.

ಹೆಚ್ಚಿದ ಹೊಸ ಬೇಡಿಕೆಗಳಿಂದಾಗಿ ಸಂಸ್ಥೆಗಳು ತಮ್ಮ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸಿದವು. ಆದರೂ ನೇಮಕಾತಿ ಬೆಳವಣಿಗೆಯ ವೇಗವು ಕ್ಷೀಣಿಸಿತು. ಮಾರ್ಚ್‌ಗಿಂತ ನಿಧಾನವಾಗಿಯಾದರೂ ಉತ್ಪಾದನಾ ವೆಚ್ಚಗಳು ಏರಿಕೆಯಾಗುತ್ತಲೇ ಇದ್ದವು ಎಂದು ತಿಳಿಸಿದ್ದಾರೆ.

ಮಾರುಕಟ್ಟೆ ತಂತ್ರಗಳು ಮತ್ತು ದಕ್ಷತೆ, ಸ್ಪರ್ಧಾತ್ಮಕ ಬೆಲೆಗಳು ಮತ್ತು ಬೇಡಿಕೆಯು ಅನುಕೂಲಕರವಾಗಿ ಉಳಿಯುವ ಮುನ್ಸೂಚನೆ, ಆಶಾವಾದವನ್ನು ಹೆಚ್ಚಿಸಿವೆ ಎಂದು ಸಮೀಕ್ಷೆ ಹೇಳಿದೆ.

ಸೇವಾ ವಲಯದ ಸೂಚ್ಯಂಕ

ಏಪ್ರಿಲ್ 2024	60.8
ಮಾರ್ಚ್	61.2
ಫೆಬ್ರುವರಿ	60.6
ಜನವರಿ	61.8
ಡಿಸೆಂಬರ್ 2023	59.0
ನವೆಂಬರ್	56.9
ಅಕ್ಟೋಬರ್	58.4
ಸೆಪ್ಟೆಂಬರ್	61.0
ಆಗಸ್ಟ್	60.1
ಜುಲೈ	62.3
ಜೂನ್	58.5
ಮೇ	61.2
ಏಪ್ರಿಲ್	62.0

ಇಂಡಿಯನ್ ಬ್ಯಾಂಕ್‌ಗೆ ₹2,247 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಇಂಡಿಯನ್ ಬ್ಯಾಂಕ್ 2023-24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹2,247 ಕೋಟಿ ನಿವ್ವಳ ಲಾಭ ಗಳಿಸಿದೆ.

2022-23ರ ಇದೇ ಅವಧಿಯಲ್ಲಿ ₹1,447 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 55ರಷ್ಟು ಏರಿಕೆಯಾಗಿದೆ. ವರಮಾನವು ₹14,238 ಕೋಟಿಯಿಂದ ₹16,887 ಕೋಟಿಗೆ ಹೆಚ್ಚಳವಾಗಿದೆ. ನಿವ್ವಳ ಬಡ್ಡಿ ಆದಾಯವು ಶೇ 9ರಷ್ಟು ಏರಿಕೆಯಾಗಿದ್ದು, ₹6,015 ಕೋಟಿ ಗಳಿಸಿದೆ ಎಂದು ಬ್ಯಾಂಕ್ ತಿಳಿಸಿದೆ.

2023-24ರ ಪೂರ್ಣ ಹಣಕಾಸು ವರ್ಷದ ಲಾಭದಲ್ಲಿ ಶೇ 53ರಷ್ಟು ಏರಿಕೆಯಾಗಿದ್ದು, ₹8,063 ಕೋಟಿ ಲಾಭ ಗಳಿಸಿದೆ. ಒಟ್ಟು ಆದಾಯವು ₹52,085 ಕೋಟಿಯಿಂದ ₹63,482 ಕೋಟಿಗೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಬಿಎಸ್‌ಇಯಲ್ಲಿ ಬ್ಯಾಂಕ್‌ನ ಪ್ರತಿ ಷೇರಿನ ಮೌಲ್ಯ ₹535.75ರಂತೆ ವಹಿವಾಟು ನಡೆಸಿತು.

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹14500
ಎಸಿ	₹8400
ಆರ್‌ಪಿ	₹15000
ಆರ್‌ಸಿ	₹8580

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹2000-2500
ಮಧ್ಯಮ	₹1500-2000
ಸಣ್ಣ	₹1000-1500

ಚಿನ್ನದ ದರ ₹230, ಬೆಳ್ಳಿ ₹700 ಏರಿಕೆ


ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ದರ ಸೋಮವಾರ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರ ₹230 ಏರಿಕೆಯಾಗಿ ₹72,250ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆಯು ಕೆ.ಜಿಗೆ ₹700 ಹೆಚ್ಚಳವಾಗಿ ₹84,300ಕ್ಕೆ ಮುಟ್ಟಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,312 ಡಾಲರ್ (ಅಂದಾಜು ₹1.93 ಲಕ್ಷ) ಮತ್ತು 27.05 (ಅಂದಾಜು ₹2,258) ಡಾಲರ್‌ನಂತೆ ಮಾರಾಟವಾಗಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟು, ಡಾಲರ್ ಮೌಲ್ಯ ಇಳಿಕೆಯಿಂದ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸೆನ್ಸೆಕ್ಸ್ ಏರಿಕೆ, ನಿಫ್ಟಿ ಇಳಿಕೆ



ಮುಂಬೈ/ನವದೆಹಲಿ (ಪಿಟಿಐ): ಹೂಡಿಕೆದಾರರು ಲಾಭ ಗಳಿಕೆಗಾಗಿ ಷೇರುಗಳ ಮಾರಾಟಕ್ಕೆ ಮುಂದಾಗಿದ್ದರಿಂದ ಸೋಮವಾರ ಸೆನ್ಸೆಕ್ಸ್ ಏರಿಕೆ ಕಂಡಿತು. ಆದರೆ, ನಿಫ್ಟಿ ಇಳಿಕೆ ಕಂಡಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 17 ಅಂಶ ಏರಿಕೆಯಾಗಿ 73,895ಕ್ಕೆ ಸ್ಥಿರಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 33 ಅಂಶ ಇಳಿಕೆಯಾಗಿ 22,442ಕ್ಕೆ ಅಂತ್ಯಗೊಂಡಿತು.

ಸಾಲ ನೀಡುವ ಯೋಜನೆಗಳ ಮೇಲೆ ನಿಗಾ ಇಡಲು ಆರ್‌ಬಿಐ ಬಿಗಿ ನಿಯಮಗಳನ್ನು ರೂಪಿಸಿದ್ದರಿಂದ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಷೇರಿನ ಮೌಲ್ಯ ಇಳಿಕೆ ಕಂಡಿದೆ.

ಸೆನ್ಸೆಕ್ಸ್ ಗುಚ್ಛದಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಹಿಂದೂಸ್ತಾನ್ ಯೂನಿಲಿವರ್, ಮಹೀಂದ್ರ ಆ್ಯಂಡ್ ಮಹೀಂದ್ರ, ಸನ್ ಫಾರ್ಮಾ, ಟೆಕ್ ಮಹೀಂದ್ರ ಮತ್ತು ಇಂಡಸ್‌ಇಂಡ್ ಬ್ಯಾಂಕ್‌ನ ಷೇರು ಮೌಲ್ಯ ಏರಿಕೆ ಆಗಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಪವರ್ ಫೈನಾನ್ಸ್ ಕಾರ್ಪೊರೇಷನ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎನ್‌ಟಿಪಿಸಿ, ಪವರ್‌ಗ್ರಿಡ್, ಬಜಾಜ್ ಫೈನಾನ್ಸ್ ಮತ್ತು ಲಾರ್ಸೆನ್ ಆ್ಯಂಡ್ ಟೊಬ್ರೊ ಷೇರಿನ ಮೌಲ್ಯ ಇಳಿಕೆ ಆಗಿದೆ.

ಜಾಗತಿಕ ಬ್ರೆಂಟ್ ಕಚ್ಚಾ ತೈಲವು ಬ್ಯಾರೆಲ್‌ಗೆ ಶೇ 0.80ರಷ್ಟು ಏರಿಕೆಯಾಗಿ 83.62 ಡಾಲರ್‌ಗೆ (₹6,982) ಮುಟ್ಟಿದೆ.

ಟೈಟನ್ ಎಂ-ಕ್ಯಾಪ್ ₹22,527 ಕೋಟಿ ಇಳಿಕೆ

2023-24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಟೈಟನ್ ಕಂಪನಿ ನಿರೀಕ್ಷಿಸಿದಷ್ಟು ಗಳಿಕೆ ಕಾಣದ್ದರಿಂದ ಸೋಮವಾರ ಕಂಪನಿಯ ಷೇರಿನ ಮೌಲ್ಯ ಶೇ 7ರಷ್ಟು ಇಳಿಕೆಯಾಗಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಬೆಲೆ ಕ್ರಮವಾಗಿ ₹3,281 ಮತ್ತು ₹3,284ಕ್ಕೆ ಕುಸಿದಿದೆ. ಇದರಿಂದ ಕಂಪನಿಯ ಮಾರುಕಟ್ಟೆ ಮೌಲ್ಯ (ಎಂ-ಕ್ಯಾಪ್) ಒಂದೇ ದಿನ ₹22,537 ಕೋಟಿ ಕರಗಿದ್ದು, ಕಂಪನಿಯ ಒಟ್ಟು ಮಾರುಕಟ್ಟೆ ಮೌಲ್ಯ ₹2.91 ಲಕ್ಷ ಕೋಟಿಗೆ ಇಳಿದಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿ ₹771 ಕೋಟಿ ತೆರಿಗೆ ನಂತರದ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹736 ಕೋಟಿ ಲಾಭ ಗಳಿಸಿತ್ತು.

ಕೋಟಕ್ ಬ್ಯಾಂಕ್ ಷೇರಿನ ಮೌಲ್ಯ ಏರಿಕೆ

ಮಾರ್ಚ್ ತ್ರೈಮಾಸಿಕದಲ್ಲಿ ಕೋಟಕ್ ಮಹೀಂದ್ರ ಬ್ಯಾಂಕ್‌ನ ನಿವ್ವಳ ಲಾಭದಲ್ಲಿ ಶೇ 25ರಷ್ಟು ಹೆಚ್ಚಳವಾಗಿದೆ. ಇದರಿಂದ ಬ್ಯಾಂಕ್‌ನ ಷೇರಿನ ಮೌಲ್ಯ ಶೇ 5ರಷ್ಟು ಏರಿಕೆಯಾಗಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಬೆಲೆ ₹1,624ಕ್ಕೆ ಮುಟ್ಟಿದೆ. ಷೇರಿನ ಮೌಲ್ಯ ಏರಿಕೆಯಿಂದ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ₹15,406 ಕೋಟಿ ಸೇರ್ಪಡೆಯಾಗಿದೆ. ಒಟ್ಟು ಎಂ-ಕ್ಯಾಪ್ ₹3.22 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಇಂದು ಬೋಯಿಂಗ್ ಸ್ಟಾರ್‌ಲೈನರ್ ಗಗನನೌಕೆ ಉಡಾವಣೆ

3ನೇ ಅಂತರಿಕ್ಷಯಾನಕ್ಕೆ ಸುನಿತಾ ಸಿದ್ಧ



ಸುನಿತಾ ವಿಲಿಯಮ್ಸ್

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಅವರು ಮೂರನೇ ಬಾರಿಗೆ ಬಾಹ್ಯಾಕಾಶಯಾನ ಕೈಗೊಳ್ಳಲು ಸಿದ್ಧರಾಗಿದ್ದಾರೆ.

ಬೋಯಿಂಗ್‌ನ ಸ್ಟಾರ್‌ಲೈನರ್ ಗಗನನೌಕೆಯು ಮಂಗಳವಾರ ಮೊದಲ ಬಾರಿಗೆ ಗಗನಯಾತ್ರಿಗಳನ್ನು ಹೊತ್ತು ಪರೀಕ್ಷಾರ್ಥ ಹಾರಾಟ ನಡೆಸಲಿದೆ. ಸುನಿತಾ ಹಾಗೂ ಮತ್ತೊಬ್ಬ ಗಗನಯಾತ್ರಿ ಬುಚ್ ವಿಲ್ಮೋರ್ ಅವರು ಈ ವೇಳೆ ಗಗನನೌಕೆಯಲ್ಲಿರಲಿದ್ದಾರೆ.


ಅಮೆರಿಕದ ಫ್ಲಾರಿಡಾದ ಕೇಪ್ ಕೆನವೆರಲ್‌ನಿಂದ ಈ ಗಗನನೌಕೆಯು ಮಂಗಳವಾರ ಬೆಳಿಗ್ಗೆ ಭಾರತೀಯ ಕಾಲಮಾನ 8:04ಕ್ಕೆ ಉಡಾವಣೆಯಾಗಲಿದೆ. ಅಂತರ ರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ (ಐಎಸ್‌ಎಸ್) ಗಗನಯಾತ್ರಿಗಳನ್ನು ಈ ನೌಕೆ ಹೊತ್ತೊಯ್ಯಲಿದೆ.

'ನಾವು ಬಾಹ್ಯಾಕಾಶಯಾನಕ್ಕೆ ಸಿದ್ಧರಾಗಿದ್ದೇವೆ. ಈ ಗಗನಯಾನದಲ್ಲಿ ಪಾಲ್ಗೊಳ್ಳುತ್ತಿರುವುದು ನಮ್ಮ ಕುಟುಂಬ ಮತ್ತು ಸ್ನೇಹಿತರಲ್ಲಿ ಸಂತಸ ಮೂಡಿಸಿದೆ' ಎಂದು ಸುನಿತಾ ಅವರು ಬಿಬಿಸಿಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಬೋಯಿಂಗ್‌ನ ಮಹತ್ವಾಕಾಂಕ್ಷಿ ಅಂತರಿಕ್ಷಯಾನ ಇದಾಗಿದ್ದು, ಗಗನನೌಕೆ ಅಭಿವೃದ್ಧಿಯಲ್ಲಿ ಹಲವು ತೊಡಕುಗಳು ಉಂಟಾದ ಕಾರಣ ಹಲವು ವರ್ಷಗಳ ಕಾಲ ಈ ಬಾಹ್ಯಾಕಾಶ ಯೋಜನೆ ಸ್ಥಗಿತವಾಗಿತ್ತು. ಈ ಯೋಜನೆ ಯಶಸ್ವಿಯಾದರೆ, ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರಕ್ಕೆ ಮಾನವ ಸಹಿತ ನೌಕೆ ಕಳುಹಿಸಿದ ಎರಡನೇ ಖಾಸಗಿ ಸಂಸ್ಥೆ ಎಂಬ ಹೆಗ್ಗಳಿಕೆಗೆ ಬೋಯಿಂಗ್ ಸಂಸ್ಥೆ ಪಾತ್ರವಾಗಲಿದೆ.

ಎಲಾನ್ ಮಸ್ಕ್ ಅವರ 'ಸ್ಪೇಸ್‌ಎಕ್ಸ್' ಸಂಸ್ಥೆ ಈ ಮೊದಲು ಐಎಸ್‌ಎಸ್‌ಗೆ ಗಗನನೌಕೆ ಉಡಾವಣೆ ಮಾಡಿತ್ತು.

ಪನಾಮ ಅಧ್ಯಕ್ಷರಾಗಿ ಹೋಸೆ ರೌಲ್ ಮುಲಿನೊ



ಹೋಸೆ ರೌಲ್ ಮುಲಿನೊ

ಪನಾಮ ನಗರ (ಎಪಿ): ಆರು ತಿಂಗಳ ಹಿಂದಷ್ಟೆ ರಾಜಕೀಯ ನಿವೃತ್ತಿ ಘೋಷಿಸಿದ್ದ ಹೋಸೆ ರೌಲ್ ಮುಲಿನೊ ಅವರು ಇದೀಗ ಆಶ್ಚರ್ಯಕರ ರೀತಿಯಲ್ಲಿ ಪನಾಮ ಅಧ್ಯಕ್ಷರಾಗಿ ಆಯ್ಕೆಯಾಗಿ-ದ್ದಾರೆ.

ವೃತ್ತಿಯಲ್ಲಿ ವಕೀಲರಾದ 64 ವರ್ಷದ ಹೋಸೆ ಅವರು 2009ರಿಂದ 2014ರವರೆಗೆ ಅಂದಿನ ಅಧ್ಯಕ್ಷ ರಿಕಾರ್ಡೊ ಮಾರ್ಟಿನೆಲ್ಲಿ ಅವರ ಆಡಳಿತದಲ್ಲಿ ಭದ್ರತಾ ಸಚಿವ-ರಾಗಿದ್ದರು.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಾಜಿ ಅಧ್ಯಕ್ಷ ರಿಕಾರ್ಡೊ ಅವರು 10 ವರ್ಷಕ್ಕಿಂತ ಅಧಿಕ ಅವಧಿಯ ಜೈಲುಶಿಕ್ಷೆಗೆ ಗುರಿಯಾದರು. ಇದರಿಂದ ಅವರು ಈ ಬಾರಿ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗಲಿಲ್ಲ.

ಕೊನೆಯ ಕ್ಷಣದಲ್ಲಿ ಅಭ್ಯರ್ಥಿಯಾಗಿ ಹೋಸೆ ಚುನಾವಣೆಯಲ್ಲಿ ಸ್ಪರ್ಧಿಸಿ, ಶೇ 35ರಷ್ಟು ಮತಗಳೊಂದಿಗೆ ಭಾನುವಾರ ರಾತ್ರಿ ಪನಾಮ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. 'ನಾನು ಇದನ್ನು ಎಂದಿಗೂ ಊಹಿಸಿಯೇ ಇರಲಿಲ್ಲ' ಎಂದು ಹೋಸೆ ಹೇಳಿದ್ದಾರೆ.

ದಯವಿಟ್ಟು ಬನ್ನಿ: ಭಾರತೀಯರಿಗೆ ಮಾಲ್ದೀವ್ಸ್ ಮನವಿ



ದುಬೈ (ಪಿಟಿಐ): ಭಾರತ ಮತ್ತು ಮಾಲ್ದೀವ್ಸ್ ದ್ವಿಪಕ್ಷೀಯ ಸಂಬಂಧ ಹದಗೆಟ್ಟ ಬೆನ್ನಲ್ಲೇ ಮಾಲ್ದೀವ್ಸ್‌ಗೆ ಭೇಟಿ ನೀಡುವ ಭಾರತೀಯ ಪ್ರವಾಸಿಗರ ಸಂಖ್ಯೆ ಕ್ಷೀಣಿಸುತ್ತಿದೆ.

ಪ್ರವಾಸೋದ್ಯಮವನ್ನೇ ಅವಲಂಬಿಸಿರುವ ರಾಷ್ಟ್ರ ಮಾಲ್ದೀವ್ಸ್. ಅಲ್ಲಿನ ಪ್ರವಾಸೋದ್ಯಮ ಸಚಿವರು ತಮ್ಮ ರಾಷ್ಟ್ರದ ಪ್ರವಾಸೋದ್ಯಮಕ್ಕೆ ಕೊಡುಗೆ ನೀಡುವಂತೆ ಭಾರತೀಯರಲ್ಲಿ ಮನವಿ ಮಾಡಿದ್ದಾರೆ.

ದುಬೈನಲ್ಲಿ ಪಿಟಿಐ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಮಾಲ್ದೀವ್ಸ್ ಪ್ರವಾಸೋದ್ಯಮ ಸಚಿವ ಇಬ್ರಾಹಿಂ ಫೈಸಲ್, ಭಾರತ ಮತ್ತು ಮಾಲ್ದೀವ್ಸ್ ನಡುವಿನ ಐತಿಹಾಸಿಕ ಸಂಬಂಧಗಳ ಕುರಿತು ಒತ್ತಿ ಹೇಳಿದರು.

'ಮಾಲ್ದೀವ್ಸ್ ಸರ್ಕಾರವು ಭಾರತದೊಂದಿಗೆ ಕಾರ್ಯ ನಿರ್ವಹಿಸಲು ಬಯಸುತ್ತದೆ. ನಾವು ಯಾವಾಗಲೂ ಶಾಂತಿ ಮತ್ತು ಸೌಹಾರ್ದಯುತ ವಾತಾವರಣವನ್ನು ಉತ್ತೇಜಿಸುತ್ತೇವೆ. ನಮ್ಮ ಜನರು ಭಾರತೀಯರ ಆಗಮನಕ್ಕೆ ಆತ್ಮೀಯ ಸ್ವಾಗತ ನೀಡಲಿದ್ದಾರೆ. ದಯವಿಟ್ಟು ಮಾಲ್ದೀವ್ಸ್ ಪ್ರವಾಸೋದ್ಯಮದ ಭಾಗವಾಗಿ ಎಂದು ಪ್ರವಾಸೋದ್ಯಮ ಸಚಿವನಾಗಿ ನಾನು ಭಾರತೀಯರಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಆರ್ಥಿಕತೆಯು ಪ್ರವಾಸೋದ್ಯಮದ ಮೇಲೆಯೇ ಅವಲಂಬಿತವಾಗಿದೆ' ಎಂದು ವಿನಂತಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಗೋಯಲ್‌ಗೆ ಜಾಮೀನು

ಮುಂಬೈ (ಪಿಟಿಐ): ಜೆಟ್ ಏರ್‌ವೇಸ್ ಸಂಸ್ಥಾಪಕ ನರೇಶ್ ಗೋಯಲ್ ಅವರಿಗೆ ಎರಡು ತಿಂಗಳ ಕಾಲ ಮಧ್ಯಂತರ ಜಾಮೀನು ಮಂಜೂರು ಮಾಡಿ ಬಾಂಬೆ ಹೈಕೋರ್ಟ್ ಸೋಮವಾರ ಆದೇಶ ಹೊರಡಿಸಿದೆ.

ನ್ಯಾಯಮೂರ್ತಿ ಎನ್.ಜೆ.ಜಾಮದಾರ್ ಅವರು, 'ಗೋಯಲ್ ಆರೋಗ್ಯ ದೃಷ್ಟಿಯಿಂದ ಜಾಮೀನು ನೀಡಲಾಗಿದೆ. ಅವರು ₹1 ಲಕ್ಷ ಠೇವಣಿ ಇಡಬೇಕು ಮತ್ತು ವಿಚಾರಣಾ ನ್ಯಾಯಾಲಯದ ಅನುಮತಿ ಇಲ್ಲದೆ ಮುಂಬೈನಿಂದ ಹೊರಗೆ ಹೋಗಬಾರದು' ಎಂದು ಹೇಳಿದರು. ಪಾಸ್‌ಪೋರ್ಟ್ ವಶಕ್ಕೆ ಒಪ್ಪಿಸುವಂತೆಯೂ ತಿಳಿಸಿದರು.

ಗೋಯಲ್ ಮತ್ತು ಅವರ ಪತ್ನಿ ಅನಿತಾ ಗೋಯಲ್ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ.

ಉಮರ್ ಅನ್ಸಾರಿಗೆ ನಿರೀಕ್ಷಣಾ ಜಾಮೀನು

ನವದೆಹಲಿ (ಪಿಟಿಐ): 2022ರಲ್ಲಿ ಉತ್ತರ ಪ್ರದೇಶ ವಿಧಾನಸಭೆಗೆ ನಡೆದ ಚುನಾವಣೆಯ ಸಂದರ್ಭದಲ್ಲಿ ನೀತಿ ಸಂಹಿತೆಯನ್ನು ಉಲ್ಲಂಘಿಸಿದ ಪ್ರಕರಣದಲ್ಲಿ ಉಮರ್ ಅನ್ಸಾರಿ ಅವರಿಗೆ ಸುಪ್ರೀಂ ಕೋರ್ಟ್ ಸೋಮವಾರ ನಿರೀಕ್ಷಣಾ ಜಾಮೀನು ನೀಡಿದೆ.

ಉಮರ್ ಅವರು ಪಾತಕಿ ಹಾಗೂ ರಾಜಕಾರಣಿ ಮುಖ್ತಾರ್ ಅನ್ಸಾರಿಯ ಮಗ.

ನ್ಯಾಯಮೂರ್ತಿಗಳಾದ ರಿಷಿಕೇಶ್ ರಾಯ್ ಮತ್ತು ಪಿ.ಕೆ. ಮಿಶ್ರಾ ಅವರು ಇದ್ದ ವಿಭಾಗೀಯ ಪೀಠವು ಉಮರ್ ಅವರಿಗೆ ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗುವಂತೆ ಸೂಚಿಸಿ, ಆ ನ್ಯಾಯಾಲಯವು ಜಾಮೀನು ನೀಡಲಿದೆ ಎಂದು ತಿಳಿಸಿತು. ಉಮರ್ ಅವರಿಗೆ ಜಾಮೀನು ನೀಡಲು ಅಲಹಾಬಾದ್ ಹೈಕೋರ್ಟ್ ಡಿಸೆಂಬರ್ 19ರಂದು ನಿರಾಕರಿಸಿತ್ತು.

ಕವಿತಾ ಜಾಮೀನು ಅರ್ಜಿ ವಜಾ

ನವದೆಹಲಿ(ಪಿಟಿಐ): ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಮತ್ತು ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾಮೀನು ಕೋರಿ ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರು ಸಲ್ಲಿಸಿದ್ದ ಅರ್ಜಿಯನ್ನು ಇಲ್ಲಿನ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ಸಿಬಿಐ ಮತ್ತು ಜಾರಿನಿರ್ದೇಶನಾಲಯದ ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ ಅವರು, 'ಜಾಮೀನು ನೀಡಲು ಇದು ಸಕಾಲವಲ್ಲ' ಎಂದು ಹೇಳಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಕವಿತಾ ಅವರನ್ನು ಮಾ.15ರಂದು ಬಂಧಿಸಲಾಗಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಸುಪ್ರೀಂ ಕೋರ್ಟ್‌ಗೆ ಸೊರೇನ್ ಅರ್ಜಿ

ನವದೆಹಲಿ(ಪಿಟಿಐ): ಜಾರಿ ನಿರ್ದೇಶನಾಲಯವು (ಇ.ಡಿ) ತಮ್ಮನ್ನು ಬಂಧಿಸಿರುವ ಕ್ರಮ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಜಾರ್ಖಂಡ್ ಹೈಕೋರ್ಟ್ ವಜಾಗೊಳಿಸಿರುವುದನ್ನು ಪ್ರಶ್ನಿಸಿ ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಜಮೀನು ಹಗರಣವೊಂದಕ್ಕೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸೊರೇನ್ ಅವರನ್ನು ಬಂಧಿಸಲಾಗಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಮೂವರು ನ್ಯಾಯಮೂರ್ತಿಗಳ ಪೀಠದ ಎದುರು ಸೊರೇನ್ ಪರವಾಗಿ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, ಅರ್ಜಿಯನ್ನು ತ್ವರಿತವಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಮನವಿ ಮಾಡಿದರು.

ಲೋಕಸಭಾ ಚುನಾವಣೆಯ ಭಾಗವಾಗಿ ಜಾರ್ಖಂಡ್ ರಾಜ್ಯದಲ್ಲಿ ಮತದಾನವು ಮೇ 13ರಿಂದ ಶುರುವಾಗಲಿದೆ. ಸೊರೇನ್ ಅವರಿಗೆ ತಮ್ಮ ಜೆಎಂಎಂ ಪಕ್ಷದ ಪರವಾಗಿ ಪ್ರಚಾರ ನಡೆಸಲು ಅವಕಾಶ ನೀಡಬೇಕು ಎಂದು ಸಿಬಲ್ ಕೋರಿದರು.

ಸುಪ್ರೀಂ ಕೋರ್ಟ್ ಜಾಮೀನು ಅರ್ಜಿ ಪರಿಗಣಿಸಿದ್ದ ದಿನವೇ ಲೆಫ್ಟಿನೆಂಟ್ ಗವರ್ನರ್ ಶಿಫಾರಸು

ಕೇಜ್ರಿವಾಲ್ ವಿರುದ್ಧ ಎನ್‌ಐಎ ತನಿಖೆ?

ಪ್ರಜಾವಾಣಿ ವಾರ್ತೆ

ನವದೆಹಲಿ: 'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ತನಿಖೆಗೆ ಒಳಪಡಿಸಬೇಕು' ಎಂದು ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ಕೇಂದ್ರ ಗೃಹ ಸಚಿವಾಲಯಕ್ಕೆ ಶಿಫಾರಸು ಮಾಡಿದ್ದಾರೆ.

ಕೇಜ್ರಿವಾಲ್ ಅವರು ಖಾಲಿಸ್ತಾನ್ ಪ್ರತ್ಯೇಕತಾವಾದಿ ಸಂಘಟನೆ 'ಸಿಖ್ ಫಾರ್ ಜಸ್ಟೀಸ್'ನಿಂದ (ಎಸ್‌ಎಫ್‌ಜೆ) ಸುಮಾರು ₹133.58 ಕೋಟಿ (16 ಮಿಲಿಯನ್ ಡಾಲರ್) ದೇಣಿಗೆಯನ್ನು ಪಡೆದಿದ್ದಾರೆ ಎಂಬ ದೂರಿಗೆ ಸಂಬಂಧಿಸಿದಂತೆ ಈ ಶಿಫಾರಸು ಮಾಡಿದ್ದಾರೆ.

ಆದರೆ, ಈ ಆರೋಪವನ್ನು ಆಮ್ ಆದ್ಮಿ ಪಕ್ಷವು (ಎಎಪಿ) ಸ್ಪಷ್ಟವಾಗಿ ತಳ್ಳಿಹಾಕಿದೆ. ಎನ್‌ಐಎ ತನಿಖೆಗೆ ಶಿಫಾರಸು ಮಾಡಿ ಲೆಫ್ಟಿನಂಟ್ ಗವರ್ನರ್ ಅವರು ಕೇಂದ್ರ ಗೃಹ ಸಚಿವಾಲಯಕ್ಕೆ ಶುಕ್ರವಾರ ಪತ್ರ ಬರೆದಿದ್ದಾರೆ.

ಮುಖ್ಯಾಂಶಗಳು
- 'ಸಿಖ್ ಫಾರ್ ಜಸ್ಟೀಸ್'ನಿಂದ ದೇಣಿಗೆ ಪಡೆದ ಆರೋಪ
- ಏ. 1ರಂದು ಎಲ್.ಜಿ.ಗೆ ದೂರು

ಕೇಜ್ರಿವಾಲ್ ಅವರು ಸಲ್ಲಿಸಿದ್ದ ಮಧ್ಯಂತರ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಪರಿಗಣಿಸಿದ್ದ ದಿನವೇ ಲೆಫ್ಟಿನೆಂಟ್ ಗವರ್ನರ್ ಪತ್ರ ಬರೆದಿದ್ದರೆ, ಆ ಅರ್ಜಿಯು ವಿಚಾರಣೆಗೆ ಬರುವ ಮುನ್ನಾದಿನ ಸಾರ್ವತ್ರಿಕವಾಗಿ ಬಯಲಾಗಿದೆ.

ಈ ಬೆಳವಣಿಗೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಸಚಿವ ಸೌರಭ್ ಭಾರದ್ವಾಜ್, 'ಲೆಫ್ಟಿನೆಂಟ್ ಗವರ್ನರ್ ಬಿಜೆಪಿಯ ಏಜೆಂಟ್' ಎಂದು ಟೀಕಿಸಿದ್ದಾರೆ. 'ಇದು, ಕೇಂದ್ರದ ಆಡಳಿತ ಪಕ್ಷದ ಪರವಾಗಿ ನಡೆದಿರುವ ದೊಡ್ಡ ಸಂಚು' ಎಂದೂ ಆರೋಪಿಸಿದ್ದಾರೆ.

'ಲೋಕಸಭೆ ಚುನಾವಣೆಯಲ್ಲಿ ದೆಹಲಿಯ ಎಲ್ಲ ಏಳು ಕ್ಷೇತ್ರಗಳಲ್ಲಿ ಪರಾಭವಗೊಳ್ಳುವ ಭೀತಿಯು ಬಿಜೆಪಿಯನ್ನು ಕಾಡುತ್ತಿದೆ. ಅಲ್ಲದೆ, ಈ ಸಂಚನ್ನು ಪಂಜಾಬ್ ವಿಧಾನಸಭೆ ಚುನಾವಣೆಗೂ ಮೊದಲೇ ರೂಪಿಸಲಾಗಿತ್ತು' ಎಂದು ಟೀಕಿಸಿದ್ದಾರೆ.

ವಿಶ್ವ ಹಿಂದೂ ಫೆಡರೇಷನ್‌ನ ಭಾರತ ಘಟಕದ ಪ್ರಧಾನ ಕಾರ್ಯದರ್ಶಿ ಆಶೂ ಮೊಂಗಿಯಾ ಅವರು ಏಪ್ರಿಲ್ 1ರಂದು ನೀಡಿದ್ದ ದೂರು ಆಧರಿಸಿ ರಾಜ್ಯಪಾಲರು ಈ ಕ್ರಮ ಕೈಗೊಂಡಿದ್ದಾರೆ.

ಖಾಲಿಸ್ತಾನ ಪರ ಸಂಘಟನೆಗಳಿಂದ ಕೇಜ್ರಿವಾಲ್ ಅವರು ದೇಣಿಗೆ ಪಡೆದಿದ್ದಾರೆ ಎಂದು ಎಸ್‌ಎಫ್‌ಜೆ ಮುಖ್ಯಸ್ಥ ಗುರುಪತ್ವಂತ್ ಸಿಂಗ್ ಪನ್ನೂ ಅವರು ಹೇಳಿದ್ದಾರೆ ಎನ್ನಲಾದ ವಿಡಿಯೊವನ್ನು ಆಧರಿಸಿ ಮೊಂಗಿಯಾ ದೂರು ನೀಡಿದ್ದರು.

ಕೇಜ್ರಿವಾಲ್ ಅವರು ಸಿಖ್ ನಾಯಕರನ್ನು ನ್ಯೂಯಾರ್ಕ್‌ನಲ್ಲಿ 2014ರಲ್ಲಿ ಭೇಟಿಯಾಗಿದ್ದರು. ಅಲ್ಲದೆ, ಖಾಲಿಸ್ತಾನ್ ಪರ ನಾಯಕರ ಜೊತೆಗೆ ಗೋಪ್ಯವಾಗಿ ಚರ್ಚಿಸಿದ್ದರು. ಮರಣದಂಡನೆ ಶಿಕ್ಷೆಗೀಡಾಗಿದ್ದ ದೇವಿಂದರ್ ಪಾಲ್ ಸಿಂಗ್ ಭುಲ್ಲರ್ ಅವರಿಗೆ ಕ್ಷಮೆ ಕೋರಿ ಆಗಿನ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರಿಗೆ ಪತ್ರ ಬರೆದಿದ್ದರು ಎಂಬ ಎಎಪಿ ಟ್ವೀಟ್ ಅನ್ನೂ ಪೂರಕವಾಗಿ ಉಲ್ಲೇಖಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ವಿರುದ್ಧ ಆರೋಪಗಳಿರುವುದು ಹಾಗೂ ಕೋಟ್ಯಂತರ ಮೊತ್ತವನ್ನು ಭಾರತದಲ್ಲಿ ಈಗ ನಿಷೇಧಿಸಿರುವ ಸಂಘಟನೆಯಿಂದ ದೇಣಿಗೆ ಪಡೆದಿದ್ದಾರೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ವಿಸ್ತೃತ ತನಿಖೆ ಅಗತ್ಯವಿದೆ. ಪ್ರಕರಣದ ಸೂಕ್ಷ್ಮತೆ, ಆರೋಪಗಳ ಗಂಭೀರತೆ ಹಿನ್ನೆಲೆಯಲ್ಲಿ ಎನ್‌ಐಎ ತನಿಖೆಗೆ ಪರಿಗಣಿಸಬಹುದಾಗಿದೆ ಎಂದು ಸಲಹೆ ಮಾಡಿದ್ದಾರೆ ಎಂದು ತಿಳಿಸಿವೆ.

ಟ್ರ್ಯಾಕ್ಟರ್ ಹತ್ತಿಸಿ ಪೊಲೀಸ್ ಹತ್ಯೆಗೈದವರ ಮನೆ ನೆಲಸಮ

ಶಾಹಡೋಲ್ (ಮಧ್ಯಪ್ರದೇಶ) (ಪಿಟಿಐ): ಅಕ್ರಮ ಮರಳು ಗಣಿಗಾರಿಕೆ ನಡೆಸುತ್ತಿದ್ದ ವೇಳೆ ಟ್ರ್ಯಾಕ್ಟರ್ ಹತ್ತಿಸಿ ಪೊಲೀಸ್ ಅಧಿಕಾರಿಯನ್ನು ಕೊಂದ ಪ್ರಕರಣದ ಇಬ್ಬರು ಆರೋಪಿಗಳ ಮನೆಗಳನ್ನು ನೆಲಸಮ ಮಾಡಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದರು.

ಟ್ರ್ಯಾಕ್ಟರ್ ಮಾಲೀಕ ಸುರೇಂದ್ರ ಸಿಂಗ್ ತಲೆಮರೆಸಿಕೊಂಡಿದ್ದರು. ಭಾನುವಾರ ರಾತ್ರಿ ಅವರನ್ನು ಬಂಧಿಸಲಾಗಿದೆ. ಘಟನೆ ಸಂದರ್ಭದಲ್ಲಿ ಸುರೇಂದ್ರ ಸಿಂಗ್ ಪುತ್ರ ಆಶುತೋಷ್ ಸಿಂಗ್ ಟ್ರ್ಯಾಕ್ಟರ್ ಮೇಲಿದ್ದರು. ಚಾಲಕ ರಾಜ್ ರಾವತ್‌ನನ್ನು ಈಗಾಗಲೇ ಬಂಧಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಕುಮಾರ್ ಪ್ರತೀಕ್ ತಿಳಿಸಿದರು.

ಜಿಲ್ಲಾಧಿಕಾರಿ ತರುಣ್ ಭಟ್ನಾಗರ್ ಆದೇಶದ ಮೇರೆಗೆ ಭಾನುವಾರ ಚಾಲಕನ ಸುಮಾರು ₹4 ಲಕ್ಷ ಮೌಲ್ಯದ ಮನೆಯನ್ನು ನೆಲಸಮ ಮಾಡಲಾಗಿದೆ. ಟ್ರ್ಯಾಕ್ಟರ್ ಮಾಲೀಕ ಸಿಂಗ್ ಅವರ ಸುಮಾರು ₹10 ಲಕ್ಷ ಮತ್ತು ₹4 ಲಕ್ಷ ಮೌಲ್ಯದ ಎರಡು ಮನೆಗಳನ್ನೂ ನೆಲಸಮ ಮಾಡಲಾಗಿದೆ ಎಂದು ತಿಳಿಸಿದರು.

ಮೃತಪಟ್ಟಿರುವ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಮಹೇಂದ್ರ ಬಾಗ್ರಿ ಅವರ ಕುಟುಂಬಕ್ಕೆ ₹1 ಕೋಟಿ ಪರಿಹಾರ ನೀಡುವ ಪ್ರಸ್ತಾವವನ್ನು ಚುನಾವಣಾ ಆಯೋಗಕ್ಕೆ ಕಳುಹಿಸಿಕೊಡಲಾಗಿದೆ ಎಂದು ಮುಖ್ಯಮಂತ್ರಿಗಳ ಕಚೇರಿ ತಿಳಿಸಿದೆ.

ಶಾಹಡೋಲ್‌ನಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿರುವುದು ತಿಳಿದು ಟ್ರ್ಯಾಕ್ಟರ್ ನಿಲ್ಲಿಸಲು ಮುಂದಾದ ವೇಳೆ ಟ್ರಾಲಿ ಹತ್ತಿಸಿ ಪೊಲೀಸ್ ಅಧಿಕಾರಿಯೊಬ್ಬರನ್ನು ಹತ್ಯೆ ಮಾಡಲಾಗಿತ್ತು.

'ಗರ್ಭಪಾತ: ಬಾಲಕಿಯ ಅಭಿಪ್ರಾಯ ಮುಖ್ಯ'

ಪ್ರಜಾವಾಣಿ ವಾರ್ತೆ

ನವದೆಹಲಿ: ಆಯ್ಕೆಯ ಹಕ್ಕು ಹಾಗೂ ಸಂತಾನೋತ್ಪತ್ತಿಯ ಸ್ವಾತಂತ್ರ್ಯವು ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಮೂಲಭೂತ ಹಕ್ಕು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಬಾಲಕಿಯೊಬ್ಬಳು ಗರ್ಭಿಣಿಯಾಗಿದ್ದಾಗ ಆಕೆಯ ಅಭಿಪ್ರಾಯವು ಪೋಷಕರ ಅಭಿಪ್ರಾಯಕ್ಕಿಂತ ಭಿನ್ನವಾಗಿದ್ದರೆ ನ್ಯಾಯಾಲಯವು ಗರ್ಭಪಾತದ ಬಗ್ಗೆ ತೀರ್ಮಾನ ಕೈಗೊಳ್ಳುವಾಗ ಬಾಲಕಿಯ ಅಭಿಪ್ರಾಯವನ್ನು ಮುಖ್ಯವೆಂದು ಪರಿಗಣಿಸಬೇಕು ಎಂದು ಹೇಳಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಇದ್ದ ತ್ರಿಸದಸ್ಯ ನ್ಯಾಯಪೀಠವು 14 ವರ್ಷ ವಯಸ್ಸಿನ ಅತ್ಯಾಚಾರ ಸಂತ್ರಸ್ತೆಯೊಬ್ಬಳ ಪ್ರಕರಣದಲ್ಲಿ ಈ ಮಾತು ಹೇಳಿದೆ.

'ಸಂತಾನೋತ್ಪತ್ತಿಯ ವಿಚಾರದಲ್ಲಿ ಹಾಗೂ ಗರ್ಭಪಾತದ ವಿಚಾರದಲ್ಲಿ ಗರ್ಭಿಣಿಯ ಅಭಿಪ್ರಾಯವು ಬಹಳ ಮುಖ್ಯವಾಗುತ್ತದೆ. ಗರ್ಭಿಣಿ ಹಾಗೂ ಆಕೆಯ ಪೋಷಕರ ನಡುವೆ ಅಭಿಪ್ರಾಯಭೇದ ಇದ್ದಲ್ಲಿ, ನ್ಯಾಯಸಮ್ಮತವಾದ ತೀರ್ಮಾನವನ್ನು ಕೈಗೊಳ್ಳುವಾಗ ಅಪ್ರಾಪ್ತ ವಯಸ್ಸಿನ ಅಥವಾ ಗರ್ಭಿಣಿ ಅಥವಾ ಮಾನಸಿಕವಾಗಿ ಆರೋಗ್ಯಪೂರ್ಣವಾಗಿ ಇರದ ವ್ಯಕ್ತಿಯ ಅಭಿಪ್ರಾಯವನ್ನು ಬಹುಮುಖ್ಯ ಅಂಶವಾಗಿ ಸ್ವೀಕರಿಸಬೇಕು' ಎಂದು ಪೀಠವು ಹೇಳಿದೆ.

ಈ ಪ್ರಕರಣದಲ್ಲಿ ಗರ್ಭಪಾತವನ್ನು ಮಾಡದೆ ಇರಲು ಅಪ್ರಾಪ್ತ ವಯಸ್ಸಿನ ಸಂತ್ರಸ್ತೆ ಹಾಗೂ ಪೋಷಕರು ತೀರ್ಮಾನಿಸಿದ್ದಾರೆ. ಈ ಅಭಿಪ್ರಾಯವನ್ನು ಒಪ್ಪಿಕೊಳ್ಳಬೇಕು ಎಂದು ಪೀಠ ಹೇಳಿದೆ. ವೈದ್ಯಕೀಯ ಗರ್ಭಪಾತ ಕಾಯ್ದೆಯು, ಗರ್ಭಪಾತದ ಬಗ್ಗೆ ಸದುದ್ದೇಶದಿಂದ ನೀಡುವ ಅಭಿಪ್ರಾಯದ ವಿಚಾರವಾಗಿ ನೋಂದಾಯಿತ ವೈದ್ಯರು ಹಾಗೂ ವೈದ್ಯಕೀಯ ಮಂಡಳಿಗೆ ರಕ್ಷಣೆ ಒದಗಿಸುತ್ತದೆ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

'ವೈದ್ಯಕೀಯ ಗರ್ಭಪಾತ ಕಾಯ್ದೆಯ ಪ್ರಕಾರ ನೋಂದಾಯಿತ ವೈದ್ಯರು ಅಥವಾ ವೈದ್ಯಕೀಯ ಮಂಡಳಿಯ ಅಭಿಪ್ರಾಯವನ್ನು ಪಡೆಯುವುದು ಅನಿವಾರ್ಯ. ಆದರೆ ಇದು, ಗರ್ಭಪಾತದ ಬಗ್ಗೆ ತನ್ನ ಆಯ್ಕೆಯನ್ನು ಹೇಳುವ ಗರ್ಭಿಣಿಯ ಹಕ್ಕಿಗೆ ನೋಂದಾಯಿತ ವೈದ್ಯ ಅಥವಾ ವೈದ್ಯಕೀಯ ಮಂಡಳಿ ಅಡ್ಡಿಯಾಗುವಂತೆ ಮಾಡುತ್ತದೆ. ನೋಂದಾಯಿತ ವೈದ್ಯ ಅಥವಾ ವೈದ್ಯಕೀಯ ಮಂಡಳಿಯ ಮನಸ್ಸಿನಲ್ಲಿ ಭೀತಿ ಇದ್ದಾಗ, ಗರ್ಭಿಣಿಯ ಮೂಲಭೂತ ಹಕ್ಕುಗಳಿಗೆ ತೊಂದರೆ ಉಂಟಾಗುತ್ತದೆ' ಎಂದು ಕೂಡ ಅದು ಹೇಳಿದೆ.

ಡಿ.ಸಿ.ಗಳಿಗೆ ಕಿರುಕುಳ ಕೊಡಬೇಡಿ: ಇ.ಡಿ.ಗೆ ಕೋರ್ಟ್ ಸೂಚನೆ

ನವದೆಹಲಿ (ಪಿಟಿಐ): ತಮಿಳುನಾಡಿನ ಐದು ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನಗತ್ಯವಾಗಿ ಕಿರುಕುಳ ನೀಡಬಾರದು ಎಂದು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳಿಗೆ ಸುಪ್ರೀಂ ಕೋರ್ಟ್ ಸೋಮವಾರ ಸೂಚನೆ ನೀಡಿದೆ.

ಅಕ್ರಮ ಮರಳು ಗಣಿಗಾರಿಕೆಗೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಿಲ್ಲಾಧಿಕಾರಿಗಳನ್ನು ಇ.ಡಿ. ಕಚೇರಿಯಲ್ಲಿ ರಾತ್ರಿ 8.30ರವರೆಗೂ ಕೂರಿಸಿಕೊಳ್ಳಲಾಗಿತ್ತು ಎಂದು ರಾಜ್ಯ ಸರ್ಕಾರದ ಪರ ವಕೀಲರು ಸುಪ್ರೀಂ ಕೋರ್ಟ್‌ಗೆ ಹೇಳಿದ ನಂತರ, ಕೋರ್ಟ್ ಈ ಸೂಚನೆ ನೀಡಿದೆ.

ಕೋರ್ಟ್ ಆದೇಶ ಇದ್ದರೂ, ಜಿಲ್ಲಾಧಿಕಾರಿಗಳು ಇ.ಡಿ ಅಧಿಕಾರಿಗಳ ಎದುರು ಖುದ್ದಾಗಿ ಹಾಜರಾಗದೆ ಇದ್ದುದಕ್ಕೆ ಸುಪ್ರೀಂ ಕೋರ್ಟ್ ಏಪ್ರಿಲ್ 2ರಂದು ಅಸಮಾಧಾನ ವ್ಯಕ್ತಪಡಿಸಿತ್ತು. ಅಲ್ಲದೆ, ಇವರು ಇ.ಡಿ ಎದುರು ಏಪ್ರಿಲ್ 25ರಂದು ಹಾಜರಾಗಬೇಕು ಎಂದು ಸೂಚನೆ ನೀಡಿತ್ತು.

ರಾಜ್ಯ ಸರ್ಕಾರದ ಪರವಾಗಿ ಸೋಮವಾರ ವಿಚಾರಣೆ ಸಂದರ್ಭದಲ್ಲಿ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, ಜಿಲ್ಲಾಧಿಕಾರಿಗಳು ಇ.ಡಿ ಮುಂದೆ ಹಾಜರಾಗಿದ್ದರು ಎಂದು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಪಂಕಜ್ ಮಿತ್ತಲ್ ಅವರು ಇದ್ದ ವಿಭಾಗೀಯ ಪೀಠಕ್ಕೆ ತಿಳಿಸಿದರು.

ಅಧಿಕಾರಿಗಳು ಯಾವುದೇ ದಾಖಲೆಯನ್ನು ಅಥವಾ ವಿವರವನ್ನು ನೀಡಿಲ್ಲ ಎಂದು ಇ.ಡಿ. ಪರ ವಕೀಲರು ಹೇಳಿದರು. ಇದಕ್ಕೆ ಆಕ್ಷೇಪ ದಾಖಲಿಸಿದ ಸಿಬಲ್, ಸಮನ್ಸ್‌ನಲ್ಲಿ ಕೇಳಿದ್ದಕ್ಕೆ ಉತ್ತರ ಒದಗಿಸಲಾಗಿದೆ ಎಂದರು.

ಜಿಲ್ಲಾಧಿಕಾರಿಗಳು ಇ.ಡಿ ಎದುರು 11 ಗಂಟೆಗೆ ಬಂದರು. ಅವರನ್ನು ರಾತ್ರಿ 8.30ರವರೆಗೆ ಕೂರಿಸಿಕೊಳ್ಳಲಾಗಿತ್ತು ಎಂದು ಸಿಬಲ್ ಅವರು ಹೇಳಿದರು. 'ನೀವು ಈ ರೀತಿ ಮಾಡಬಾರದು' ಎಂದು ಪೀಠವು ಇ.ಡಿ ವಕೀಲರಿಗೆ ಹೇಳಿತು. 'ಅವರಿಗೆ ಅನಗತ್ಯವಾಗಿ ಕಿರುಕುಳ ನೀಡಬೇಡಿ' ಎಂದು ಕೂಡ ಪೀಠ ಸೂಚಿಸಿತು.

ಸಮನ್ಸ್ ಮೂಲಕ ಕೇಳಿದ್ದ ದಾಖಲೆಗಳ ಪೈಕಿ ಯಾವುದನ್ನು ಜಿಲ್ಲಾಧಿಕಾರಿಗಳು ಒದಗಿಸಿಲ್ಲ ಎಂಬ ಮಾಹಿತಿ ನೀಡುವಂತೆ ಇ.ಡಿ ಪರ ವಕೀಲರಿಗೆ ಸುಪ್ರೀಂ ಕೋರ್ಟ್ ತಿಳಿಸಿತು. ವಿಚಾರಣೆಯನ್ನು ಜುಲೈಗೆ ಮುಂದೂಡಲಾಗಿದೆ.

ಜಿಲ್ಲಾಧಿಕಾರಿಗಳು ಬಹಳ ಉದಾಸೀನದ ಧೋರಣೆಯನ್ನು ತಳೆದಿದ್ದಾರೆ, ಅವರಿಗೆ ಕೋರ್ಟ್, ಕಾನೂನು ಮತ್ತು ಸಂವಿಧಾನದ ಬಗ್ಗೆ ಗೌರವ ಇಲ್ಲ ಎಂಬುದು ಅವರ ನಡೆಯಿಂದ ಗೊತ್ತಾಗುತ್ತಿದೆ ಎಂದು ಪೀಠವು ಏ. 2ರಂದು ನಡೆದ ವಿಚಾರಣೆ ವೇಳೆ ಹೇಳಿತ್ತು.

ಸುಧಾರಿಸಿದ ಫಲಿತಾಂಶ ಮೆರಿಟ್ ಪಟ್ಟಿಗೆ ಕೊಕ್

ನವದೆಹಲಿ (ಪಿಟಿಐ): ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್ (ಸಿಐಎಸ್‌ಸಿಇ) 10 ಮತ್ತು 12ನೇ ತರಗತಿ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, ಎರಡೂ ಪರೀಕ್ಷೆಗಳಲ್ಲಿ ಬಾಲಕಿಯರೇ ಮುಂದಿದ್ದಾರೆ. ಈ ವರ್ಷ ಫಲಿತಾಂಶದಲ್ಲಿ ಗಣನೀಯವಾಗಿ ಸುಧಾರಣೆಯಾಗಿದೆ.

ಮಂಡಳಿಯ ಪ್ರಕಾರ, 10ನೇ ತರಗತಿಯ ಉತ್ತೀರ್ಣ ಪ್ರಮಾಣ ಶೇ 99.47ರಷ್ಟಿದ್ದರೆ, 12ನೇ ತರಗತಿಯ ಉತ್ತೀರ್ಣ ಪ್ರಮಾಣ ಶೇ 98.19ರಷ್ಟಿದೆ. ಕಳೆದ ವರ್ಷ ಈ ಪ್ರಮಾಣವು ಕ್ರಮವಾಗಿ ಶೇ 98.64 ಹಾಗೂ ಶೇ 96.63ರಷ್ಟಿತ್ತು.

'ಈ ವರ್ಷದಿಂದ ಮೆರಿಟ್ ಪಟ್ಟಿ ಪ್ರಕಟಿಸುವುದನ್ನು ಕೈಬಿಟ್ಟಿದ್ದೇವೆ. ವಿದ್ಯಾರ್ಥಿಗಳ ನಡುವೆ ಅನಾರೋಗ್ಯಕರ ಸ್ಪರ್ಧೆ ತಪ್ಪಿಸುವುದು ಇದರ ಉದ್ದೇಶ' ಎಂದು ಸಿಐಎಸ್‌ಸಿಇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾರ್ಯದರ್ಶಿ ಜೋಸೆಫ್ ಇಮ್ಯಾನ್ಯುಯೆಲ್ ತಿಳಿಸಿದರು.

ಕೇಂದ್ರ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಸಿಬಿಎಸ್‌ಇ) ಕೂಡ ಕಳೆದ ವರ್ಷವೇ ಮೆರಿಟ್ ಪಟ್ಟಿ ಪ್ರಕಟಿಸುವುದನ್ನು ಕೈಬಿಟ್ಟಿತ್ತು. ಕೋವಿಡ್ ಸಂದರ್ಭದಲ್ಲಿ ಪರೀಕ್ಷೆ ನಡೆಯದ ಕಾರಣಕ್ಕೆ ಸಿಐಎಸ್‌ಸಿಇ ಮತ್ತು ಸಿಬಿಎಸ್‌ಇ ಎರಡೂ ಮೆರಿಟ್ ಪಟ್ಟಿಯನ್ನು ಪ್ರಕಟಿಸಿರಲಿಲ್ಲ.

ಸಿಂಗಪುರ, ಇಂಡೊನೇಷ್ಯಾ, ದುಬೈನಲ್ಲಿರುವ ಶಾಲೆಗಳು 10ನೇ ತರಗತಿಯಲ್ಲಿ ಶೇ 100 ಫಲಿತಾಂಶದೊಂದಿಗೆ ಉತ್ತಮ ಸಾಧನೆ ಮಾಡಿವೆ. 12ನೇ ತರಗತಿ ಪರೀಕ್ಷೆಯಲ್ಲಿ ಸಿಂಗಪುರ ಮತ್ತು ದುಬೈನಲ್ಲಿರುವ ಶಾಲೆಗಳು ಈ ಸಾಧನೆಯನ್ನು ಮಾಡಿವೆ.

10ನೇ ತರಗತಿ ಪರೀಕ್ಷೆಗೆ 2,695 ಶಾಲೆಗಳ ವಿದ್ಯಾರ್ಥಿಗಳು ಹಾಜರಾಗಿದ್ದು, ಈ ಪೈಕಿ 2,223 ಶಾಲೆಗಳು (ಶೇ 82.48) ಶೇ 100ರಷ್ಟು ಸಾಧನೆ ಮಾಡಿವೆ. 12ನೇ ತರಗತಿಗೆ 1,366 ಶಾಲೆಗಳ ವಿದ್ಯಾರ್ಥಿಗಳು ಹಾಜರಾಗಿದ್ದು, 904 ಶಾಲೆಗಳು (ಶೇ 66.18) ಶೇ 100ರಷ್ಟು ಸಾಧನೆ ಮಾಡಿವೆ. ಒಟ್ಟಾರೆ, 10ನೇ ತರಗತಿಗೆ 2.43 ಲಕ್ಷ ವಿದ್ಯಾರ್ಥಿಗಳು, 12ನೇ ತರಗತಿಗೆ 99,901 ವಿದ್ಯಾರ್ಥಿಗಳು ಹಾಜರಾಗಿದ್ದರು.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಆರೋಪ

ಬಿಜೆಪಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

ನವದೆಹಲಿ (ಪಿಟಿಐ): 'ನೀಟ್' ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿವೆ ಎಂಬ ಸುದ್ದಿಗೆ ಸಂಬಂಧಿಸಿ ಬಿಜೆಪಿ ವಿರುದ್ಧ ಹರಿಹಾಯ್ದಿರುವ ಕಾಂಗ್ರೆಸ್ ಪಕ್ಷ, 'ಕಳೆದ ಹತ್ತು ವರ್ಷಗಳಿಂದ ಇಂತದೇ ಸ್ಥಿತಿ ಇದೆ. ಇದರಿಂದ ಅಸಂಖ್ಯ ವಿದ್ಯಾರ್ಥಿಗಳ ಭವಿಷ್ಯ ಹಾಳಾಗಿದೆ' ಎಂದು ಟೀಕಿಸಿದೆ.

ಯುವಜನರ ಮೇಲೆ ಪರಿಣಾಮ ಬೀರುತ್ತದೆ ಎಂಬ ಕಾರಣದಿಂದಲೇ ಈಗ ನಡೆಯುತ್ತಿರುವ ಲೋಕಸಭೆ ಚುನಾವಣೆಯಲ್ಲಿಯೂ ಉದ್ಯೋಗ ನೇಮಕಾತಿಯಲ್ಲಿ ಭ್ರಷ್ಟಾಚಾರ ಹಾಗೂ ನಿರುದ್ಯೋಗ ಸಮಸ್ಯೆ ಅಂಶಗಳೇ ಪ್ರಮುಖ ವಿಷಯಗಳಾಗಿವೆ ಎಂದು ಹೇಳಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯು ಸುಮಾರು 23 ಲಕ್ಷ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳಿಗೆ ಮಾಡಲಾದ 'ವಂಚನೆ' ಎಂದು ಟೀಕಿಸಿದ್ದಾರೆ.

ಎಕ್ಸ್ ವೇದಿಕೆಯಲ್ಲಿ ಈ ಕುರಿತು ಪೋಸ್ಟ್ ಮಾಡಿದ್ದು, 'ಕಾಲೇಜಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಕನಸಿರಲಿ ಅಥವಾ ಸರ್ಕಾರಿ ಉದ್ಯೋಗ ಪಡೆಯಲು ಯುವಜನರ ಹೋರಾಟವಿರಲಿ, ಆಕಾಂಕ್ಷಿಗಳಿಗೆ ಮೋದಿ ಸರ್ಕಾರ ಒಂದು ರೀತಿ ಶಾಪವಾಗಿದೆ' ಎಂದು ಟೀಕಿಸಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, 'ನೀಟ್ ಪ್ರಶ್ನೆಪತ್ರಿಕೆಗಳ ಸೋರಿಕೆ ಆಗಿರುವುದು ಬಿಹಾರದಲ್ಲಿ ಬಯಲಾಗಿದೆ. ರಾಜಸ್ಥಾನದಲ್ಲಿ ಕೆಲ ಕೇಂದ್ರಗಳಲ್ಲಿ ಬೇರೆಯದೇ ಪ್ರಶ್ನೆಪತ್ರಿಕೆಯನ್ನು ವಿತರಿಸಿರುವ ದೂರುಗಳಿವೆ' ಎಂದು ತಿಳಿಸಿದ್ದಾರೆ.

ಕಳೆದ ಏಳು ವರ್ಷಗಳಲ್ಲಿ ಸುಮಾರು 70 ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿವೆ. ಇದರಿಂದಾಗಿ 2 ಕೋಟಿ ವಿದ್ಯಾರ್ಥಿಗಳ ಭವಿಷ್ಯ ಹಾಳಾಗಿದೆ. ಹಲವು ರಾಜ್ಯಗಳಲ್ಲಿ ಸೋರಿಕೆಯನ್ನು ತಡೆಯಲು ಕಾಯ್ದೆಗಳಿದ್ದರೂ, ಇಂಥ ಪ್ರಕರಣಗಳು ನಡೆಯುತ್ತಲೇ ಇವೆ' ಎಂದು ಹೇಳಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆ ಆಗಿಲ್ಲ: ಎನ್‌ಟಿಎ

ನವದೆಹಲಿ (ಪಿಟಿಐ): 'ನೀಟ್-ಯುಜಿ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿವೆ ಎಂಬ ವರದಿ ಸಂಪೂರ್ಣ ಆಧಾರರಹಿತ' ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಸೋಮವಾರ ಸ್ಪಷ್ಟಪಡಿಸಿದೆ.

'ಸೋರಿಕೆಯಾಗಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೆ ಆಗುತ್ತಿರುವ ಪ್ರಶ್ನೆಪತ್ರಿಕೆಗೂ, ವಾಸ್ತವ ಪ್ರಶ್ನೆಪತ್ರಿಕೆಗೂ ಯಾವುದೇ ರೀತಿಯ ಸಾಮ್ಯತೆ ಇಲ್ಲ' ಎಂದು ಎನ್‌ಟಿಎ ಹೇಳಿದೆ.

ಎನ್‌ಟಿಎ ಸುರಕ್ಷತೆ ವ್ಯವಸ್ಥೆ, ಸಾಮಾನ್ಯ ನಿರ್ವಹಣಾ ಪ್ರಕ್ರಿಯೆಯನ್ನು ಪರಿಶೀಲಿಸಿದ್ದು, ವರದಿ ಆಧಾರರಹಿತ ಎಂಬುದು ದೃಢಪಟ್ಟಿದೆ ಎಂದು ಎನ್‌ಟಿಎ ಹಿರಿಯ ನಿರ್ದೇಶಕ ಸಾಧನಾ ಪರಾಶರ್ ಪ್ರತಿಕ್ರಿಯಿಸಿದ್ದಾರೆ.

ಪರೀಕ್ಷೆಯು ಒಮ್ಮೆ ಆರಂಭವಾದ ನಂತರ ಪರೀಕ್ಷಾ ಕೇಂದ್ರಗಳಿಗೆ ಹೊರಗಿನ ಯಾವುದೇ ವ್ಯಕ್ತಿಗೆ ಪ್ರವೇಶ ಇರುವುದಿಲ್ಲ ಎಂದು ತಿಳಿಸಿದ್ದಾರೆ.

ಉಗ್ರರ ದಾಳಿ: 20 ಜನ ವಶಕ್ಕೆ

ಜಮ್ಮು (ಪಿಟಿಐ): ವಾಯುಪಡೆಯ ಬೆಂಗಾವಲು ವಾಹನದ ಮೇಲೆ ದಾಳಿ ನಡೆಸಿದ ಉಗ್ರರನ್ನು ಸದೆಬಡಿಯಲು ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಾದ್ಯಂತ ಸೇನೆಯು ಸೋಮವಾರವೂ ತೀವ್ರ ಕಾರ್ಯಾಚರಣೆ ನಡೆಸಿದೆ.

ಶನಿವಾರ ಸಂಜೆ ಸುರನಕೋಟೆ ಸಮೀಪದ ಶಾಹಸಿತಾರ್ ಬಳಿ ದಾಳಿ ನಡೆಸಿದ್ದ ಉಗ್ರರು ಸಮೀಪದ ಅರಣ್ಯದೊಳಗೆ ಪರಾರಿಯಾಗಿದ್ದು, ಈ ಭಯೋತ್ಪಾದಕರ ಕುರಿತಂತೆ ಮಾಹಿತಿ ಸಂಗ್ರಹಿಸಲಿಕ್ಕಾಗಿ ಭದ್ರತಾ ಪಡೆಗಳು 20ಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿವೆ.

ಶಾಹಸಿತಾರ್, ಗುರ್ಸೈ, ಸನೈ ಮತ್ತು ಶೇಂದರಾ ಟಾಪ್‌ನಲ್ಲಿ ಸ್ಥಳೀಯ ಪೊಲೀಸರೊಂದಿಗೆ ಭದ್ರತಾ ಪಡೆಗಳು ಜಂಟಿ ಕಾರ್ಯಾಚರಣೆ ಕೈಗೊಂಡಿದ್ದು ಉಗ್ರರ ಕುರುಹು ಪತ್ತೆಯಾಗಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಜೌರಿ ಜಿಲ್ಲೆಯ ಕಥುವಾ ಬಳಿ ಶಂಕಿತ ಮೂವರು ಭಯೋತ್ಪಾದಕರಿದ್ದಾರೆ ಎಂಬ ಸುಳಿವು ಸಿಗುತ್ತಿದ್ದಂತೆಯೇ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆಯನ್ನು ತೀವ್ರಗೊಳಿಸಿವೆ.

ಮೇ 25ರಂದು ಮತದಾನ ನಡೆಯಲಿರುವ ಅನಂತನಾಗ್ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಪೂಂಛ್, ರಜೌರಿ ಜಿಲ್ಲೆಗಳಲ್ಲಿ ಚೆಕ್‌ಪೋಸ್ಟ್ ಸ್ಥಾಪಿಸಲಾಗಿದೆ. ಭದ್ರತಾ ಪಡೆಗಳು ವಾಹನ ತಪಾಸಣೆಯನ್ನು ತೀವ್ರಗೊಳಿಸಿವೆ.

ಇರಾನ್‌ನ ಹಡಗು ವಶಕ್ಕೆ

ನವದೆಹಲಿ (ಪಿಟಿಐ): ಇರಾನ್ ಮೂಲದ ವ್ಯಕ್ತಿಗೆ ಸೇರಿದ ಹಡಗು ಮತ್ತು ಅದರಲ್ಲಿದ್ದ ಭಾರತ ಮೂಲದ ಆರು ಮಂದಿ ನಾವಿಕರನ್ನು ಕೇರಳದ ಕರಾವಳಿ ಭಾಗದಲ್ಲಿ ಭಾನುವಾರ ವಶಕ್ಕೆ ಪಡೆಯಲಾಗಿದೆ ಎಂದು ಭಾರತೀಯ ಕರಾವಳಿ ಪಡೆ (ಐಸಿಜಿ) ಸೋಮವಾರ ತಿಳಿಸಿದೆ.

ಈ ಹಡಗು ಇರಾನ್‌ನ ಉದ್ಯಮಿಯೊಬ್ಬರಿಗೆ ಸೇರಿದ್ದು, ತಮಿಳುನಾಡಿನ ಮೀನುಗಾರರಿಗೆ ಗುತ್ತಿಗೆ ನೀಡಿದ್ದರು.

ಕಾರ್ಮಿಕನ ಮನೆಯಲ್ಲಿ ₹25 ಕೋಟಿ!

ಒಂದನೇ ಪುಟದಿಂದ...

ಇಲ್ಲಿ ಸಿಕ್ಕ ನೋಟುಗಳಲ್ಲಿ ಹೆಚ್ಚಿನವು ₹500ರ ಮುಖಬೆಲೆಯವು. ಅಲ್ಲದೆ, ಒಂದಿಷ್ಟು ಚಿನ್ನಾಭರಣಗಳನ್ನು ಕೂಡ ಇಲ್ಲಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಗೊತ್ತಾಗಿದೆ. ಆಲಂ ಅವರು ಕಾಂಗ್ರೆಸ್ ಮುಖಂಡ ಕೂಡ ಹೌದು.

ರಾಜ್ಯದ ಗ್ರಾಮೀಣಾಭಿವೃದ್ಧಿ ಇಲಾಖೆಯ ಮಾಜಿ ಮುಖ್ಯ ಎಂಜಿನಿಯರ್ ವೀರೇಂದ್ರ ಕುಮಾರ್ ರಾಮ್ ಅವರ ವಿರುದ್ಧ ದಾಖಲಾಗಿರುವ ಹಣದ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣದ ವಿಚಾರವಾಗಿ ಈ ಶೋಧ ನಡೆದಿದೆ. ರಾಮ್ ಅವರನ್ನು ಇ.ಡಿ. ಕಳೆದ ವರ್ಷ ಬಂಧಿಸಿದೆ.

'ರಾಮ್ ಅವರು ಗುತ್ತಿಗೆದಾರರಿಗೆ ಟೆಂಡರ್ ನೀಡಲು ಕಮಿಷನ್ ಪಡೆಯುತ್ತಿದ್ದರು' ಎಂದು ಇ.ಡಿ. ಕಳೆದ ವರ್ಷದ ಏಪ್ರಿಲ್‌ನಲ್ಲಿ ನೀಡಿದ್ದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿತ್ತು. ರಾಮ್ ಅವರಿಗೆ ಸೇರಿದ ₹ 39 ಕೋಟಿಯನ್ನು ಇ.ಡಿ. ಅಧಿಕಾರಿಗಳು ಈಗಾಗಲೇ ಮುಟ್ಟುಗೋಲು ಹಾಕಿಕೊಂಡಿದ್ದಾರೆ. ರಾಮ್ ಅವರು ಅಕ್ರಮವಾಗಿ ಪಡೆದ ಹಣವನ್ನು ತಮ್ಮ ಕುಟುಂಬದ ಜೊತೆ ಐಷಾರಾಮಿ ಜೀವನ ಕಳೆಯಲು ಬಳಸುತ್ತಿದ್ದರು ಎಂದೂ ಇ.ಡಿ. ಹೇಳಿತ್ತು.

ಜಪ್ತಿಯಾದ ಹಣ ಜನರಿಗೆ ಮರಳಿಸಲು ಚಿಂತನೆ: ಮೋದಿ

ರಾಜಾಮಹೇಂದ್ರವರಂ: ಭ್ರಷ್ಟಾಚಾರ ಪ್ರಕರಣಗಳಲ್ಲಿ ವಶಪಡಿಸಿಕೊಂಡಿರುವ ಹಣವನ್ನು ಜನರಿಗೆ ಮರಳಿಸುವ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯವನ್ನು ಪಡೆಯಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

'ಇ.ಡಿ ₹1.25 ಲಕ್ಷ ಕೋಟಿ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಿದೆ' ಎಂದರು.



ವಲಸೆ... ಜಮ್ಮು-ಕಾಶ್ಮೀರದ ಪೂಂಛ್‌ನಲ್ಲಿ ತಾಪಮಾನ ಏರಿಕೆಯಾಗುತ್ತಿದ್ದು, ವಾತಾವರಣ ತಂಪಾಗಿರುವ ಹಿಮಾಲಯದ ವಾಯವ್ಯ ಭಾಗದತ್ತ ಕುರಿಗಾಹಿಗಳು ಕುರಿಮಂದೆಯೊಂದಿಗೆ ವಲಸೆ ಹೋದರು –ಪಿಟಿಐ ಚಿತ್ರ

ಪ್ರಜ್ವಲ್ ಬಗ್ಗೆ ಸಹನೆ ಬೇಕಿಲ್ಲ: ಮೋದಿ

ಒಂದನೇ ಪುಟದಿಂದ...

ಈ ಬೆಳವಣಿಗೆಗಳು ಬಹಳ ಅನುಮಾನಾಸ್ಪದ ಎಂದಿದ್ದಾರೆ. ರಾಜ್ಯ ಸರ್ಕಾರದ ಬಳಿ ಮಾಹಿತಿ ಇದ್ದಿದ್ದರೆ ಅದು ಒಂದು ಕಣ್ಣಿರಿಸಬೇಕಿತ್ತು, ವಿಮಾನ ನಿಲ್ದಾಣಗಳಲ್ಲಿ ನಿಗಾ ಇರಿಸಬೇಕಿತ್ತು ಎಂದಿದ್ದಾರೆ.

'ನೀವು ಏನನ್ನೂ ಮಾಡಲಿಲ್ಲ, ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡಲಿಲ್ಲ. ಇದರ ಅರ್ಥ, ಇವೆಲ್ಲ ಒಂದು ರಾಜಕೀಯ ಆಟವಾಗಿತ್ತು, ಅವರು ಹೊಂದಾಣಿಕೆ ಮಾಡಿಕೊಂಡಿದ್ದ ಅವಧಿಗೆ ಸೇರಿದ ವಿಡಿಯೊಗಳು ಇವು ಎಂಬುದು ಅವರಿಗೆ ಗೊತ್ತಿತ್ತು, ಅವರೇ ವಿಡಿಯೊಗಳನ್ನು ಒಗ್ಗೂಡಿಸಿ ಇಟ್ಟುಕೊಂಡಿದ್ದರು. ಆದರೆ, ಅಪರಾಧಿಗಳನ್ನು ಬಿಡಬಾರದು. ನಮ್ಮ ದೇಶದಲ್ಲಿ ಇಂತಹ ಆಟಗಳನ್ನು ಕೊನೆಗೊಳಿಸಬೇಕು' ಎಂದು ಅವರು ಹೇಳಿರುವುದಾಗಿ ವಾಹಿನಿ ಬಿಡುಗಡೆ ಮಾಡಿರುವ ಸಂದರ್ಶನದ ಪಠ್ಯದಲ್ಲಿ ಉಲ್ಲೇಖವಾಗಿದೆ.

'ಮೋದಿಗೆ ಸಂಬಂಧಿಸಿದಂತೆ, ಬಿಜೆಪಿಗೆ ಸಂಬಂಧಿಸಿದಂತೆ, ನಮ್ಮ ಸಂವಿಧಾನಕ್ಕೆ ಸಂಬಂಧಿಸಿದಂತೆ ನನ್ನ ದೃಷ್ಟಿಕೋನ ಬಹಳ ಸ್ಪಷ್ಟವಾಗಿದೆ. ಇಂತಹ ವ್ಯಕ್ತಿಗಳ ವಿಚಾರದಲ್ಲಿ ತುಸುವೂ ಸಹನೆ ತೋರಿಸಬೇಕಿಲ್ಲ. ಕಾನೂನಿನ ಅಡಿಯಲ್ಲಿ ಲಭ್ಯವಿರುವ ಎಲ್ಲ ಆಯ್ಕೆಗಳನ್ನು ಬಳಸಿಕೊಂಡು ಕಠಿಣ ಶಿಕ್ಷೆಯನ್ನು ಕೊಡಬೇಕು' ಎಂದಿದ್ದಾರೆ.

'ಅವರನ್ನು ನಾವು ವಾಪಸ್ ಕರೆತರಬೇಕು. ಅವರ ವಿರುದ್ಧ ಬಹಳ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲಿ ಆದರೆ, ಹೋದರೆ ಎಂಬ ಮಾತುಗಳು ಬರಬಾರದು' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದ್ದಾರೆ. ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು 2018ರ ವಿಧಾನಸಭಾ ಚುನಾವಣೆಯ ನಂತರ ಮೈತ್ರಿ ಸರ್ಕಾರ ರಚಿಸಿದ್ದವು.

ಬಿಜೆಪಿ ವಿರುದ್ಧ ಮಾತನಾಡುವ ಸಂದರ್ಭಗಳಲ್ಲಿ ಕಾಂಗ್ರೆಸ್ ಪಕ್ಷವು ಸುಳ್ಳುಗಳನ್ನು ಹೇಳುತ್ತಿದೆ, ಬಿಜೆಪಿಯು ಸಂವಿಧಾನವನ್ನು ಬದಲಾಯಿಸುತ್ತದೆ ಎನ್ನುತ್ತದೆ. ಬಿಜೆಪಿಯ ಕೆಲವರು ಆಡಿದ ಮಾತನ್ನು ಕಾಂಗ್ರೆಸ್ ಪಕ್ಷವು ವಿಪರೀತದ ಮಟ್ಟದಲ್ಲಿ ಚಿತ್ರಿಸುತ್ತಿದೆ ಎಂದು ಮೋದಿ ದೂರಿದ್ದಾರೆ.

ರಾಹುಲ್ ವಿರುದ್ಧ ಪತ್ರ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಿಶ್ವವಿದ್ಯಾಲಯಗಳ ಮುಖ್ಯಸ್ಥರ ನೇಮಕಾತಿ ಪ್ರಕ್ರಿಯೆ ಬಗ್ಗೆ 'ಸುಳ್ಳು ಸುದ್ದಿ' ಹರಡುತ್ತಿದ್ದಾರೆ ಎಂದು ಕುಲಪತಿಗಳು, ಮಾಜಿ ಕುಲಪತಿಗಳು ಸೇರಿದಂತೆ 181 ಮಂದಿ ಶಿಕ್ಷಣ ತಜ್ಞರು ಆರೋಪಿಸಿದ್ದು ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಈ ಬಗ್ಗೆ ಬಹಿರಂಗ ಪತ್ರ ಬರೆದಿರುವ ಅವರು, ವಿಶ್ವವಿದ್ಯಾಲಯಗಳ ಮುಖ್ಯಸ್ಥರನ್ನು ಅರ್ಹತೆ ಆಧಾರದಲ್ಲಿ ನೇಮಕ ಮಾಡುವ ಬದಲಾಗಿ ಕೆಲವು ಸಂಸ್ಥೆಗಳ ಶಿಫಾರಸಿನ ಮೇಲೆ ನೇಮಕ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಆದರೆ ಶೈಕ್ಷಣಿಕ ಸಾಧನೆ, ಅರ್ಹತೆ ಆಧಾರದಲ್ಲಿ ಪಾರದರ್ಶಕವಾಗಿ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ ಎಂದು ಹೇಳಿದ್ದಾರೆ.

ಜೆಎನ್‌ಯು ಕುಲಪತಿ ಶಾಂತಿಶ್ರೀ ಧೂಲಿಪುಡಿ ಪಂಡಿತ್, ದೆಹಲಿ ವಿಶ್ವವಿದ್ಯಾಲಯದ ಕುಲಪತಿ ಯೋಗೇಶ್ ಸಿಂಗ್ ಮತ್ತು ಎಐಸಿಟಿಇ ಮುಖ್ಯಸ್ಥ ಟಿ.ಜಿ. ಸೀತಾರಾಮ್ ಮತ್ತಿತರರು ಪತ್ರಕ್ಕೆ ಸಹಿ ಮಾಡಿದ್ದಾರೆ.

ಧರ್ಮಶಾಲಾದಲ್ಲಿ ಹೈಬ್ರಿಡ್ ಪಿಚ್

ಧರ್ಮಶಾಲಾ (ಪಿಟಿಐ): ಭಾರತದ ಮೊತ್ತಮೊದಲ ಹೈಬ್ರಿಡ್ ಪಿಚ್‌ಅನ್ನು ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಸೋಮವಾರ ವರ್ಣರಂಜಿತ ಸಮಾರಂಭದಲ್ಲಿ ಅನಾವರಣಗೊಳಿಸಲಾಯಿತು.

ಐಪಿಎಲ್ ಚೇರ್ಮನ್ ಅರುಣ್ ಧುಮಾಲ್, ಕ್ರಿಕೆಟ್ ರಂಗದ ಗಣ್ಯರು, ಪಿಚ್ ತಯಾರಕ ನೆದರ್ಲೆಂಡ್ಸ್ ಮೂಲದ ಎಸ್‌ಐಎಸ್ ಸಂಸ್ಥೆಯ ಅಂತರರಾಷ್ಟ್ರೀಯ ಕ್ರಿಕೆಟ್ ನಿರ್ದೇಶಕ ಹಾಗೂ ಇಂಗ್ಲೆಂಡ್‌ನ ಮಾಜಿ ಆಟಗಾರ ಪಾಲ್ ಟೇಲರ್ ಸಮಾರಂಭದಲ್ಲಿ ಹಾಜರಿದ್ದರು.

'ಹೈಬ್ರಿಡ್ ಪಿಚ್‌ನ ಪರಿಚಯವು ಭಾರತದಲ್ಲಿ ಕ್ರಿಕೆಟ್ ಕ್ರಾಂತಿಗೆ ಕಾರಣವಾಗಲಿದೆ. ಇಂಗ್ಲೆಂಡ್‌ನ ಹೆಗ್ಗುರುತುಗಳಾದ ಲಾರ್ಡ್ಸ್, ದಿ ಓವಲ್ ಕ್ರೀಡಾಂಗಣದಲ್ಲಿ ಇಂಥ ಹೈಬ್ರಿಡ್ ಪಿಚ್‌ಗಳಿವೆ' ಎಂದು ಹಿಮಾಚಲ ಪ್ರದೇಶದವರೇ ಆದ ಧುಮಾಲ್ ಹೇಳಿದರು.

ಹೈಬ್ರಿಡ್ ಪಿಚ್ ಸಾಮಾನ್ಯ ಟರ್ಫ್ ಮತ್ತು ಸಿಂಥೆಟಿಕ್ ಫೈಬರ್‌ನ ಸಂಯೋಜನೆಯಾಗಿದ್ದು, ಹೆಚ್ಚು ಕಾಲ ಬಾಳಿಕೆ ಬರಲಿದೆ. ಗುಣಮಟ್ಟ ಕೆಡದೇ ಹೆಚ್ಚು ಆಡಲೂ ಸಹಾಯವಾಗಲಿದೆ. ಪಿಚ್ ಸಿಬ್ಬಂದಿ ಒತ್ತಡವನ್ನೂ ತಗ್ಗಿಸಲಿದೆ. ಇದರಲ್ಲಿ ಶೇ 5ರಷ್ಟು ಮಾತ್ರ ಸಿಂಥೆಟಿಕ್ ಫೈಬರ್ ಇರಲಿದ್ದು, ಉಳಿದಂತೆ 'ಸಹಜ ಪಿಚ್'ನ ಅಂಶಗಳೂ ಇರುವುದರಿಂದ ತೀರಾ ಭಿನ್ನವೆನಿಸದು.

'ಐಸಿಸಿ ಸಮ್ಮತಿಯೊಂದಿಗೆ, ಇಂಥ ಪಿಚ್‌ಗಳು ಕ್ರೀಡೆಯ ಮೇಲೆ ಬೀರುವ ಸಕಾರಾತ್ಮಕ ಪರಿಣಾಮಗಳನ್ನು ಕಾಣಲು ತವಕದಿಂದ ಇದ್ದೇವೆ' ಎಂದು ಟೇಲರ್ ಹೇಳಿದರು.

ಮುಂದೆ ಮುಂಬೈ ಮತ್ತು ಅಹಮದಾಬಾದ್‌ನಲ್ಲೂ ಇಂಥ ಪಿಚ್ ಅಳವಡಿಕೆಯಾಗಲಿದೆ.



ಧರ್ಮಶಾಲಾ ಕ್ರೀಡಾಂಗಣದ ಹೈಬ್ರಿಡ್ ಪಿಚ್‌ನಲ್ಲಿ ಐಪಿಎಲ್ ಚೇರ್ಮನ್ ಅರುಣ್ ಧುಮಾಲ್ ಬ್ಯಾಟಿಂಗ್ ನಡೆಸಿದರು –ಎಕ್ಸ್ ಚಿತ್ರ

ಕೋಚ್ ಸೀಸರ್ ಮೆನೊಟ್ಟಿ ನಿಧನ

ಬ್ಯೂನೊ ಏರ್ಸ್ (ಎಪಿ): ಅರ್ಜೆಂಟೀನಾ ತಂಡ 1978ರಲ್ಲಿ ಮೊದಲ ಸಲ ವಿಶ್ವಕಪ್ ಫುಟ್‌ಬಾಲ್ ಕಿರೀಟ ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವರ್ಚಸ್ವಿ ಕೋಚ್ ಸೀಸರ್ ಲೂಯಿಸ್ ಮೆನೊಟ್ಟಿ (85) ಅವರು ಭಾನುವಾರ ನಿಧನರಾದರು ಎಂದು ಅರ್ಜೆಂಟೀನಾ ಫುಟ್‌ಬಾಲ್ ಸಂಸ್ಥೆ ತಿಇಸಿದೆ.

ಕೋಚ್ ಸೀಸರ್ ಅವರ ಸಾವಿಗೆ ಸಂಸ್ಥೆ ಕಾರಣ ತಿಳಿಸಿಲ್ಲ. ರಕ್ತಹೀನತೆಯಿಂದ ಅವರನ್ನು ಮಾರ್ಚ್‌ನಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಸ್ಥಳೀಯ ಮಾಧ್ಯಮಗಳು ತಿಳಿಸಿವೆ.



ಸೀಸರ್ ಲೂಯಿಸ್ ಮೆನೊಟ್ಟಿ ಎಎಫ್‌ಪಿ ಚಿತ್ರ

ಮೆನೊಟ್ಟಿ 1974 ರಿಂದ 1983ರವರೆಗೆ ಕೋಚ್ ಆಗಿದ್ದರು. 1978ರಲ್ಲಿ ವಿಶ್ವಕಪ್ ಗೆದ್ದಾಗ ತಂಡಕ್ಕೆ ಅರ್ಹವಾಗಿ ಸಿಗಬೇಕಾದ ಗೌರವಾದರಗಳು ದೊರೆತಿರಲಿಲ್ಲ ಎಂಬುದು ಅವರ ಬೇಸರಕ್ಕೆ ಕಾರಣವಾಗಿತ್ತು. ಆ ವೇಳೆ ದೇಶದಲ್ಲಿ ಸೇನೆಯ ಆಡಳಿತವಿದ್ದು, ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳು ವ್ಯಾಪಕವಾಗಿದ್ದವು. 1983ರಲ್ಲಿ ಅವರು ಬಾರ್ಸಿಲೋನಾ ಕ್ಲಬ್‌ನ ಕೋಚ್ ಆದರು.

ವಿಶ್ವಕಪ್ ವೇಳೆ ಮೆನೊಟ್ಟಿ ಅವರು 17 ವರ್ಷದ ಡೀಗೊ ಮರಡೊನಾ ಅವರನ್ನು ಆಡಿಸಿರಲಿಲ್ಲ. ಈ ನಿರ್ಧಾರ ತಮ್ಮಿಬ್ಬರ ಸಂಬಂಧವನ್ನು ವರ್ಷಗಳ ಕಾಲ ಹಳಸುವಂತೆ ಮಾಡಿತ್ತು ಎಂದು ಅವರು ನಂತರ ಹೇಳಿದ್ದರು.

ಮೆನೊಟ್ಟಿ ಅವರು ಮೆಕ್ಸಿಕೊ ತಂಡಕ್ಕೆ 1991–92ರಲ್ಲಿ ಕೋಚ್ ಆಗಿದ್ದರು.

ಬಾಕ್ಸಿಂಗ್: ಭಾರತಕ್ಕೆ 5 ಚಿನ್ನ, 9 ಬೆಳ್ಳಿ

ಅಸ್ತಾನಾ, ಕಜಕಸ್ತಾನ (ಪಿಟಿಐ): ಭಾರತದ ಬಾಕ್ಸರ್‌ಗಳಾದ ಬ್ರಿಜೇಶ್ ತಮ್ಟಾ, ಆರ್ಯನ್ ಹೂಡಾ, ಯಶವರ್ಧನ್ ಸಿಂಗ್, ಲಕ್ಷ್ಮಿ ಮತ್ತು ನಿಶಾ ಅವರು ಎಎಸ್‌ಬಿಸಿ ಏಷ್ಯಾ 22 ವರ್ಷದೊಳಗಿನವರ ಮತ್ತು ಯುವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಯುವ ವಿಭಾಗದಲ್ಲಿ ಚಿನ್ನದ ಪದಕಗಳನ್ನು ಗೆದ್ದುಕೊಂಡರು.

ಸೋಮವಾರ ನಡೆದ ಪುರುಷರ 48 ಕೆ.ಜಿ ವಿಭಾಗದ ಫೈನಲ್‌ನಲ್ಲಿ ಬ್ರಿಜೇಶ್ 5–0 ಅಂತರದಿಂದ ತಜಿಕಿಸ್ತಾನದ ಮುಮಿನೋವ್ ಮುಯಿನ್‌ಖೋಡ್ಜಾ ಮಣಿಸಿದರು.

51 ಕೆ.ಜಿ ವಿಭಾಗದಲ್ಲೂ ಪ್ರಾಬಲ್ಯ ಮುಂದುವರಿಸಿದ ಆರ್ಯನ್, 5–0 ಯಿಂದ ಕಿರ್ಗಿಸ್ತಾನದ ಕಮಿಲೋವ್ ಜಾಫರ್‌ಬೆಕ್ ವಿರುದ್ಧ ಜಯ ಸಾಧಿಸಿದರು. 63.5 ಕೆ.ಜಿ ವಿಭಾಗದಲ್ಲಿ ಯಶವರ್ಧನ್ ಸಿಂಗ್ 4–1 ರಿಂದ ತಜಿಕಿಸ್ತಾನದ ಗಫುರೊವ್ ರುಸ್ಲಾನ್ ಅವರನ್ನು ಹಿಮ್ಮೆಟ್ಟಿಸಿದರು.

ಮಹಿಳೆಯರ 52 ಕೆ.ಜಿ ವಿಭಾಗದಲ್ಲಿ ಹಾಲಿ ಜೂನಿಯರ್ ವಿಶ್ವ ಚಾಂಪಿಯನ್ ನಿಶಾ 5–0 ಸರ್ವಾನುಮತದ ತೀರ್ಪಿನ ಮೂಲಕ ಕಜಕಸ್ತಾನದ ಓಟಿನ್‌ಬೇ ಬಾಗ್ಜಾನ್ ಅವರನ್ನು ಸೋಲಿಸಿದರು. 50 ಕೆ.ಜಿ ವಿಭಾಗದಲ್ಲಿ ಲಕ್ಷ್ಮಿ ಅವರು ಮಂಗೋಲಿಯಾದ ಎಂಖ್ ನೊಮುಂಡರಿ ವಿರುದ್ಧ ಗೆದ್ದರು.

ಭಾರತದ 9 ಬಾಕ್ಸರ್‌ಗಳು ಬೆಳ್ಳಿ ಪದಕದೊಂದಿಗೆ ಅಭಿಯಾನವನ್ನು ಕೊನೆಗೊಳಿಸಿದರು. ಸಾಗರ್ ಜಾಖರ್ (60 ಕೆ.ಜಿ), ಪ್ರಿಯಾಂಶು (71 ಕೆ.ಜಿ), ರಾಹುಲ್ ಕುಂದು (75 ಕೆ.ಜಿ), ಆರ್ಯನ್ (92 ಕೆ.ಜಿ), ತಮನ್ನಾ (54 ಕೆ.ಜಿ), ನಿಕಿತಾ ಚಂದ್ (60 ಕೆ.ಜಿ), ಸೃಷ್ಟಿ ಸಾಥೆ (63 ಕೆ.ಜಿ), ರುದ್ರಿಕಾ (75 ಕೆ.ಜಿ) ಮತ್ತು ಖುಷಿ ಪೂನಿಯಾ (81 ಕೆಜಿ) ತಮ್ಮ ವಿಭಾಗಗಳ ಫೈನಲ್‌ನಲ್ಲಿ ಪರಾಭವಗೊಂಡರು.

ಮುಸ್ಕಾನ್ (75 ಕೆ.ಜಿ) ಮತ್ತು ಅಲ್ಫಿಯಾ ಪಠಾಣ್ (81 ಕೆ.ಜಿ) ಅವರು ತಮ್ಮ ವಿಭಾಗಗಳ ಸೆಮಿಫೈನಲ್‌ಗಳಲ್ಲಿ ಬೈ ಪಡೆದು ಫೈನಲ್ ಪ್ರವೇಶಿಸಿದರು.



48 ಕೆ.ಜಿ. ವಿಭಾಗದಲ್ಲಿ ಜಯಗಳಿಸಿದ ಭಾರತದ ಬ್ರಿಜೇಶ್ ತಮ್ಟಾ (ನೀಲಿ)

ಮುಂಬೈ ಇಂಡಿಯನ್ಸ್ ತಂಡಕ್ಕೆ ಏಳು ವಿಕೆಟ್ ಗೆಲುವು • ಹೈದರಾಬಾದ್ ಆಸೆಗೆ ಹಿನ್ನಡೆ

ಸೂರ್ಯ ಅಬ್ಬರ: 'ಸನ್' ತತ್ತರ



ಅಜೇಯ ಶತಕ ಸಿಡಿಸಿದ ಮುಂಬೈ ಇಂಡಿಯನ್ಸ್ ತಂಡದ ಸೂರ್ಯಕುಮಾರ್ ಯಾದವ್ ಎಎಫ್‌ಪಿ ಚಿತ್ರ

ಮುಂಬೈ (ಪಿಟಿಐ): ಪೀಯೂಷ್ ಚಾವ್ಲಾ ಮತ್ತು ಹಾರ್ದಿಕ್ ಪಾಂಡ್ಯ ತಲಾ ಮೂರು ವಿಕೆಟ್‌ಗಳೊಡನೆ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿ ಹಾಕಿದರು. ನಂತರ ಸೂರ್ಯಕುಮಾರ್ ಯಾದವ್ (ಔಟಾಗದೇ 102, 51ಎ, 4X12, 6X6) ಅಬ್ಬರದ ಶತಕ ಗಳಿಸಿ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡ ಏಳು ವಿಕೆಟ್‌ಗಳಿಂದ ಗೆಲ್ಲಲು ನೆರವಾದರು.

ಒಂದು ಹಂತದಲ್ಲಿ ಐದನೇ ಓವರ್‌ನಲ್ಲಿ ಮೂರು ವಿಕೆಟ್‌ಗೆ 31 ರನ್‌ಗಳಿಸಿ ಕುಸಿತದ ಭೀತಿಯಲ್ಲಿದ್ದ ಮುಂಬೈ ತಂಡವನ್ನು ಸೂರ್ಯಕುಮಾರ್ ಮತ್ತು ತಿಲಕ್ ವರ್ಮಾ (ಔಟಾಗದೇ 37, 32ಎ, 4X6) ಅವರು ಮುರಿಯದ ನಾಲ್ಕನೇ ವಿಕೆಟ್‌ಗೆ 79 ಎಸೆತಗಳಲ್ಲಿ 143 ರನ್ ಸೇರಿಸಿ ಸನ್‌ರೈಸರ್ಸ್ ಆಸೆಗೆ ತಣ್ಣೀರೆರಚಿದರು.

ಇದು ಮುಂಬೈಗೆ ನಾಲ್ಕನೇ ಗೆಲುವಾಗಿದ್ದು, ಅಂಕ ಪಟ್ಟಿಯಲ್ಲಿ ಕೊನೆಯ ಸ್ಥಾನದಿಂದ ಬಡ್ತಿ ಪಡೆಯಿತು. ಸನ್‌ರೈಸರ್ಸ್ ಪ್ಲೇ ಆಫ್ ಹಾದಿಗೆ ಈ ಸೋಲು ಕೊಂಚ ಹಿನ್ನಡೆ ತಂದಿತು.

ಇದಕ್ಕೆ ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಸನ್‌ರೈಸರ್ಸ್ 8 ವಿಕೆಟ್‌ಗೆ 173 ರನ್ ಗಳಿಸಿತು. ಈ ಗುರಿ ಬೆನ್ನತ್ತಿದ ಮುಂಬೈ ತಂಡ 16 ಎಸೆತಗಳು ಬಾಕಿ ಇರುವಂತೆಯೇ 3 ವಿಕೆಟ್‌ಗೆ 174 ರನ್ ಗಳಿಸಿತು.

ಆರಂಭಿಕ ಆಟಗಾರರಾದ ಇಶಾನ್ ಕಿಶಾನ್ (9) ಮತ್ತು ರೋಹಿತ್ ಶರ್ಮಾ (4) ಬೇಗನೆ ನಿರ್ಗಮಿಸಿದರು. ನಮನ್ ಧೀರ್ ಅವರಿಗೆ ಖಾತೆ ತೆರೆಯಲು ಭುವನೇಶ್ವರ ಕುಮಾರ್ ಅವಕಾಶ ನೀಡಲಿಲ್ಲ.

ಇದಕ್ಕೆ ಮೊದಲು ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಟಿ20 ವಿಶ್ವಕಪ್‌ಗೆ ಮೊದಲು ಬೌಲಿಂಗ್‌ನಲ್ಲಿ ಲಯ ಕಂಡುಕೊಂಡರೆ, ಅನುಭವಿ ಪೀಯೂಷ್ ಚಾವ್ಲಾ ಅವರೂ ಮೂರು ವಿಕೆಟ್ ಪಡೆದರು. ಟ್ರಾವಿಸ್ ಹೆಡ್ (48, 30ಎ, 4X7, 6X1) ಬಿರುಸಿನ ಬ್ಯಾಟಿಂಗ್ ನಡೆಸಿದರೆ, ಕೊನೆಗಳಿಗೆಯಲ್ಲಿ ನಾಯಕ ಪ್ಯಾಟ್ ಕಮಿನ್ಸ್ 17 ಎಸೆತಗಳಲ್ಲಿ 35 (4x2, 6x2) ರನ್ ಬಾರಿಸಿ ತಂಡ 150ರ ಗಡಿದಾಟುವಂತೆ ನೋಡಿಕೊಂಡರು.

ಪಾಂಡ್ಯ ಲಯ ಮತ್ತು ವೇಗ ಕಂಡುಕೊಂಡು 31 ರನ್ನಿಗೆ 3 ವಿಕೆಟ್ ಪಡೆದರೆ, ಚಾವ್ಲಾ (4–0–33–3) ಕೂಡ ಪ್ರಭಾವಶಾಲಿ ಎನಿಸಿ ಸನ್‌ರೈಸರ್ಸ್ ಬ್ಯಾಟರ್‌ಗಳು ಅಬ್ಬರಿಸದಂತೆ ನೋಡಿಕೊಂಡರು.

ಕಳೆದ ಸಲ ಇವೆರಡು ತಂಡಗಳು ಎದುರಾದಾಗ ಸನ್‌ರೈಸರ್ಸ್ ಬ್ಯಾಟರ್‌ಗಳು ಅಬ್ಬರಿಸಿ 277 ರನ್ ಗಳಿಸಿ ದಾಖಲೆ ಬರೆದಿದ್ದರು. ಆದಕ್ಕೆ ತದ್ವಿರುದ್ಧವಾಗಿ ಈ ಬಾರಿ ಆಕ್ರಮಣದ ಆಟ ಕಾಣಲಿಲ್ಲ.

ಪವರ್ ಪ್ಲೇ ಅವಧಿಯಲ್ಲಿ ಅಭಿಷೇಕ್ ಶರ್ಮಾ ವಿಕೆಟ್ ಕಳೆದುಕೊಂಡು 56 ರನ್ ಗಳಿಸಿತ್ತು. ನಂತರ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದುಕೊಂಡಿತು.

ಹತ್ತು ಓವರುಗಳ ನಂತರ ದಾಳಿಗಿಳಿದ ಲೆಗ್ ಬ್ರೇಕ್ ಬೌಲರ್ ಚಾವ್ಲಾ ಅವರು ಆರಂಭ ಆಟಗಾರ ಟ್ರಾವಿಸ್ ಹೆಡ್ (48, 30 ಎಸೆತ) ಮತ್ತು ಹೆನ್ರಿಚ್ ಕ್ಲಾಸೆನ್ (2) ಅವರ ವಿಕೆಟ್‌ಗಳನ್ನು ಪಡೆದು ಸನ್‌ರೈಸರ್ಸ್‌ಗೆ ಬಲವಾದ ಹೊಡೆತ ನೀಡಿದರು.

ಆರಂಭ ಆಟಗಾರ ಹೆಡ್ ಅವರ ಆಟ ವಿಶ್ವಾಸದಿಂದ ಕೂಡಿರಲಿಲ್ಲ. ಮೊದಲ ಪಂದ್ಯ ಆಡಿದ ಅಂಕುಶ್ ಕಾಂಬೋಜ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರೂ ಅದು ನೋಬಾಲ್ ಆಗಿತ್ತು. ಕೆಲವು ಬೌಂಡರಿಗಳೂ ಅಧಿಕಾರಯುತವಾಗಿರದೇ 'ಎಜ್' ಮೂಲಕ ಹೋದವು.

ಸ್ಕೋರುಗಳು: ಸನ್‌ರೈಸರ್ಸ್ ಹೈದರಾಬಾದ್: 20 ಓವರುಗಳಲ್ಲಿ 8 ವಿಕೆಟ್‌ಗೆ 173 (ಟ್ರಾವಿಸ್ ಹೆಡ್ 48, ನಿತೀಶ್ ಕುಮಾರ್ ರೆಡ್ಡಿ 20, ಪ್ಯಾಟ್ ಕಮಿನ್ಸ್ ಔಟಾಗದೇ 35; ಹಾರ್ದಿಕ್ ಪಾಂಡ್ಯ 31ಕ್ಕೆ3, ಪೀಯೂಷ್ ಚಾವ್ಲಾ 33ಕ್ಕೆ3). ಮುಂಬೈ ಇಂಡಿಯನ್ಸ್ 17.2 ಓವರ್‌ಗಳಲ್ಲಿ 3 ವಿಕೆಟ್‌ಗೆ 174. (ಸೂರ್ಯಕುಮಾರ್ ಯಾದವ್ ಔಟಾಗದೆ 102, ತಿಲಕ್ ವರ್ಮಾ ಔಟಾಗದೇ 37, ಭುವನೇಶ್ವರ ಕುಮಾರ್ 22ಕ್ಕೆ1, ಪ್ಯಾಟ್ ಕಮಿನ್ಸ್ 35ಕ್ಕೆ1) **ಪಂದ್ಯ ಶ್ರೇಷ್ಠ: ಸೂರ್ಯಕುಮಾರ್ ಯಾದವ್**

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	11	8	3	16	1.453
ರಾಜಸ್ಥಾನ ರಾಯಲ್ಸ್	10	8	2	16	0.622
ಚೆನ್ನೈ ಸೂಪರ್ ಕಿಂಗ್ಸ್	11	6	5	12	0.700
ಸನ್‌ರೈಸರ್ಸ್ ಹೈದರಾಬಾದ್	11	6	5	12	-0.065
ಲಖನೌ ಸೂಪರ್ ಜೈಂಟ್ಸ್	11	6	5	12	-0.371
ಡೆಲ್ಲಿ ಕ್ಯಾಪಿಟಲ್ಸ್	11	5	6	10	-0.442
ಆರ್‌ಸಿಬಿ (ಬೆಂಗಳೂರು)	11	4	7	8	-0.049
ಪಂಜಾಬ್ ಕಿಂಗ್ಸ್	11	4	7	8	-0.187
ಮುಂಬೈ ಇಂಡಿಯನ್ಸ್	12	4	8	8	-0.212
ಗುಜರಾತ್ ಟೈಟನ್ಸ್	11	4	7	8	-1.320

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (542)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಮುಂಬೈ ಇಂಡಿಯನ್ಸ್ (18 ವಿಕೆಟ್)

ಬಹಿರಂಗಪಡಿಸಿದ ಟ್ರಿನಿಡಾಡ್ ಪ್ರಧಾನಿ

'ವಿಶ್ವಕಪ್: ಉಗ್ರರ ಬೆದರಿಕೆ'

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಜೂನ್ ಒಂದರಿಂದ ಅಮೆರಿಕ ಮತ್ತು ಕೆರಿಬಿಯನ್ ದ್ವೀಪಗಳಲ್ಲಿ ನಡೆಯಲಿರುವ ಟಿ20 ವಿಶ್ವಕಪ್‌ಗೆ ಭಯೋತ್ಪಾದಕರಿಂದ ಬೆದರಿಕೆ ಬಂದಿದೆ ಎಂದು ಟ್ರಿನಿಡಾಡ್ ಪ್ರಧಾನಿ ಡಾ.ಕೀತ್ ರೋಲಿ ಬಹಿರಂಗಪಡಿಸಿದ್ದಾರೆ.

ಇದರ ಬೆನ್ನಲ್ಲೇ ಈ ಟೂರ್ನಿಗೆ ಸಂಭವನೀಯ ಅಪಾಯ ಎದುರಾದಲ್ಲಿ ಅದನ್ನು ನಿಭಾಯಿಸಲು ಸಮಗ್ರ ಮತ್ತು ಸಶಕ್ತವಾದ ಭದ್ರತಾ ಯೋಜನೆ' ಸಿದ್ಧಗೊಳಿಸಲಾಗಿದೆ ಎಂದು ಐಸಿಸಿ ಪ್ರತಿಪಾದಿಸಿದೆ.

ಟೂರ್ನಿಯಲ್ಲಿ ಭಾರತ ಸೇರಿದಂತೆ 20 ತಂಡಗಳು ಭಾಗವಹಿಸುತ್ತಿವೆ. ಅಮೆರಿಕ, ವೆಸ್ಟ್ ಇಂಡೀಸ್‌ಗೆ ಸೇರಿದ ಒಟ್ಟು 9 ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿವೆ.


ಇವುಗಳಲ್ಲಿ ಆರು ಕ್ರೀಡಾಂಗಣಗಳು ವೆಸ್ಟ್ ಇಂಡೀಸ್‌ನಲ್ಲಿವೆ.

ಮಾಧ್ಯಮ ವರದಿಗಳ ಪ್ರಕಾರ ಈಗ ಬಂದಿರುವ ಭಯೋತ್ಪಾದನೆ ಬೆದರಿಕೆ ವೆಸ್ಟ್ ಇಂಡೀಸ್‌ಗೆ ಸೀಮಿತವಾಗಿದೆ. ವೆಸ್ಟ್ ಇಂಡೀಸ್‌ನಲ್ಲಿ ಕೆಲವು ಪ್ರಾಥಮಿಕ ಹಂತದ ಪಂದ್ಯಗಳ ಜೊತೆ, ಸೂಪರ್ ಎಂಟು ಹಂತದ ಎಲ್ಲ ಪಂದ್ಯಗಳು, ಸೆಮಿಫೈನಲ್ ಮತ್ತು 29ರಂದು ಫೈನಲ್ ನಿಗದಿಯಾಗಿದೆ.

ರೋಲಿ ಅವರು ಯಾವುದೇ ಉಗ್ರ ಸಂಘಟನೆಯ ಹೆಸರನ್ನು ಹೇಳಲಿಲ್ಲ. ಆದರೆ, ಇಸ್ಲಾಮಿಕ್ ಸ್ಟೇಟ್ ತನ್ನ ಸಿದ್ಧಾಂತ ಪ್ರಚಾರಕ್ಕೆ ಬಳಸುವ ಚಾನೆಲ್ ಮೂಲಕ ಬೆದರಿಕೆಯೊಡ್ಡಿದೆ ಎಂದು ವರದಿಗಳು ತಿಳಿಸಿವೆ. ಈ ಬೆಳವಣಿಗೆಗೆ ಪ್ರತಿಕ್ರಿಯಿಸಿರುವ ಐಸಿಸಿ, ಹೇಳಿಕೆಯೊಂದರ ಮೂಲಕ ಸನ್ನದ್ಧವಾಗಿರುವ ಭರವಸೆ ನೀಡಿದೆ.

ಟಿ20: ಫ್ರಾಂಕ್ ಹಿರಿಯ ಆಟಗಾರ

ಕಂಪಾಲಾ (ಪಿಟಿಐ): 43 ವರ್ಷದ ಆಫ್ ಸ್ಪಿನ್ನರ್ ಫ್ರಾಂಕ್ ನ್ಸುಬುಗಾ ಅವರು ಟಿ20 ವಿಶ್ವಕಪ್‌ಗೆ ಪ್ರಕಟಿಸಲಾದ ಯುಗಾಂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಟೂರ್ನಿಯಲ್ಲಿ ಆಡುವ ಅತ್ಯಂತ ಹಿರಿಯ ಕ್ರಿಕೆಟಿಗ ಎಂಬ ಹೆಗ್ಗಳಿಕೆಗೂ ಅವರು ಪಾತ್ರವಾಗಲಿದ್ದಾರೆ.



ಫ್ರಾಂಕ್ ನ್ಸುಬುಗಾ

ಜೂನ್ 2ರಿಂದ ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ನ ಆತಿಥ್ಯದಲ್ಲಿ ನಡೆಯುವ ಟೂರ್ನಿಗೆ ಯುಗಾಂಡ ಕ್ರಿಕೆಟ್ ಸಂಸ್ಥೆಯು ಸೋಮವಾರ 15 ಸದಸ್ಯರ ತಂಡ ಪ್ರಕಟಿಸಿದೆ. ಯುಗಾಂಡ ಇದೇ ಮೊದಲ ಬಾರಿ ಮುಖ್ಯ ಸುತ್ತಿನಲ್ಲಿ ಸ್ಥಾನ ಪಡೆದಿದೆ. ಬ್ರಿಯಾನ್ ಮಸಾಬಾ ತಂಡವನ್ನು ಮುನ್ನಡೆಸಲಿದ್ದಾರೆ.

ರೇಸ್‌ನಲ್ಲಿರಲು ಡೆಲ್ಲಿಗೆ ಜಯ ಅನಿವಾರ್ಯ

ಇಂದು ರಾಜಸ್ಥಾನ ರಾಯಲ್ಸ್ ವಿರುದ್ಧ ಪಂದ್ಯ: ಪಂತ್ ಮೇಲೆ ಹೆಚ್ಚಿನ ನಿರೀಕ್ಷೆ

ನವದೆಹಲಿ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಪ್ಲೇ ಆಫ್ ರೇಸ್‌ನಲ್ಲಿ ಉಳಿಯಬೇಕಾದರೆ ಮಂಗಳವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಗೆಲುವು ಅನಿವಾರ್ಯ. ತಂಡ ಇದಕ್ಕಾಗಿ ರಿಷಭ್ ಪಂತ್ ಅವರಿಂದ ಅಮೋಘ ಆಟ ಮತ್ತು ಜೇಕ್ ಫ್ರೇಸರ್ ಮೆಕ್‌ಗುರ್ಕ್ ಅವರಿಂದ ಬಿರುಸಿನ ಬ್ಯಾಟಿಂಗ್ ನಿರೀಕ್ಷೆಯಲ್ಲಿದೆ.

ಲೀಗ್‌ನಲ್ಲಿ ಕ್ಯಾಪಿಟಲ್ಸ್ ತಂಡದ ಪ್ರದರ್ಶನ ಅಸ್ಥಿರವಾಗಿದೆ. ಆಡಿರುವ 11 ಪಂದ್ಯಗಳಲ್ಲಿ ಐದು ಗೆದ್ದು, ಆರು ಸೋತಿದ್ದು 10 ಪಾಯಿಂಟ್ಸ್ ಮಾತ್ರ ಖಾತೆಯಲ್ಲಿವೆ. ಹೀಗಾಗಿ ಪ್ಲೇ ಆಫ್‌ಗೆ ರೇಸ್‌ನಲ್ಲಿರಲು ಉಳಿದಿರುವ ಮೂರೂ ಪಂದ್ಯಗಳನ್ನು ಗೆಲ್ಲುವುದು ಪಂತ್ ಬಳಗಕ್ಕೆ ಅನಿವಾರ್ಯ. ನಂತರ ಉಳಿದ ಪಂದ್ಯಗಳ ಲೆಕ್ಕಾಚಾರದ ಮೇಲೆ ಅವಕಾಶ ಅವಲಂಬಿಸಿದೆ.

ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ರಾಜಸ್ಥಾನ ರಾಯಲ್ಸ್ ಕ್ರಮವಾಗಿ 11 ಮತ್ತು 10 ಪಂದ್ಯಗಳಿಂದ ತಲಾ 16 ಪಾಯಿಂಟ್ಸ್ ಗಳಿಸಿವೆ. ಚೆನ್ನೈ (11 ಪಂದ್ಯಗಳಿಂದ 12), ಸನ್‌ರೈಸರ್ಸ್ ಹೈದರಾಬಾದ್ (10 ಪಂದ್ಯಗಳಿಂದ 12) ಮತ್ತು ಲಖನೌ ಸೂಪರ್ ಜೈಂಟ್ಸ್ (11 ಪಂದ್ಯಗಳಿಂದ 12) ಕೂಡ 16 ಪಾಯಿಂಟ್ಸ್ ದಾಟುವ ಅವಕಾಶ ಹೊಂದಿವೆ. ಬೌಲರ್‌ಗಳಾದ ಖಲೀಲ್ ಅಹ್ಮದ್, ಇಶಾಂತ್ ಶರ್ಮಾ, ಕುಲದೀಪ್ ಯಾದವ್ ಅವರಿಗೆ ಎದುರಾಳಿ ಬ್ಯಾಟರ್‌ಗಳಾದ ಯಶಸ್ವಿ ಜೈಸ್ವಾಲ್, ಸಂಜು ಸ್ಯಾಮ್ಸನ್, ರಿಯಾನ್ ಪರಾಗ್ ಅವರು ರನ್ ಹೊಳೆ ಹರಿಸದಂತೆ ಕಟ್ಟಿಹಾಕುವ ಸವಾಲು ಇದೆ. ಆದರೆ ಒಂದು ಬದಿಯಲ್ಲಿ ಬೌಂಡರಿ ಬರೇ 60 ಮೀ. ಇರುವುದರಿಂದ ಎದುರಾಳಿಗಳ ಅಬ್ಬರಕ್ಕೆ ಸಂಪೂರ್ಣ ನಿಯಂತ್ರಣ ಕಷ್ಟ. ವಿಶ್ವಾಸದಿಂದ ಇರುವ ರಾಯಲ್ಸ್ ತಂಡ ಇದುವರೆಗೆ ಸೋತಿದ್ದು ಎರಡೇ ಪಂದ್ಯಗಳನ್ನು.



ಜೇಕ್ ಫ್ರೇಸರ್ ಮೆಕ್‌ಗುರ್ಕ್. ಪಿಟಿಐ ಚಿತ್ರ



ಯಶಸ್ವಿ ಜೈಸ್ವಾಲ್ ಎಎಫ್‌ಪಿ ಚಿತ್ರ

ಮೂರು ಅರ್ಧ ಶತಕ ಸಹಿತ 380 ರನ್ ಗಳಿಸಿರುವ ಪಂತ್ ಅವರಿಗೆ, ಈಗ ತಂಡಕ್ಕೆ ಬಿಕ್ಕಟ್ಟಿನ ಸಮಯದಲ್ಲಿ ಆಡಿ ತೋರಿಸುವ ಅವಕಾಶ ಒದಗಿದೆ. ಆದರೆ ರಾಯಲ್ಸ್ ಬೌಲಿಂಗ್ ದುರ್ಬಲವೇನಿಲ್ಲ. ಯಜುವೇಂದ್ರ ಚಾಹಲ್, ಆರ್.ಅಶ್ವಿನ್, ಸಂದೀಪ್ ಶರ್ಮಾ, ಟ್ರೆಂಟ್ ಬೌಲ್ಟ್ ಅವರಿಂದ ವೈವಿಧ್ಯಮಯವಾಗಿದೆ.

ಡೆಲ್ಲಿ ವೇಗಿಗಳು ಉತ್ತಮ ಪ್ರದರ್ಶನ ನೀಡಬೇಕಾಗಿದೆ. ಖಲೀಲ್ ಅವರ ಇಕಾನಮಿ ದರ 9.47 ಆದರೆ, ಮುಕೇಶ್ ಓವರಿಗೆ 11.05 ರನ್ ನೀಡಿದ್ದಾರೆ. ಆ್ಯನ್ರಿಚ್ ನಾಕಿಯಾ ಅವರ ಇಕಾನಮಿ ದರ 13.36. ಆದರೆ ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್ ಮತ್ತು ಅಕ್ಷರ್ ಪಟೇಲ್ ಪರಿಣಾಮಕಾರಿ ಆಗಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30. ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಜಿಯೊ ಸಿನಿಮಾ ಆ್ಯಪ್.

ಟಿ20: ಭಾರತಕ್ಕೆ ಮಣಿದ ಬಾಂಗ್ಲಾ

ಸಿಲೆಟ್, ಬಾಂಗ್ಲಾದೇಶ (ಪಿಟಿಐ): ಮತ್ತೆ ಪ್ರಾಬಲ್ಯ ಮೆರೆದ ಭಾರತದ ವನಿತೆಯರು ಸೋಮವಾರ ನಾಲ್ಕನೇ ಟಿ–20 ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಡಕ್ವರ್ಥ್ ಲೂಯಿಸ್ ನಿಯಮದಡಿ 56 ರನ್‌ಗಳಿಂದ ಮಣಿಸಿದರು. ಈ ಮೂಲಕ ಐದು ಪಂದ್ಯಗಳ ಸರಣಿಯಲ್ಲಿ 4–0 ಮುನ್ನಡೆ ಸಾಧಿಸಿದರು.

ಮಳೆಯಿಂದಾಗಿ ಪಂದ್ಯವನ್ನು 14 ಓವರ್‌ಗಳಿಗೆ ಸೀಮಿತ ಮಾಡಲಾಯಿತು. ಮೊದಲು ಬ್ಯಾಟ್ ಮಾಡಿದ ಭಾರತ ತಂಡವು ನಾಯಕಿ ಹರ್ಮನ್‌ಪ್ರೀತ್ ಕೌರ್ (38) ಅವರ ಬ್ಯಾಟಿಂಗ್ ಬಲದಿಂದ ನಿಗದಿತ ಓವರ್‌ಗಳಲ್ಲಿ 6 ವಿಕೆಟ್‌ಗೆ 122 ರನ್ ಗಳಿಸಿತು.

ಡಕ್‌ವರ್ಥ್ ಲೂಯಿಸ್ ನಿಮಯದಂತೆ ಗೆಲುವಿಗೆ ಬಾಂಗ್ಲಾದೇಶವು 14 ಓವರ್‌ಗಳಲ್ಲಿ 125 ರನ್ ಗಳಿಸಬೇಕಿತ್ತು.

ಭಾರತದ ಬೌಲರ್‌ಗಳ ದಾಳಿಗೆ ಕುಸಿದ ಆತಿಥೇಯ ತಂಡವು 7 ವಿಕೆಟ್‌ಗಳಿಗೆ 68 ರನ್ ಗಳಿಸಲಷ್ಟೇ ಶಕ್ತವಾಯಿತು. ದೀಪ್ತಿ ಶರ್ಮಾ ಮತ್ತು ತಂಡಕ್ಕೆ ಪದಾರ್ಪಣೆ ಮಾಡಿದ 33 ವರ್ಷದ ಆಶಾ ಶೋಭನಾ ತಲಾ ಎರಡು ವಿಕೆಟ್ ಪಡೆದು ಮಿಂಚಿದರು. ಕೊನೆಯ ಪಂದ್ಯ ಇದೇ 9ರಂದು ಸಿಲೆಟ್‌ನಲ್ಲಿ ನಡೆಯಲಿದೆ.

ಸಂಕ್ಷಿಪ್ತ ಸ್ಕೋರ್: ಭಾರತ 14 ಓವರ್‌ಗಳಲ್ಲಿ 6 ವಿಕೆಟ್‌ಗೆ 122 (ಸ್ಮೃತಿ ಮಂದಾನ 22, ದಯಾಳನ್ ಹೇಮಲತಾ 22, ಹರ್ಮನ್‌ಪ್ರೀತ್ ಕೌರ್ 39, ರಿಚಾ ಘೋಷ್ 24; ಮರೂಫಾ ಅಖ್ತರ್ 24ಕ್ಕೆ 2). ಬಾಂಗ್ಲಾದೇಶ 14 ಓವರ್‌ಗಳಲ್ಲಿ 7 ವಿಕೆಟ್‌ಗೆ 68 (ದಿಲಾರಾ ಅಖ್ತರ್; ದೀಪ್ತಿ ಶರ್ಮಾ 13ಕ್ಕೆ 2, ಆಶಾ ಶೋಭನಾ 18ಕ್ಕೆ 2, ಪೂಜಾ ವಸ್ತ್ರಕಾರ್ 15ಕ್ಕೆ 1, ರಾಧಾ ಯಾಧವ್ 12ಕ್ಕೆ 1). **ಫಲಿತಾಂಶ:** ಭಾರತಕ್ಕೆ 56 ರನ್‌ಗಳ ಜಯ (ಡಿಎಲ್‌ಎಸ್ ನಿಯಮದಂತೆ)

ಟೈಗರ್ ಕಪ್: ಚಿರಾಗ್ ಹರ್ಷ ಅಮೋಘ ಶತಕ

ಬೆಂಗಳೂರು: ಚಿರಾಗ್ ಹರ್ಷ ಅವರ ಅಮೋಘ ಶತಕದ ಬಲದಿಂದ ಪಿಇಎಸ್‌ಸಿಎ ತಂಡವು ಟೈಗರ್ ಕಪ್ 16 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಪ್ಯಾಂಥರ್ಸ್ ಕ್ರಿಕೆಟ್ ಅಕಾಡೆಮಿ ವಿರುದ್ಧ 149 ರನ್‌ಗಳ ಸುಲಭ ಜಯ ಸಾಧಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಪಿಇಎಸ್‌ಸಿಎ ತಂಡವು ಚಿರಾಗ್ (144 ರನ್) ಅವರ ಬ್ಯಾಟಿಂಗ್ ಬಲದಿಂದ 30 ಓವರ್‌ಗಳಲ್ಲಿ ನಾಲ್ಕು ವಿಕೆಟ್‌ಗೆ 336 ರನ್ ಗಳಿಸಿತು. ಈ ಬೃಹತ್ ಗುರಿಯನ್ನು ಬೆನ್ನತ್ತಿದ ಪ್ಯಾಂಥರ್ಸ್ ತಂಡವು 30 ಓವರ್‌ಗಳಲ್ಲಿ 6 ವಿಕೆಟ್‌ಗೆ 187 ರನ್ ಗಳಿಸಲಷ್ಟೇ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರ್: ಪಿಇಎಸ್‌ಸಿಎ: 30 ಓವರ್‌ಗಳಲ್ಲಿ 4 ವಿಕೆಟ್‌ಗೆ 336 (ಚಿರಾಗ್ ಹರ್ಷ 144, ಆದಿತ್ಯ 69, ಅಧೃತ್ ಕೆ. 40; ಸಂಚಿತ್ ಎಸ್. 42ಕ್ಕೆ 2). ಪ್ಯಾಂಥರ್ಸ್ ಕ್ರಿಕೆಟ್ ಅಕಾಡೆಮಿ: 30 ಓವರ್‌ಗಳಲ್ಲಿ 6 ವಿಕೆಟ್‌ಗೆ 187 (ನಿರಂತ್ ಎಸ್ 57; ಕ್ರಿಶ್ ಅಯ್ಯರ್ 30ಕ್ಕೆ 3). ಫಲಿತಾಂಶ: ಪಿಇಎಸ್‌ಸಿಎ ತಂಡಕ್ಕೆ 149 ರನ್‌ಗಳ ಗೆಲುವು

ಡಿಜೆಸಿಎ: 30 ಓವರ್‌ಗಳಲ್ಲಿ 9 ವಿಕೆಟ್‌ಗೆ 135 (ಅಧೃತ್ ರಾವ್ 51, ರಿಯಾನ್ ಆರೋನ್ 42, ಶ್ರೀಶ್ ಶ್ರೀಕಾಂತ್ 16ಕ್ಕೆ 2, ಕೌಸ್ತುಭ್ ಗುಪ್ತಾ 31ಕ್ಕೆ 2). ಆರ್‌ಎಕ್ಸ್‌ಸಿಎ 19 ಓವರ್‌ಗಳಲ್ಲಿ 3 ವಿಕೆಟ್‌ಗೆ 139 (ವಿಸ್ಮಯ್ ರಾಜ್ 51). **ಡಿಪಿಎಸ್ ಸೌತ್:** 30 ಓವರ್‌ಗಳಲ್ಲಿ 3 ವಿಕೆಟ್‌ಗೆ 193 (ಶ್ರಮಂತಕ್ 61, ಜಯನ್ ಸಂಯೋಗ್ 52). ಯಂಗ್ಸ್ ಲಯನ್ಸ್: 27 ಓವರ್‌ಗಳಲ್ಲಿ 136 (ಜಯನ್ ಸಂಯೋಗ್ 23ಕ್ಕೆ 3, ಆಕಾಶ್ ಎಸ್. 24ಕ್ಕೆ 2, ಯಶಸ್ ಚಂದ್ರ 30ಕ್ಕೆ 2). **ಸಿಕ್ಸ್ ಕ್ರಿಕೆಟ್ ಅಕಾಡೆಮಿ:** 30 ಓವರ್‌ಗಳಲ್ಲಿ 7 ವಿಕೆಟ್‌ಗೆ 173 (ಉದ್ಗೀತ್ ಎಸ್. ನಂದನ್ 79; ಅಭಯ್ 31ಕ್ಕೆ 2). ಗೋಪಾಲನ್: 30 ಓವರ್‌ಗಳಲ್ಲಿ 6 ವಿಕೆಟ್‌ಗೆ 171 (ಜಿ.ಕೆ. ಸಾಯಿವರುಣ್ 60; ಉದ್ಗೀತ್ ಎಸ್. ನಂದನ್ 27ಕ್ಕೆ 3).

ನಾಸೌನಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ರಿಲೇ ಸ್ಪರ್ಧೆ

ಒಲಿಂಪಿಕ್ಸ್: ಭಾರತ 4x400 ಮೀ. ರಿಲೇ ತಂಡಗಳ ಅರ್ಹತೆ

ನಾಸೌ (ಬಹಾಮಾಸ್), (ಪಿಟಿಐ): ಭಾರತ ಪುರುಷರ ಮತ್ತು ಮಹಿಳಾ 4x400 ಮೀ. ರಿಲೇ ತಂಡಗಳು, ಭಾನುವಾರ ವಿಶ್ವ ಅಥ್ಲೆಟಿಕ್ಸ್ ರಿಲೇ ಕೂಟದಲ್ಲಿ ತಮ್ಮ ವಿಭಾಗದ ಎರಡನೇ ರೌಂಡ್ಸ್ ಹೀಟ್ಸ್‌ನಲ್ಲಿ ಎರಡನೇ ಸ್ಥಾನ ಪಡೆದು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದವು.

ಮಹಿಳಾ ವಿಭಾಗದಲ್ಲಿ ರೂಪಲ್ ಚೌಧರಿ, ಕರ್ನಾಟಕದ ಎಂ.ಆರ್.ಪೂವಮ್ಮ, ಜ್ಯೋತಿಕಾ ಶ್ರೀ ದಂಡಿ ಮತ್ತು ಶುಭಾ ವೆಂಕಟೇಶನ್ ಅವರನ್ನೊಳಗೊಂಡ ತಂಡ 3 ನಿಮಿಷ 29.35 ಸೆಕೆಂಡಗುಳಲ್ಲಿ ಅಂತರ ಕ್ರಮಿಸಿ ಎರಡನೇ ಸ್ಥಾನ ಪಡೆದವು. ಪ್ರಬಲ ಜಮೈಕಾ ತಂಡ (3ನಿ:28.54 ಸೆ.) ಈ ಹೀಟ್ಸ್‌ನಲ್ಲಿ ಅಗ್ರಸ್ಥಾನ ಪಡೆಯಿತು.

ಮುಹಮ್ಮದ್ ಅನಾಸ್ ಯಾಹ್ಯಾ, ಮುಹಮ್ಮದ್ ಅಜ್ಮಲ್, ಅರೋಕ್ಯ ರಾಜೀವ್ ಮತ್ತು ಅಮೋಜ್ ಜಾಕೋಬ್ ಅವರನ್ನೊಳಗೊಂಡ ಪುರುಷರ ತಂಡ ಒಟ್ಟು 3ನಿ.3.23 ಸೆಕೆಂಡುಗಳಲ್ಲಿ ಓಟವನ್ನು ಪೂರೈಸಿತು. ಈ ಹೀಟ್ಸ್‌ನಲ್ಲಿ ಪ್ರಬಲ ಅಮೆರಿಕ ತಂಡ 2ನಿ.59.95 ಸೆ.ಗಳ ಕಾಲಾವಧಿಯೊಡನೆ ಮೊದಲ ಸ್ಥಾನ ಗಳಿಸಿತು.

ಎರಡನೇ ಸುತ್ತಿನ ಮೂರು ಹೀಟ್ಸ್‌ಗಳಲ್ಲಿ ಮೊದಲ ಎರಡು ಸ್ಥಾನ ಗಳಿಸಿದ ತಂಡಗಳಿಗೆ ಅರ್ಹತೆ ಅವಕಾಶ ಕಲ್ಪಿಸಲಾಗಿತ್ತು. ಒಲಿಂಪಿಕ್ಸ್ ಜುಲೈ 26 ರಿಂದ ಆಗಸ್ಟ್ 11 ವರೆಗೆ ನಡೆಯಲಿದೆ. ಆಗಸ್ಟ್ 1 ರಿಂದ ಅಥ್ಲೆಟಿಕ್ಸ್ ಸ್ಪರ್ಧೆಗಳು ನಿಗದಿಯಾಗಿವೆ.

ಈ ಸ್ಪರ್ಧೆಯಲ್ಲಿ ಭಾರತದ ಪುರುಷರ ತಂಡದ ಮೇಲೆಯೇ ಹೆಚ್ಚಿನ ಲಕ್ಷ್ಯವಿದ್ದು, ಮಹಿಳಾ ತಂಡವೂ ಅರ್ಹತೆ ಪಡೆದಿದ್ದು, ಕೆಲಮಟ್ಟಿಗೆ ಅಚ್ಚರಿ ಮೂಡಿಸಿತು. ಪುರುಷರ ತಂಡ 2020ರ ಟೋಕಿಯೊ ಒಲಿಂಪಿಕ್ಸ್ ಮತ್ತು ಅದೇ ವರ್ಷದ ಏಷ್ಯನ್ ಗೇಮ್ಸ್ ಚಿನ್ನ ಗೆಲ್ಲುವ ಹಾದಿಯಲ್ಲಿ ಏಷ್ಯನ್ ದಾಖಲೆ ಮುರಿದ ಕಾರಣ ತಂಡದ ಮೇಲೆ ಸಹಜವಾಗಿ ಹೆಚ್ಚಿನ ನಿರೀಕ್ಷೆಗಳಿದ್ದವು.



ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಭಾರತ ಮಹಿಳೆಯರ 4x400 ರಿಲೇ ತಂಡ. (ಎಡದಿಂದ): ಶುಭಾ ವೆಂಕಟೇಶ್, ಜ್ಯೋತಿಕಾ ದಂಡಿ, ಎಂ.ಆರ್.ಪೂವಮ್ಮ, ರೂಪಲ್ ಚೌಧರಿ –ಪಿಟಿಐ ಚಿತ್ರ

ಭಾರತ ಮಹಿಳಾ ತಂಡ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ವಿಫಲವಾದ ನಂತರ ಮತ್ತೆ ಒಲಿಂಪಿಕ್ಸ್‌ನಲ್ಲಿ ಸ್ಥಾನ ಪಡೆದಿದೆ. ಭಾರತ ಮಹಿಳೆಯರು 1984ರ ಲಾಸ್ ಏಂಜಲಿಸ್ ಗೇಮ್ಸ್‌ನಲ್ಲಿ ಮೊದಲ ಬಾರಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದರು. ಒಟ್ಟಾರೆ ಭಾರತ ಮಹಿಳಾ ರಿಲೇ ತಂಡ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವುದು ಇದು ಎಂಟನೇ ಬಾರಿ.

ರಾಜೇಶ್ ರಮೇಶ್ ಗಾಯಾಳು: ಪುರುಷರ ತಂಡ 4x400 ಮೀ. ರಿಲೇ ಓಟದಲ್ಲಿ ಎರಡನೇ ಸುತ್ತಿನ ಹೀಟ್ಸ್‌ನಲ್ಲಿ ಕೊನೆಯ ಲೆಗ್ ಓಟಗಾರ ಜಾಕೋಬ್ ಕೈಲಿ ಬೇಟನ್ ಸಿಗುವಾಗ ಮೂರನೇ ಸ್ಥಾನದಲ್ಲಿದ್ದತ್ತು. ಆದರೆ ಜಾಕೋಬ್ ಅಮೋಘವಾಗಿ ಓಡಿ ಮೆಕ್ಸಿಕೊದ ಸ್ಪರ್ಧಿಯನ್ನು ಹಿಂದೆಹಾಕಿ ಎರಡನೇ ಸ್ಥಾನದಲ್ಲಿ ಸ್ಪರ್ಧೆ ಮುಗಿಸಿದರು.

ಭಾರತ ತಂಡದ ಓಟಗಾರ ರಾಜೇಶ್ ರಮೇಶ್ ಅವರು 4X400 ಮೀ. ಮಿಶ್ರ ರಿಲೇ ಓಟದ ವೇಳೆ ಸ್ನಾಯು ಸೆಳೆತಕ್ಕೆ ಒಳಗಾದರು. ಇದರಿಂದ ತಂಡ, ಭಾನುವಾರ ನಡೆದ ಮೊದಲ ಸುತ್ತಿನ ಹೀಟ್ಸ್‌ನಿಂದ ಹಿಂದೆ ಸರಿಯಬೇಕಾಯಿತು. ರಮೇಶ್ ಅವರು ಪುರುಷರ ರಿಲೆ ತಂಡದ ಜೊತೆಗೆ ಮಿಶ್ರ ರಿಲೆ ತಂಡದಲ್ಲೂ ಓಡಬೇಕಾಗಿತ್ತು. ರಮೇಶ್ ಬದಲಿಗೆ ಪುರುಷರ ತಂಡದಲ್ಲಿ ಆರೋಕ್ಯ ರಾಜೀವ್ ಮೂರನೇ ಲೆಗ್ ಓಡಿದರು. ಭಾರತ ಪುರುಷರ 4x400 ಮೀ. ರಿಲೇ ತಂಡ ನಾಲ್ಕನೇ ಬಾರಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿದೆ. ಸಿಡ್ನಿ ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿ ಕಣಕ್ಕಿಳಿದಿತ್ತು.

'ಪುನರಾಗಮನ ತಮಾಷೆಯಲ್ಲ'

'ಎರಡು ವರ್ಷಗಳ ನಿಷೇಧದ ನಂತರ ಈ ವಯಸ್ಸಿನಲ್ಲಿ ಪುನರಾಗಮನ ಮಾಡುವುದು ತಮಾಷೆಯ ವಿಷಯವಲ್ಲ. ನಿಷೇಧದಿಂದಾಗಿ ಟೋಕಿಯೊ ಒಲಿಂಪಿಕ್ಸ್ ಅನ್ನು ಕಳೆದುಕೊಂಡೆ. ಎರಡು ಮೂರು ವರ್ಷಗಳಲ್ಲಿ ಏನಾಯಿತು ಎಂಬುದು ನನಗೆ ಮತ್ತು ನನ್ನ ಕುಟುಂಬಕ್ಕೆ ಮಾತ್ರ ಗೊತ್ತು. ಎಲ್ಲರೂ ನಾನು ನಿವೃತ್ತಿಯಾಗುತ್ತೇನೆ ಎಂದು ನಿರೀಕ್ಷಿಸಿದ್ದರು. ಆದರೆ, ನಾನು ಮಾತ್ರ ಪುನರಾಗಮನದ ತವಕದಲ್ಲಿದ್ದೆ. ಅದು ಸಾಧ್ಯವಾಗಿರುವುದಕ್ಕೆ ಖುಷಿಯಾಗಿದ್ದೇನೆ' ಎಂದು ಮುಂದಿನ ತಿಂಗಳು 34ನೇ ವರ್ಷಕ್ಕೆ ಕಾಲಿಡುತ್ತಿರುವ ಪೂವಮ್ಮ ಪಿಟಿಐಗೆ ಪ್ರತಿಕ್ರಿಯಿಸಿದ್ದಾರೆ.

ಡೋಪಿಂಗ್ ಕಾರಣಕ್ಕೆ 2021ರಲ್ಲಿ ಎರಡು ವರ್ಷಗಳ ಕಾಲ ನಿಷೇಧಕ್ಕೆ ಒಳಗಾಗಿದ್ದರು. ಕಳೆದ ವರ್ಷ ಅವರು ಸ್ಪರ್ಧಾ ಕಣಕ್ಕೆ ಮರಳಿದ್ದರು.